ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಸೆಪ್ಟೆಂಬರ್ 02, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 111 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999







# ಸಂಸದ ಪ್ರಜ್ವಲ್ ರೇವಣ್ಣ ಆಯ್ಕೆ ಅಸಿಂಧು

## ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಹೈಕೋರ್ಟ್ ಆದೇಶ



ಬೆಂಗಳೂರು, ಸೆ.1 - ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮೊಮ್ಮಗ ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರ ಆಯ್ಕೆಯನ್ನು ರಾಜ್ಯ ಹೈಕೋರ್ಟ್ ಅಸಿಂಧುಗೊಳಿಸಿ, ಮಹತ್ವದ ಆದೇಶ ಹೊರಡಿಸಿದೆ.

ಜೆಡಿಎಸ್ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿಯುವಾಗ ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿದ್ದು, ಚುನಾವಣಾ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಅವರ ಲೋಕಸಭಾ ಸದಸ್ಯ ಸ್ಥಾನಕ್ಕೆ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಿದೆ.

ಪ್ರಜ್ವಲ್ ಪ್ರತಿಸ್ಪರ್ಧಿಯಾಗಿ ಕಣಕ್ಕಿಳಿದಿದ್ದ ಬಿಜೆಪಿ ಅಭ್ಯರ್ಥಿ ಎ. ಮಂಜು ಹಾಗೂ ಸ್ಥಳೀಯ ಮತದಾರ ಎಂ.ದೇವರಾಜ್‌ಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ವಿಚಾರಣೆ ಕೈಗೆತ್ತಿಕೊಂಡಿದ್ದ ನ್ಯಾಯಮೂರ್ತಿ ಕೆ.ನಟರಾಜನ್ ಅವರ ಏಕಸದಸ್ಯ ಪೀಠ ಈ ಮಹತ್ವದ ತೀರ್ಪು ನೀಡಿದೆ.

ನಾಮಪತ್ರ ಸಲ್ಲಿಸುವಾಗ ಭಾರತೀಯ ಚುನಾವಣಾ ಆಯೋಗವು ಸೂಚಿಸಿದ ಮಾದರಿಯಲ್ಲಿ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಬಹಿರಂಗಪಡಿಸದಿರುವ ಆಧಾರದ ಮೇಲೆ ಪ್ರಜ್ವಲ್ ಅವರ ಆಯ್ಕೆಯನ್ನು ಅರ್ಜಿದಾರರು ಪ್ರಶ್ನಿಸಿದ್ದರು. ಇದು ಭ್ರಷ್ಟ ಆಚರಣೆಗೆ ಸಮಾನವಾಗಿದೆ ಎಂದು ಆಕ್ಷೇಪಿಸಿದ್ದರು.

ಎ. ಮಂಜು ಹಾಲಿ ಜೆಡಿಎಸ್‌ನ ಅರಕಲಗೂಡು ಶಾಸಕರಾಗಿದ್ದಾರೆ. ಅವರು ಬಿಜೆಪಿಯಲ್ಲಿದ್ದಾಗ ಪ್ರಜ್ವಲ್ ರೇವಣ್ಣ ಅವರ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಿದ್ದರು.

ಪ್ರಜ್ವಲ್ ರೇವಣ್ಣ ಅಕ್ರಮ ಎಸಗಿರುವುದರಿಂದ ತಮ್ಮನ್ನು ವಿಜೇತ ಅಭ್ಯರ್ಥಿ ಎಂದು ಘೋಷಿಸುವಂತೆ ಕೋರಿದ್ದ ಮಂಜು ಅವರ ಮನವಿ ಪುರಸ್ಕರಿಸಲು ನ್ಯಾಯಾಲಯ ನಿರಾಕರಿಸಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಪ್ರಜ್ವಲ್ ರೇವಣ್ಣ ಕಣಕ್ಕಿಳಿದು ಮೊದಲ ಪ್ರಯತ್ನದಲ್ಲೇ ಭಾರೀ ಅಂತರದಿಂದ (3ನೇ ಪುಟಕ್ಕೆ)

# ರಾಜ್ಯ ಸರ್ಕಾರದಿಂದಲೇ ವಿಮಾನ ಹಾರಾಟ, ಮದ್ಯ ಮಾರಾಟ ಕೇಂದ್ರ






**ಮುಂದೆ ಹೊಸದಾಗಿ ರಾಜ್ಯದಲ್ಲಿ ಆರಂಭಗೊಳ್ಳುವ ಎಲ್ಲಾ ವಿಮಾನ ನಿಲ್ದಾಣಗಳು ಸರ್ಕಾರದ ಅಧೀನದಲ್ಲೇ ಕಾರ್ಯ**

**ರಾಜ್ಯದಲ್ಲಿ 103 ಬೃಹತ್ ಮದ್ಯದಂಗಡಿಗಳನ್ನು ಎಂಎಸ್‌ಐಎಲ್ ಮೂಲಕ ಪ್ರಾರಂಭಿಸಲು ತೀರ್ಮಾನ**

ಬೆಂಗಳೂರು, ಸೆ.1 - ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರಾಜ್ಯದಲ್ಲಿ ವಿಮಾನ ಹಾರಾಟ ಹಾಗೂ ಮದ್ಯ ಮಾರಾಟ ಕೇಂದ್ರಗಳನ್ನು ರಾಜ್ಯ ಸರ್ಕಾರದ ವತಿಯಿಂದಲೇ ಆರಂಭಿಸಲು ಸಿದ್ಧತೆ ನಡೆಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೃಹತ್, ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಸಚಿವ ಎಂ.ಬಿ.ಪಾಟೀಲ್ ಈ ವಿಷಯ ತಿಳಿಸಿದ್ದಲ್ಲದೆ, ಶೀಘ್ರದಲ್ಲೇ ಈ ಕುರಿತು ಸರ್ಕಾರ ಅಂತಿಮ ತೀರ್ಮಾನ ಕೈಗೊಳ್ಳಲಿದೆ ಎಂದರು.

ಶಿವಮೊಗ್ಗ ವಿಮಾನ ನಿಲ್ದಾಣವನ್ನು ರಾಜ್ಯ ಸರ್ಕಾರವೇ ನಿರ್ವಹಿಸುತ್ತಿದ್ದು, ಇನ್ನು ಮುಂದೆ ಹೊಸದಾಗಿ ರಾಜ್ಯದಲ್ಲಿ ಆರಂಭಗೊಳ್ಳುವ ಎಲ್ಲಾ ವಿಮಾನ ನಿಲ್ದಾಣಗಳು ಸರ್ಕಾರದ ಅಧೀನದಲ್ಲೇ ಕಾರ್ಯ ನಿರ್ವಹಿಸಲಿವೆ.

ಇದರ ಜತೆಗೆ ರಾಜ್ಯದೊಳಗಿನ ಪ್ರಮುಖ ನಗರಗಳಿಗೆ ಸಂಪರ್ಕಿಸಲು ವಿಮಾನ ಹಾರಾಟವನ್ನು ರಾಜ್ಯ ಸರ್ಕಾರವೇ ನಿರ್ವಹಿಸಲಿದೆ. ಕೇಂದ್ರದ ವಿಮಾನಯಾನ ಖಾತೆಯ ಅನುಮತಿ ಪಡೆದು ಮೂರು ವಿಮಾನಗಳನ್ನು ಖರೀದಿ ಮಾಡಿ ಸರ್ಕಾರವೇ ನಡೆಸಲು ಚಿಂತನೆ ನಡೆದಿದೆ.

ಪ್ರತಿ ವಿಮಾನಕ್ಕೆ 200 ಕೋಟಿ ರೂ. ಆಗಲಿದ್ದು, 3 ವಿಮಾನಗಳಿಗೆ 600 ಕೋಟಿ ರೂ. ಆಗಲಿದ್ದು, ಇಷ್ಟು ಹಣ ಸರ್ಕಾರಕ್ಕೆ ಹೊರೆಯಾಗುವುದಿಲ್ಲ.

ಈಗಾಗಲೇ ಕೆಲವು ಖಾಸಗಿ ವಿಮಾನ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿದ್ದು, ಅವರ ಮಾರ್ಗದರ್ಶನ ಪಡೆದುಕೊಳ್ಳಲಾಗಿದೆ. ನಾವು ಎಲ್ಲದಕ್ಕೂ ಇನ್ನೊಬ್ಬರ ಮೇಲೆ ಅವಲಂಬನೆಯಾಗುವ ಬದಲು ನಾವೇ ಇಂತಹ ಸಂಸ್ಥೆಗಳನ್ನು ನಡೆಸುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಯ ಜತೆಗೆ ಸರ್ಕಾರಕ್ಕೆ ಆದಾಯವೂ ಬರಲಿದೆ.

ಮೈಸೂರು, ಶಿವಮೊಗ್ಗ, ಬೆಳಗಾವಿ, ಕಲ್ಬುರ್ಗಿ, ಬೀದರ್, ಬೆಂಗಳೂರು ಕೇಂದ್ರಗಳಿಗೆ ಆಂತರಿಕವಾಗಿ ಸಂಪರ್ಕಿಸಲು ನಮ್ಮ ವಿಮಾನಗಳನ್ನು ಬಳಸಲು ಚಿಂತನೆ ನಡೆದಿದೆ. 2024ರ (3ನೇ ಪುಟಕ್ಕೆ)

## ಈ ಬಾರಿ ಸಿದ್ದೇಶ್ವರ ಸ್ಪರ್ಧೆ ಇಲ್ಲ : ಯತ್ನಾಳ್

ವಿಜಯಪುರ, ಸೆ. 1 – ದಾವಣಗೆರೆ ಸಂಸದ ಜಿ.ಎಂ.ಸಿದ್ದೇಶ್ವರ ಸೇರಿದಂತೆ ಏಳೆಂಟು ಲೋಕಸಭಾ ಸದಸ್ಯರು ಮುಂದಿನ ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಸಾಧ್ಯತೆ ಇಲ್ಲ ಎಂದು ವಿಜಯಪುರ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿದ್ದಾರೆ.

ಶುಕ್ರವಾರ ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2024ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಟಿಕೆಟ್ ಹಂಚಿಕೆಯಲ್ಲಿ ರಾಜ್ಯದ 8 ಕ್ಷೇತ್ರಗಳಲ್ಲಿ ಬದಲಾವಣೆಯಾಗಲಿದೆ. ನನಗಿರುವ ಮಾಹಿತಿಯ ಪ್ರಕಾರ ಬಿಜೆಪಿಯ (3ನೇ ಪುಟಕ್ಕೆ)

## ಜಿಎಸ್ಟಿ ಸಂಗ್ರಹ ಶೇ.11ರಷ್ಟು ಏರಿಕೆ

ನವದೆಹಲಿ, ಸೆ. 1 – ಆಗಸ್ಟ್ ತಿಂಗಳಲ್ಲಿ ಜಿ.ಎಸ್.ಟಿ. ಸಂಗ್ರಹ ಶೇ.11ರಷ್ಟು ಹೆಚ್ಚಾಗಿ 1.59 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಮುಂಬರುವ ಹಬ್ಬದ ದಿನಗಳಲ್ಲಿ ತೆರಿಗೆ ಸಂಗ್ರಹ ಇನ್ನಷ್ಟು ಹೆಚ್ಚಾಗಲಿದೆ ಎಂದು ಆರ್ಥಿಕ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ. ಕಳೆದ ಆಗಸ್ಟ್ ತಿಂಗಳಲ್ಲಿ 1,59,069 ಕೋಟಿ ರೂ.ಗಳ ಜಿ.ಎಸ್.ಟಿ. ಸಂಗ್ರಹವಾಗಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ 1.43 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು.

# ಅವಧಿಗೆ ಮುಂಚೆಯೇ ಲೋಕಸಭಾ ಚುನಾವಣೆ ಸಾಧ್ಯತೆ

**'ಒಂದು ದೇಶ, ಒಂದು ಚುನಾವಣೆ' ಪರಿಶೀಲನೆಗೆ ಮಾಜಿ ರಾಷ್ಟ್ರಪತಿ ಕೋವಿಂದ್ ನೇತೃತ್ವದಲ್ಲಿ ಸಮಿತಿ ರಚನೆ**

**ವಿಶೇಷ ಅಧಿವೇಶನದಲ್ಲಿ ಗುಂಪು ಚಿತ್ರಕ್ಕಾಗಿ ವ್ಯವಸ್ಥೆ; ಇದೇ ಕೊನೆಯ ಅಧಿವೇಶನವಾಗುವ ಸುಳಿವು**

ನವದೆಹಲಿ, ಸೆ. 1 - 'ಒಂದು ದೇಶ, ಒಂದು ಚುನಾವಣೆ' ಸಾಧ್ಯತೆ ಕುರಿತು ಪರಿಶೀಲಿಸಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಸಂಸತ್ತಿನ ವಿಶೇಷ ಅಧಿವೇಶನ ಘೋಷಣೆ ಬೆನ್ನಲ್ಲೇ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಬರುವ ಸೆಪ್ಟೆಂಬರ್ 18ರಿಂದ 22ರ ನಡುವೆ ಐದು ದಿನಗಳ ಅಧಿವೇಶನ ನಡೆಯಲಿದೆ. ಈ ಅಧಿವೇಶನದ ವೇಳೆ ಸಂಸದರು ಗುಂಪು ಚಿತ್ರ ತೆಗೆಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಇದೂ ಸಹ ಸರ್ಕಾರ ಅವಧಿಗೆ ಮುಂಚೆ ಚುನಾವಣೆಗೆ ತೆರಳಬಹುದು ಎಂಬುದರ ಸಂಕೇತ ಎಂದು ಹೇಳಲಾಗುತ್ತಿದೆ.

1967ರವರೆಗೆ ದೇಶದಲ್ಲಿ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಯುತ್ತಿತ್ತು. ಅದೇ ಪದ್ಧತಿಯನ್ನು ಜಾರಿಗೆ ತರುವ ಸಾಧ್ಯತೆ ಬಗ್ಗೆ ಕೋವಿಂದ್ ನೇತೃತ್ವದ ಸಮಿತಿ ಪರಿಶೀಲಿಸಲಿದೆ ಎಂದು ಮೂಲಗಳು ತಿಳಿಸಿವೆ. ಮಾಜಿ ರಾಷ್ಟ್ರಪತಿ ಪರಿಣಿತರ ಜೊತೆ ಹಾಗೂ ವಿವಿಧ ರಾಜಕೀಯ ಪಕ್ಷಗಳ ನಾಯಕರ ಜೊತೆ ಚರ್ಚಿಸಲಿದ್ದಾರೆ ಎಂದೂ ಮೂಲಗಳು ಹೇಳಿವೆ.

ಮುಂಬರುವ ವಿಶೇಷ ಅಧಿವೇಶನದ ಅಜೆಂಡಾ ಏನು ಎಂಬುದನ್ನು ಸರ್ಕಾರ ಇನ್ನೂ ಬಹಿರಂಗ ಪಡಿಸಿಲ್ಲ. ಆದರೆ, ಈ ಅಧಿವೇಶನವೇ 17ನೇ ಲೋಕಸಭೆಯ ಕೊನೆಯ ಅಧಿವೇಶನವಾಗಿರಲಿದೆ ಎಂಬ (3ನೇ ಪುಟಕ್ಕೆ)

# ನಿವ್ವಳ ಶೂನ್ಯ ಎನ್‌ಪಿಎ ದಾವಣಗೆರೆ ಅರ್ಬನ್ ಬ್ಯಾಂಕಿನ ಹೆಗ್ಗಳಿಕೆ




**ಬ್ಯಾಂಕಿನ 62ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಸಂತಸ**

ದಾವಣಗೆರೆ, ಸೆ. 1- ಒಂದು ಬ್ಯಾಂಕಿನ ಸದೃಢತೆಯನ್ನು ಪ್ರತಿಬಿಂಬಿಸುವಂತಹ ಅನುತ್ಪಾದಕ ಆಸ್ತಿ (ಎನ್ ಪಿಎ) ಸತತವಾಗಿ ನಿವ್ವಳ ಶೂನ್ಯ ಹೊಂದಿರುವುದು ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಹೆಗ್ಗಳಿಕೆ ಎಂದು ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಸಂತಸ ವ್ಯಕ್ತಪಡಿಸಿದರು.

ನಗರದ ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಏರ್ಪಾಡಾಗಿದ್ದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 62ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2023, ಮಾರ್ಚ್ ಅಂತ್ಯಕ್ಕೆ ಬ್ಯಾಂಕಿನ ಲಾಭವು 12.01 ಕೋಟಿ ರೂ. ಗಳಿಗೂ ಮೀರಿದ್ದು, ಇದು ಕಳೆದ ವರ್ಷಕ್ಕಿಂತ 1.91 ಕೋಟಿ ರೂ. ಹೆಚ್ಚಾಗಿರುತ್ತದೆ. 493 ಕೋಟಿ ರೂ. ಠೇವಣಿ ಸಂಗ್ರಹವಾಗಿದ್ದು, ಇಲ್ಲಿ ಕಳೆದ ವರ್ಷಕ್ಕಿಂತ 21 ಕೋಟಿ ರೂ. ಹೆಚ್ಚಾಗಿರುತ್ತದೆ. ಷೇರುದಾರರ ವಿವಿಧ ಉದ್ದೇಶಗಳಿಗನುಗುಣವಾಗಿ 364 ಕೋಟಿ ರೂ. ಸಾಲ - ಸೌಲಭ್ಯ ಒದಗಿಸಲಾಗಿದ್ದು, ಹಿಂದಿನ ವರ್ಷಕ್ಕಿಂತ 68 ಕೋಟಿ ರೂ. ಹೆಚ್ಚಾಗಿರುತ್ತದೆ. 582 ಕೋಟಿ ರೂ. ದುಡಿಯುವ ಬಂಡವಾಳವಾಗಿದ್ದು, ಇಲ್ಲೂ ಸಹ 29 ಕೋಟಿ ರೂ.ಗೆ ವೃದ್ಧಿಯಾಗಿದೆ. ಹೀಗೆ ಎಲ್ಲಾ ವಿಚಾರದಲ್ಲೂ ತಮ್ಮ ಬ್ಯಾಂಕ್ ಪ್ರಗತಿ ಸಾಗಿಸುತ್ತಾ ಮುನ್ನಡೆದಿದೆ ಎಂದು ಅವರು ಅಂಕಿ-ಅಂಶಗಳೊಂದಿಗೆ ವಿವರಿಸಿದರು.

**ಲಾಭಾಂಶ ಘೋಷಣೆ** : ಬ್ಯಾಂಕ್ ಪ್ರಗತಿಯಲ್ಲಿದ್ದು ಷೇರುದಾರರಿಗೆ ಶೇ. 20ರಷ್ಟು ಲಾಭಾಂಶ ನೀಡುವಂತೆ ಸದಸ್ಯರು ಮಾಡಿದ ಮನವಿಯನ್ನು ಪ್ರಸ್ತಾಪಿಸಿದ ಬಕ್ಕೇಶಪ್ಪ, ಅಭಿವೃದ್ಧಿಯಾಗಿದೆ ಎಂದಾಕ್ಷಣ ಲಾಭಾಂಶವನ್ನು ಹೆಚ್ಚು ನೀಡಲು ಸಾಧ್ಯವಿಲ್ಲ. ಅದರದ್ದೇ ಆದ ಮಿತಿಗಳಿವೆ. ಈ ಹಿನ್ನೆಲೆಯಲ್ಲಿ ಶೇ. 15ರಂತೆ ಲಾಭಾಂಶ ನೀಡಲು ಆಡಳಿತ ಮಂಡಳಿ ತೀರ್ಮಾನ ಕೈಗೊಂಡಿದೆ ಎಂದು ಷೇರುದಾರರ ಹರ್ಷೋದ್ಗಾರದ ನಡುವೆ ಘೋಷಿಸಿದರು. (3ನೇ ಪುಟಕ್ಕೆ)

## ಶೇ.93ರಷ್ಟು 2 ಸಾವಿರ ರೂ. ನೋಟುಗಳು ವಾಪಸ್

ಮುಂಬೈ, ಸೆ. 1- ಶೇ.93ರಷ್ಟು 2,000 ರೂ.ಗಳ ನೋಟುಗಳು ಚಲಾವಣೆಯಿಂದ ವಾಪಸ್ಸಾಗಿವೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಮೇ 19ರಂದು ರಿಸರ್ವ್ ಬ್ಯಾಂಕ್ ಈ ನೋಟುಗಳನ್ನು ವಾಪಸ್ ಪಡೆಯುವುದಾಗಿ ತಿಳಿಸಿತ್ತು.


ಆಗಸ್ಟ್ 31, 2023ರವರೆಗೆ 3.32 ಲಕ್ಷ ಕೋಟಿ ರೂ. ಮೌಲ್ಯದ 2 ಸಾವಿರ ರೂ. ಮುಖಬೆಲೆಯ ನೋಟುಗಳು ವಾಪಸ್ಸಾಗಿವೆ. ಪ್ರಸಕ್ತ 0.24 ಲಕ್ಷ ಕೋಟಿ ರೂ. ಮೌಲ್ಯದ ನೋಟುಗಳು ಮಾತ್ರ ಚಲಾವಣೆಯಲ್ಲಿವೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಶೇ.87ರಷ್ಟು ಹಣವನ್ನು ಬ್ಯಾಂಕುಗಳಲ್ಲಿ ಠೇವಣಿ ಇಡಲಾಗಿದೆ. ಉಳಿದ ಶೇ.13ರಷ್ಟು ಹಣವನ್ನು ಬೇರೆ ನೋಟುಗಳಿಗೆ ವಿನಿಮಯ ಮಾಡಿಕೊಳ್ಳಲಾಗಿದೆ. ಸೆಪ್ಟೆಂಬರ್ 30ರವರೆಗೆ ಈ ನೋಟುಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ಇದೆ.

## ಅನೂರ್ಜಿತ ಮದುವೆ ಮಕ್ಕಳಿಗೂ ಆಸ್ತಿ

ನವದೆಹಲಿ, ಸೆ. 1 – ಹಿಂದೂ ಉತ್ತರಾಧಿತ್ವ ಕಾಯ್ದೆಯ ಅನ್ವಯ ಅನೂರ್ಜಿತ, ಇಲ್ಲವೇ ಅನೂರ್ಜಿತವಾಗುವ ಮದುವೆಗಳಿಂದ ಜನಿಸಿದ ಮಕ್ಕಳಿಗೆ ತಮ್ಮ ತಂದೆ - ತಾಯಿಯ ಆಸ್ತಿ ಮೇಲೆ ಹಕ್ಕಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ವಿವಾಹೇತರ ಸಂಬಂಧದಿಂದ ಜನಿಸುವ ಮಕ್ಕಳಿಗೆ ಪೂರ್ವಿಕರ ಆಸ್ತಿ ಮೇಲೆ ಹಕ್ಕಿನ ಕುರಿತು 2011ರಲ್ಲಿ ದಾಖಲಾದ ಅರ್ಜಿ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.










# ರೈತರ ವಿದ್ಯುತ್ ಸಮಸ್ಯೆ ಪರಿಹಾರಕ್ಕೆ ಕ್ರಮ : ಶಾಸಕ ಶಾಂತನಗೌಡ



**ಹೊನ್ನಾಳಿ**

ಹೊನ್ನಾಳಿ, ಸೆ.1- ತಾಲ್ಲೂಕಿನ ರೈತರು ಎದುರಿಸುತ್ತಿರುವ ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯೆಗಳನ್ನು ಬೆಸ್ಕಾಂ ಎಂ.ಡಿ. ಮಹಾಂತೇಶ್ ಬೀಳಗಿ ಅವರೊಂದಿಗೆ ಚರ್ಚಿಸಿ ಸಮಸ್ಯೆಗಳ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವುದಾಗಿ ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ತಾಲ್ಲೂಕಿನ ಬಲಮುರಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಜಯೋತ್ಸವ ಮತ್ತು ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಗ್ರಾಮಸ್ಥರ ಮನವಿಯ ಬಗ್ಗೆ ಪ್ರತಿಕ್ರಿಯಿಸಿದ ಶಾಸಕರು, ಶಿವಮೊಗ್ಗದಿಂದ ಆರಂಭವಾಗುವ ತುಂಗಾ ನಾಲೆ ದಡಗಳಲ್ಲಿ ಅಕ್ರಮವಾಗಿ ಐದು ಸಾವಿರ ಪಟ್ಟು ಹೊಂದಿಲ್ಲದಿರುವ ಮನೆಗಳಿವೆ. 500 ರಿಂದ 700 ಅಕ್ರಮ ಪಂಪ್‌ಸೆಟ್‌ಗಳು ನಾಲೆ ಸಂಪರ್ಕದಲ್ಲಿವೆ. ಬಲಮುರಿ ಸೇರಿದಂತೆ, ಇತರೆ ಅಚ್ಚುಕಟ್ಟು ಪ್ರದೇಶಗಳ ಕೊನೆ ಹಳ್ಳಿಗಳಿಗೆ ನೀರು ದೊರೆಯುವುದು ಕಷ್ಟ ಸಾಧ್ಯ. ಮಳೆಯಿಂದಲೇ ಪರಿಹಾರ ಕಂಡುಕೊಳ್ಳಬೇಕಾಗಿದೆ. ನಾಲೆ ಹೂಳು ತೆಗೆಸಲಾಗದ ಕಾರಣ ಬೆಳೆಗೆ ನೀರು ದೊರಕದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿವರಿಸಿದರು.

ಬಲಮುರಿ ಗ್ರಾಮಕ್ಕೆ ಸಮರ್ಪಕವಾಗಿ ತುಂಗಾ ನೀರು ಹರಿಸಲು ಸಾಧ್ಯವಾಗುತ್ತಿಲ್ಲ. ಸಮರ್ಪಕ ಕರೆಂಟ್ ದೊರೆಯದ ಸ್ಥಿತಿಯಲ್ಲಿದ್ದು, ಮಳೆ ಬಾರದೇ ಬರದ ಛಾಯೇ ಆವರಿಸಿದೆ. ಇಂತಹ ಸಂದರ್ಭದಲ್ಲಿ 'ಐರಾವತ ರಥ'ದಲ್ಲಿ ಮೆರವಣಿಗೆ ಮೂಲಕ ಗ್ರಾಮದ ರಸ್ತೆಗಳಲ್ಲಿ ಸುತ್ತಾಡಿದರೆ ಗ್ರಾಮಸ್ಥರು ತಪ್ಪಾಗಿ ತಿಳಿಯುವಂತಾಗಬಾರದು ಎಂದು ಮೆರವಣಿಗೆಗೆ ಶಾಸಕರು ಒಪ್ಪದಾದಾಗ, ಸಂಘಟ ಕರು ಸರಳವಾಗಿ ಸಭೆಯನ್ನು ಮಾಡುವುದಾಗಿ ಶಾಸಕರನ್ನು ಕರೆತಂದು ಸಭೆ ನಡೆಸಿದ ಪ್ರಸಂಗವೂ ನಡೆಯಿತು.

ಬಲಮುರಿ ಕಾಂಗ್ರೆಸ್ ಮುಖಂಡ ಸಂಗಮೇಶ್ ಮಾತನಾಡಿ, ಐರಾವತದ ಮೆರವಣಿಗೆ ಹತ್ತದ ಶಾಂತನಗೌಡರ ಕ್ರಮ ಸ್ವಲ್ಪ ಬೇಸರ ತರಿಸಿದೆ, ಆದರೂ, ಇದಕ್ಕೆ ಮಳೆರಾಯ, ಬರದ ಛಾಯೆ ಕಾರಣವಾಗಿದೆ. ಒಂದೆರಡು ದಿನಗಳಲ್ಲಿ ಮಳೆ ಬಂದರೆ ಮತ್ತೆ ಅದ್ದೂರಿ ಸಭೆ ನಡೆಸಲಿದ್ದೇವೆ ಎಂದರು.

ಸಭೆಯಲ್ಲಿ ಮಾಜಿ ಶಾಸಕ ಡಾ.ಡಿ.ಬಿ.ಗಂಗಪ್ಪ, ಕಾಂಗ್ರೆಸ್ ಮುಖಂಡ ಸಣ್ಣಕ್ಕಿ ಬಸವನಗೌಡ, ಹೆಚ್.ಎ.ಉಮಾಪತಿ, ಹುಣಸಘಟ್ಟ ಗದ್ದಿಗೇಶ್ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಗ್ರಾ.ಪಂ ಸದಸ್ಯೆ ಹಾಲಮ್ಮ ವಹಿಸಿದ್ದರು. ಸದಸ್ಯೆ ಆಶಾ, ಬಲಮುರಿ ಸಿದ್ದಪ್ಪ, ಪ್ರಕಾಶ್, ಶೇಖರಪ್ಪ, ಹನುಮಂತಾಚಾರ್ಯ, ಆನಂದಪ್ಪ, ಸಂಗಮೇಶ್, ಕಡದಕಟ್ಟೆ ಜಗದೀಶ್, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ರಂಜಿತ್ ಜಿ.ಸುಷ್ಮಾ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಬಿ.ವಿಮಲದಾಸ್ ಸೇವಾ ಪುರಸ್ಕಾರ ಸಮಾರಂಭ

ಜಾಗೃತ ಮಹಿಳಾ ಸಂಘ, ಕೌಟುಂಬಿಕ ಸಲಹಾ ಕೇಂದ್ರ ಮತ್ತು ಸ್ವಾಧಾರ ಗೃಹದ ವತಿಯಿಂದ ಬಿ.ವಿಮಲದಾಸ್ ಸೇವಾ ಪುರಸ್ಕಾರ ಸಮಾರಂಭವನ್ನು ಇಂದು ಹಮ್ಮಿಕೊಳ್ಳಲಾಗಿದೆ ಎಂದು ಜಾಗೃತ ಮಹಿಳಾ ಸಂಘದ ಅಧ್ಯಕ್ಷರಾದ ಶ್ರೀಮತಿ ಉಮಾ ವೀರಭದ್ರಪ್ಪ ತಿಳಿಸಿದ್ದಾರೆ.

ಹೊನ್ನಾಳಿ ಜನರಲ್ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಟಿ. ನಾಗರತ್ನ ಅವರಿಗೆ ಸೇವಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ.

ಇಂದು ಬೆಳಿಗ್ಗೆ 11.30 ಗಂಟೆಗೆ ಜಾಗೃತ ಮಹಿಳಾ ಸಂಘದ ಕಚೇರಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರಾದ ವಾಸಂತಿ ಉಪ್ಪಾರ್, ಡಿಆರ್‌ಎಂ ಕಾಲೇಜು ನಿವೃತ್ತ ಪ್ರಾಂಶುಪಾಲರಾದ ಶಕುಂತಲಾ ಗುರುಸಿದ್ದಯ್ಯ, ಎಸ್‌ಎಸ್ ಮೆಡಿಕಲ್ ಕಾಲೇಜು ಉಪ ಪ್ರಾಂಶುಪಾಲರಾದ ಡಾ.ಶಶಿಕಲಾ ಕೃಷ್ಣಮೂರ್ತಿ, ನಿವೃತ್ತ ಉಪನ್ಯಾಸಕರಾದ ಶೋಭಾ ಬಸವರಾಜ್, ಬಸವರಾಜ್ ಅತಿಥಿಗಳಾಗಿ ಆಗಮಿಸಲಿದ್ದಾರೆ .

## ನಗರದಲ್ಲಿ ಇಂದು ಗಂಗಾಮತಸ್ಥರ ಸಭೆ

ಜಿಲ್ಲಾ ಗಂಗಾಮತಸ್ಥರ (ಬೆಸ್ತರ) ಸಂಘದ ಕಾರ್ಯಕಾರಿ ಸಮಿತಿ ಸಭೆಯು ಇಂದು ಬೆಳಿಗ್ಗೆ 11.30ಕ್ಕೆ ಸಂಘದ ಅಧ್ಯಕ್ಷ ಬಿ.ಕೆ.ಮಂಜುನಾಥ ಮಾಗಾನಹಳ್ಳಿ ಅವರ ಅಧ್ಯಕ್ಷತೆಯಲ್ಲಿ ಸಂಘದ ಕಚೇರಿಯಲ್ಲಿ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜೆ. ಉಮೇಶ್ ಶಿರಮಗೊಂಡನಹಳ್ಳಿ ತಿಳಿಸಿದ್ದಾರೆ.

# ಕ್ರೀಡೆ ದೈಹಿಕ, ಮಾನಸಿಕ ಸದೃಢತೆಗೆ ಪೂರಕ : ಶಾಸಕ ಬಿ. ದೇವೇಂದ್ರಪ್ಪ



**ಜಗಳೂರು**

ಜಗಳೂರು, ಸೆ.1- ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಕ್ರೀಡೆಗಳು ಪೂರಕವಾಗಲಿವೆ ಎಂದು ಶಾಸಕ ಬಿ. ದೇವೇಂದ್ರಪ್ಪ ಕಿವಿಮಾತು ಹೇಳಿದರು.

ಪಟ್ಟಣದ ಬೇಡರ ಕಣ್ಣಪ್ಪ ಪ್ರೌಢಶಾಲಾ ಆವರಣದಲ್ಲಿ ಆರ್ ವಿ ಎಸ್ ಶಾಲೆ ವತಿಯಿಂದ ಆಯೋಜಿಸಿದ್ದ ದಕ್ಷಿಣ ವಲಯ ಮಟ್ಟದ ಪ್ರೌಢಶಾಲಾ ಹಂತದ ಕ್ರೀಡಾಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಗಳಲ್ಲಿ ಮೈಮರೆತು ತಲ್ಲೀನರಾದಾಗ ಸಿಗುವ ಮಾನಸಿಕ ನೆಮ್ಮದಿಗೆ ಎಲ್ಲೆಯಿಲ್ಲ. ಜೀವನದಲ್ಲಿ ಹಣ ಗಳಿಕೆ ಮಾಡಬಹುದು. ಆದರೆ ಆರೋಗ್ಯ ಗಳಿಕೆ ಅಸಾಧ್ಯ. ವಿದ್ಯಾರ್ಥಿ ದೆಸೆಯಿಂದ ಕ್ರೀಡಾ ತರಬೇತಿ ಪಡೆದು ಸ್ಪರ್ಧಿಸಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ತಾಲ್ಲೂಕಿನ ವಿದ್ಯಾಸಂಸ್ಥೆಯ ಕೀರ್ತಿ ಪತಾಕಿ ಹಾರಿಸಬೇಕು ಎಂದರು.

ಧರ್ಮ, ಜಾತಿ, ಲಿಂಗ ತಾರತಮ್ಯವಿಲ್ಲದೆ ಕ್ರೀಡಾ ರಂಗದಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ತಮ್ಮ ಜೀವನದಲ್ಲಿ ಆಸಕ್ತಿದಾಯಕ ಕ್ಷೇತ್ರದಿಂದ ಸತತ ಪ್ರಯತ್ನದಿಂದ ಉತ್ತಮ ಸಾಧನೆಗೈಯ್ಯಬೇಕು ಎಂದರು.

ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಬೇರೆ ಯಾವ ಕ್ಷೇತ್ರಕ್ಕಿಂತಲೂ ಕ್ರೀಡಾ ರಂಗ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಲು ಉತ್ತಮ ವೇದಿಕೆಯಾಗಿದೆ, ತೀರ್ಪುಗಾರರು ಪ್ರಾಮಾಣಿಕ ತೀರ್ಪು ನೀಡಬೇಕು. ಕ್ರೀಡಾಪಟುಗಳು ವೈಯಕ್ತಿಕ ದ್ವೇಷ ತೊರೆದು ಸ್ಪರ್ಧಾ ಮನೋಭಾವ ಮೈಗೂಡಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಕ್ರೀಡಾ ಧ್ವಜಾರೋಹಣ ನೆರವೇರಿಸಿ, ಜ್ಯೋತಿ ಸ್ವೀಕರಿಸಿ, ನಂತರ ವಾಲಿಬಾಲ್ ಮಹಿಳಾ ವಿಭಾಗದಿಂದ ಪ್ರಥಮ ಸ್ಥಾನ ಗಳಿಸಿದ ಎನ್. ಎಂ.ಕೆ ಶಾಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ಶೀಲ್ಡ್ ವಿತರಿಸಿದರು.

ಈ ಸಂದರ್ಭದಲ್ಲಿ ಬಿಇಓ ಹಾಲಮೂರ್ತಿ, ಉಪಪ್ರಾಂಶುಪಾಲ ಹಾಲಪ್ಪ, ಕೊಟ್ರೇಶ್, ಆರ್.ವಿ.ಎಸ್ ಸಂಸ್ಥೆ ಕಾರ್ಯದರ್ಶಿ ವೀರೇಶ್, ಅನುದಾನ ರಹಿತ ಖಾಸಗಿ ಶಾಲಾ ಸಂಘದ ಅಧ್ಯಕ್ಷ ಎನ್.ಎಂ. ಲೋಕೇಶ್, ಕಾರ್ಯದರ್ಶಿ ಪಿ.ಎಸ್.ಅರವಿಂದನ್, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಸುರೇಶ್ ರೆಡ್ಡಿ, ಮುಖಂಡರಾದ ಸಿ.ತಿಪ್ಪೇಸ್ವಾಮಿ, ಕಲ್ಲೇಶ್ ರಾಜ್ ಪಟೇಲ್, ಪಲ್ಲಾಗಟ್ಟೆ ಶೇಖರಪ್ಪ, ಪ್ರಕಾಶ್ ರೆಡ್ಡಿ, ಮುಖ್ಯಶಿಕ್ಷಕಿ ವಿಜಯಲಕ್ಷ್ಮಿ ಮತ್ತಿತರರು ಇದ್ದರು.

## ನಗರದಲ್ಲಿ ಇಂದು ಸುಗಮ ಸಂಗೀತ 'ಸೋತು ಗೆದ್ದ ಸಾಧ್ವಿ' ನಾಟಕ ಪ್ರದರ್ಶನ

ಶ್ರೀ ಗುರು ವಾದ್ಯವೃಂದ ಮತ್ತು ಶ್ರೀ ಸಂಚಾರಿ ಕೆ.ಬಿ.ಆರ್. ಡ್ರಾಮಾ ಕಂಪನಿ ಇವರುಗಳ ಸಹಯೋಗದಲ್ಲಿ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ನಾಟಕ ಪ್ರದರ್ಶನ ಮತ್ತು ಸುಗಮ ಸಂಗೀತ ಕಾರ್ಯಕ್ರಮವು ಇಂದು ಸಂಜೆ 6 ಗಂಟೆಗೆ ನಡೆಯಲಿದೆ.

ಸಾನ್ನಿಧ್ಯವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಸಮಾರಂಭವನ್ನು ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿ ಪಿ.ಎನ್. ಲೋಕೇಶ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಡಾ. ಎಂ.ಜಿ.ಈಶ್ವರಪ್ಪ ವಹಿಸುವರು.

ವಿಶೇಷ ಆಹ್ವಾನಿತರಾಗಿ ಹರಿಹರ ತಹಶೀಲ್ದಾರ್ ಪೃಥ್ವಿ ಸಾನಿಕಂ, ಹೊನ್ನಾಳಿ ತಹಶೀಲ್ದಾರ್ ತಿರುಪತಿ ಪಾಟೀಲ್, ವಕೀಲರ ಸಂಘದ ಅಧ್ಯಕ್ಷ ಅರುಣಕುಮಾರ್, ಕಾಂಗ್ರೆಸ್ ಮುಖಂಡ ದಿನೇಶ್ ಶೆಟ್ಟಿ, ಎ. ನಾಗರಾಜ್ ಆಗಮಿಸುವರು.

ಮುಖ್ಯ ಅತಿಥಿಗಳಾಗಿ ಜಗಳೂರು ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ, ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಕೊಟ್ರೇಶ್ ಜಿ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ಪೊಲೀಸ್ ನಿರೀಕ್ಷಕರಾದ ಗುರುಬಸವರಾಜ್, ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಕರಿಬಸಪ್ಪ, ಸಮಾಜ ಸೇವಕ ಬಿ.ಕೆ. ಗಣೇಶ್ ಆಗಮಿಸುವರು. ಪ್ರಾಸ್ತಾವಿಕವಾಗಿ ರಂಗಭೂಮಿಯ ಹಿರಿಯ ಕಲಾವಿದ ಚಿಂದೋಡಿ ಶಂಭುಲಿಂಗಪ್ಪ ಮಾತನಾಡುವರು.

ಸಮಾರಂಭದ ಅಂಗವಾಗಿ ಶ್ರೇಷ್ಠ ಕಲಾವಿದರಿಂದ 'ಸೋತು ಗೆದ್ದ ಸಾಧ್ವಿ' ನಾಟಕ ಪ್ರದರ್ಶನ ನಡೆಯಲಿದೆ ಮತ್ತು ರಾಜೇಶ್ ಮತ್ತು ತಂಡದವರಿಂದ ಸುಗಮ ಸಂಗೀತ ಏರ್ಪಡಿಸಲಾಗಿದೆ.

## ಪಾಕ್ : ದಾಳಿಯಲ್ಲಿ 9 ಸೈನಿಕರ ಸಾವು

ಪೇಷಾವರ, ಸೆ. 1 – ಪಾಕಿಸ್ತಾನದ ನಿಷೇಧಿತ ತೆಹ್ರೀಕ್ ಎ ತಾಲಿಬಾನ್ ಪಾಕಿಸ್ತಾನ್ ಉಗ್ರವಾದಿ ಸಂಘಟನೆಯ ದಾಳಿಯಲ್ಲಿ 9 ಸೈನಿಕರು ಹತರಾಗಿದ್ದಾರೆ ಹಾಗೂ ಐವರು ಗಾಯಗೊಂಡಿದ್ದಾರೆ.

ಖೈಬರ್ ಪಖ್ತುಂಖ್ವ ಪ್ರಾಂತ್ಯದ ಬನ್ನು ಜಿಲ್ಲೆಯಲ್ಲಿ ಬೈಕ್ ಮೇಲೆ ಬಂದ ಬಾಂಬರ್ ದಾಳಿ ನಡೆಸಿರುವುದಾಗಿ ಸೈನ್ಯದ ವಕ್ತಾರರು ಹೇಳಿದ್ದಾರೆ.ಬಾಂಬರ್ ತನ್ನ ಬೈಕ್ ಅನ್ನು ಸೈನಿಕರ ವಾಹನಕ್ಕೆ ನುಗ್ಗಿಸಿದ್ದಾನೆ. ನಿಷೇಧಿತ ತಾಲಿಬಾನ್ ಸಂಘಟನೆಯು ದಾಳಿಯ ಹೊಣೆ ಹೊತ್ತುಕೊಂಡಿದೆ. ಇತ್ತೀಚಿನ ದಿನಗಳಲ್ಲಿ ತಾಲಿಬಾನ್ ಸಂಘಟನೆಯು ಪಾಕಿಸ್ತಾನದಲ್ಲಿ ನಡೆಸುತ್ತಿರುವ ದಾಳಿ ಹೆಚ್ಚಾಗುತ್ತಿದೆ. ಕಳೆದ ತಿಂಗಳು ನಡೆದ ದಾಳಿಯಲ್ಲಿ ಇಬ್ಬರು ಪೊಲೀಸರು ಸಾವನ್ನಪ್ಪಿದ್ದರು.

# ಕಾಂಗ್ರೆಸ್ ಸೇರುತ್ತೇನೆಂದು ಎಲ್ಲೂ ಹೇಳಿಲ್ಲ, ಬಿಜೆಪಿ ಪ್ರಬಲ ಆಕಾಂಕ್ಷಿ

ಹೊನ್ನಾಳಿ, ಸೆ. 1- ನಾನು ಕಾಂಗ್ರೆಸ್ ಸೇರುತ್ತೇನೆಂದು ಎಲ್ಲೂ ಹೇಳಿಲ್ಲ. ಅರ್ಜಿನೂ ಹಾಕಿಲ್ಲ. ಲೋಕಸಭೆ ಚುನಾವಣೆಗೆ ಬಿಜೆಪಿಯಿಂದ ಪ್ರಬಲ ಆಕಾಂಕ್ಷಿ ಎಂದು ಹೇಳಿದ್ದೇನೆ, ನಾನು ಬಿಜೆಪಿ ಬಿಡುವ ಪ್ರಶ್ನೆಯೇ ಇಲ್ಲ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ಕೇಂದ್ರ ಸರ್ಕಾರ ಉಜ್ವಲ ಯೋಜನೆಯಡಿ 400 ರೂ. ಸಬ್ಸಿಡಿ ಹಾಗೂ ಸಿಲಿಂಡರ್ ಬೆಲೆ 200 ರೂ. ಕಡಿಮೆ ಮಾಡಿದ್ದು, ಈ ಬಗ್ಗೆ ಜನರಿಗೆ ಜಾಗೃತಿ ಮೂಡಿಸಿ ಅವರು ಮಾತನಾಡಿದರು.

ಚುನಾವಣೆಯಲ್ಲಿ ಸೋಲು-ಗೆಲುವು ಶಾಶ್ವತ ಅಲ್ಲ. ನಾವು ಏನು ಕೆಲಸ ಮಾಡಿದ್ದೇವೋ ಅದು ಶಾಶ್ವತ. ಜಾತ್ಯತೀತ ವ್ಯಕ್ತಿ ನಾನೇನು ಹೀನಾಯವಾಗಿ ಸೋತಿಲ್ಲ. 75 ಸಾವಿರ ಜನರು ನನಗೆ ಮತ ಹಾಕಿದ್ದು, ಈಗಲೂ ನಾನು ಅವಳಿ ತಾಲ್ಲೂಕಿನಾದ್ಯಂತ ಪ್ರವಾಸ ಮಾಡುತ್ತಿದ್ದು, ಜನರು ನನ್ನನ್ನು ಪ್ರತಿ ಗ್ರಾಮದಲ್ಲೂ ಆತ್ಮೀಯವಾಗಿ ಬರಮಾಡಿಕೊಳ್ಳುತ್ತಿದ್ದಾರೆಂದರು.

**ಸಿಎಂ, ಡಿಸಿಎಂ ಭೇಟಿ ಮಾಡೋದು ತಪ್ಪಾ..?**

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣಭೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಕೃಷಿ ಸಚಿವ ಚೆಲುವರಾಯ ಸ್ವಾಮಿ ಅವರನ್ನು ಭೇಟಿ ಮಾಡಿದ್ದು, ಹೊನ್ನಾಳಿ- ನ್ಯಾಮತಿ ಅವಳಿ ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕು ಎಂದು ಘೋಷಿಸುವಂತೆ ಮನವಿ ಮಾಡಿದ್ದೇನೆ, ಇದು ತಪ್ಪಾ? ಎಂದು ಪ್ರಶ್ನಿಸಿದ್ದಾರೆ.

ಹೊನ್ನಾಳಿಯಲ್ಲಿ ಕೃಷಿ ಮೇಳ, ಸೇವಾಲಾಲ್ ಜಯಂತಿಗೆ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರನ್ನು ಕರೆದಿದ್ದು ನಾನು, ನನ್ನ ಮಾತಿಗೆ ಬೆಲೆ ಕೊಟ್ಟು ಅವರು ಬಂದಿದ್ದರು, ರಾಜಕೀಯ ಹೊರತು ಪಡಿಸಿ ಅವರ ನನ್ನ ಮಧ್ಯೆ ಸ್ನೇಹವಿದೆ. ಹಾಗಾಗಿ ಅವರನ್ನು ಭೇಟಿ ಮಾಡಿ ಅವಳಿ ತಾಲ್ಲೂಕುಗಳನ್ನು ಬರ ಪಟ್ಟಿಗೆ ಸೇರಿಸುವಂತೆ ಮನವಿ ಮಾಡಿದ್ದೇನೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅವಶ್ಯಕತೆ ಇಲ್ಲಾ ಎಂದರು.



**ನನಗೆ ಬಿಜೆಪಿ ಎಲ್ಲವನ್ನೂ ಕೊಟ್ಟಿದ್ದು, ಪಕ್ಷ ನನಗೆ ತಾಯಿ ಇದ್ದಂತೆ. ಯಡಿಯೂರಪ್ಪನವರು ನನಗೆ ನಾಯಕರು ಎಂದ ರೇಣುಕಾಚಾರ್ಯ, ನಾನು ಮೂರು ಬಾರಿ ಶಾಸಕನಾಗಿ, ಸಚಿವನಾಗಿ ಕೆಲಸ ಮಾಡಿದ್ದು, ಈ ಬಾರಿ ಸೋತಿದ್ದು, ನಾನು ಜನಾದೇಶಕ್ಕೆ ತಲೆ ಬಾಗುತ್ತೇನೆ. ಹಾಗಂತ ನಾನು ಕಾಂಗ್ರೆಸ್ ಸೇರುವುದಿಲ್ಲ. ಬಿಜೆಪಿಯಲ್ಲೇ ಇರುತ್ತೇನೆಂದು ಹತ್ತಾರು ಬಾರಿ ಹೇಳಿದ್ದೇನೆ. ಈಗಲೂ ಹೇಳುತ್ತಿದ್ದೇನೆ ಬಿಜೆಪಿ ಬಿಡುವ ಮಾತೇ ಇಲ್ಲ.**

**- ಎಂ.ಪಿ.ರೇಣುಕಾಚಾರ್ಯ, ಮಾಜಿ ಸಚಿವ**

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿ ಅವಳಿ ತಾಲ್ಲೂಕುಗಳನ್ನು ಬರ ಪಟ್ಟಿಗೆ ಸೇರಿಸುವಂತೆ ಶಿಫಾರಸ್ಸು ಮಾಡುವಂತೆ ಮನವಿ ಮಾಡಿದ್ದೇನೆ, ಅಷ್ಟೇ ಅಲ್ಲದೇ ಅವರೇ ನಾನು ಬಿಜೆಪಿಯಿಂದ ಲೋಕಸಭೆಗೆ ರೇಣುಕಾಚಾರ್ಯ ಪ್ರಬಲ ಆಕಾಂಕ್ಷಿ ಎಂದು ಹೇಳಿದ್ದಾರೆಂದರು.

ಕೋವಿಡ್ ಸಂದರ್ಭದಲ್ಲಿ ನನ್ನ ಕರ್ತವ್ಯ ನಾನು ಮಾಡಿದ್ದೇನೆ. ಆಗ ಸ್ವತಃ ಹಿರಿಯರಾದ ಶಾಮನೂರು ಶಿವಶಂಕರಪ್ಪ, ಎಸ್.ಎಸ್.ಮಲ್ಲಿಕಾರ್ಜುನ್ ಅವರು ನನ್ನ ಕೆಲಸಕ್ಕೆ ಪ್ರಶಂಸೆ ವ್ಯಕ್ತಪಡಿಸಿದ್ದರು. ಶಾಮನೂರು ಶಿವಶಂಕರಪ್ಪನವರ ಹುಟ್ಟುಹಬ್ಬಕ್ಕೂ ಭೇಟಿ ನೀಡಿ ಶುಭ ಕೋರಿದ್ದೇನೆಂದರು.

## ಆನೆಕೊಂಡ ಬಸವೇಶ್ವರ ಜಾತ್ರೆ : ಐಗೂರಿನಲ್ಲಿ ನಾಳೆ ಟಗರಿನ ಕಾಳಗ

ದಾವಣಗೆರೆ, ಸೆ.1- ಆನೆಕೊಂಡ ಬಸವೇಶ್ವರ ಜಾತ್ರೆ ಮಹೋತ್ಸವದ ಅಂಗವಾಗಿ ಬಂಬೂ ಬಜಾರ್ ಎಲ್.ಬಿ.ಎಸ್ ನಗರದ ಫ್ರೆಂಡ್ಸ್ ಗ್ರೂಪ್ ಆಶ್ರಯದಲ್ಲಿ ದ್ವಿತೀಯ ಬಾರಿಗೆ ರಾಜ್ಯಮಟ್ಟದ ಟಗರಿನ ಕಾಳಗ ಬಸಾಪುರ ರಸ್ತೆಯ ಐಗೂರಿನಲ್ಲಿ ನಾಡಿದ್ದು ದಿನಾಂಕ 3 ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ. ಈ ಟಗರಿನ ಕಾಳಗದಲ್ಲಿ ಮರಿಕುರಿ ಹಾಗೂ 2 ,4 ಮತ್ತು 6, 8 ಹಲ್ಲಿನ ಕುರಿ ಮರಿಗಳು ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸಿ : 7899225138.

## ಕುರಿ, ಮೇಕೆ, ಕೋಳಿ ಸಾಕಾಣಿಕೆ ತರಬೇತಿ

ದಾವಣಗೆರೆ, ಸೆ. 1 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 5 ಮತ್ತು 6 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಹಾಗೂ 7 ಮತ್ತು 8 ರಂದು ಕೋಳಿ ಸಾಕಾಣಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

# ಚನ್ನಗಿರಿ ತಾಲ್ಲೂಕು ಕಸಾಪ ಕಾರ್ಯ ಶ್ಲಾಘನೀಯ

## ದತ್ತಿ ಕಾರ್ಯಕ್ರಮ, ಶ್ರಾವಣ ಕವಿ ಗೋಷ್ಠಿ ಕಾರ್ಯಕ್ರಮದಲ್ಲಿ ಸಿ.ವಿ.ತಿರುಮಲರಾವ್




ಚನ್ನಗಿರಿ, ಸೆ. 1 - ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಶ್ರಾವಣ ಮಾಸದ ಅಂಗವಾಗಿ ಕವಿಗೋಷ್ಠಿ ಕಾರ್ಯಕ್ರಮವನ್ನು ಆಯೋಜಿಸಿರುವುದು ಶ್ಲಾಘನೀಯ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕ ಸಿ.ವಿ. ತಿರುಮಲರಾವ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ನಿವೃತ್ತ ನೌಕರರ ಭವನದಲ್ಲಿ ಶುಕ್ರವಾರ ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಗಂಗಾ ಪ್ಯಾರಾ ಮೆಡಿಕಲ್ ಕಾಲೇಜಿನ ಸಹಯೋಗದಲ್ಲಿ ಇಂದು ಆಯೋಜಿಸಿದ್ದ ದತ್ತಿ ಕಾರ್ಯಕ್ರಮ ಹಾಗೂ ಶ್ರಾವಣ ಕವಿ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿ, ಸ್ಥಳೀಯ ಉದಯೋನ್ಮುಖ ಕವಿಗಳನ್ನು ಬಳಸಿಕೊಳ್ಳುವುದರ ಜೊತೆಗೆ ಕಾಲೇಜಿನ ವಿದ್ಯಾರ್ಥಿಗಳಿಂದ ನಾಡಿನ ಪ್ರಸಿದ್ಧ ಕವಿಗಳ ಕವನ ವಾಚನ ಮಾಡಿಸುತ್ತಿರುವುದು ಸ್ವಾಗತಾರ್ಹ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದ ಕಸಾಪ ಅಧ್ಯಕ್ಷ ಎಲ್.ಜಿ. ಮಧುಕುಮಾರ್, ಕಾವ್ಯಗಳು ಸಮಕಾಲೀನ ಸಾಮಾಜಿಕ ಸಮಸ್ಯೆಗಳಿಗೆ ಧ್ವನಿಯಾಗುವುದರ ಜೊತೆಗೆ ಸಾಮಾಜಿಕ ಕಳಕಳಿ ಮತ್ತು ಸಾಂಸ್ಕೃತಿಕ ಪ್ರಜ್ಞೆಗಳನ್ನು ಹೊಂದಬೇಕು ಎಂದರು.

ಕವಿಗಳಾದ ನಾಗೇಶನಾಯ್ಕ್, ಎಂ. ಅಣ್ಣೋಜಿರಾವ್ ಪವಾರ್, ಹಟ್ಟಿ ಮಂಜುನಾಥ್, ಕಶ್ಯಪ್ ಚನ್ನಗಿರಿ, ಎಂ.ಆರ್. ಲೋಕೇಶ್ವರಯ್ಯ ಸ್ವರಚಿತ ಕವಿತೆಗಳನ್ನು ಹಾಡಿದರು. ಕಲಾವಿದರಾದ ಸಿದ್ದೇಶ್ ಹಿರೇಮಠ ಕನ್ನಡ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ನಿಕಟಪೂರ್ವ ಕಸಾಪ ಅಧ್ಯಕ್ಷ ಎಂ.ಯು. ಚನ್ನಬಸಪ್ಪ, ನಿವೃತ್ತ ನೌಕರರ ಸಂಘದ ಕಾರ್ಯದರ್ಶಿ ಜಿ.ಚಿನ್ನಸ್ವಾಮಿ, ಕಸಾಪ ಪದಾಧಿಕಾರಿಗಳಾದ ಎಂ.ಎಸ್.ಬಸವನಗೌಡ, ಬಿ.ಈ.ಸಿದ್ದಪ್ಪ, ಮಾದೇನಹಳ್ಳಿ ಓಂಕಾರಮೂರ್ತಿ ಮತ್ತಿತರರು ಇದ್ದರು.




**ಭಾರತವು ನಾಳೆ ಪ್ರಪ್ರಥಮ ಸೂರ್ಯನ ಅಧ್ಯಯನಕ್ಕೆ ರಾಕೆಟ್‌ನ್ನು ಆಂಧ್ರಪ್ರದೇಶದ ಶ್ರೀಹರಿಕೋಟಾದಿಂದ ಎಲ್1 ಉಡಾವಣೆ ಮಾಡಲಿದ್ದು, ಈ ರಾಕೆಟ್ ಉಡಾವಣೆ ಸಂದರ್ಭದ ಚಿತ್ರ. - ಶಾಂತಯ್ಯ ಪರಡಿಮಠ್**


## ಸವಿನೆನಪು



**ದಿ|| ಹರಿಯಪ್ಪರ ಮಂಜುನಾಥ್**

ಕಕ್ಕರಗೊಳ್ಳ. (ಮರಣ : 2.09.2007)

ನೀವು ನಮ್ಮನ್ನಗಲಿ ಹದಿನಾರು ವರ್ಷಗಳಾದವು.

ಸದಾ ನಿಮ್ಮ ನೆನಪಿನಲ್ಲಿರುವ...

**ಹರಿಯಪ್ಪರ ರೇವಣಸಿದ್ದಪ್ಪ, ಮಕ್ಕಳು ಮತ್ತು ಮೊಮ್ಮಕ್ಕಳು, ಗೆಳೆಯರ ಬಳಗ, ಕಕ್ಕರಗೊಳ್ಳ.**

## ಡಯಟ್ ನಿವೃತ್ತ ಉಪನ್ಯಾಸಕ ಆಂಜನೇಯ ಮೂರ್ತಿ ನಿಧನ



ದಾವಣಗೆರೆ, #783/A4, ಜಯನಗರ 'ಬಿ' ಬ್ಲಾಕ್, ಭಗೀರಥ ಸರ್ಕಲ್ ಹತ್ತಿರದ ವಾಸಿ, ಡಯಟ್ ನಿವೃತ್ತ ಉಪನ್ಯಾಸಕ **ಆಂಜನೇಯ ಮೂರ್ತಿ ಜಿ.ಆರ್.** ಇವರು ದಿನಾಂಕ 1.09.2023ರ ಶುಕ್ರವಾರ ಮಧ್ಯಾಹ್ನ 2.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 71 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಓರ್ವ ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 02.09.2023ರ ಶನಿವಾರ ಸಾಯಂಕಾಲ 3.30ಕ್ಕೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಸಾಣೆಕೆರೆ ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ವಾಸು : 7204645985**

## ಸವಿನೆನಪು



**ಲಿಂ|| ಮೂರ್ಕಲ್ ಬಸವರಾಜಪ್ಪನವರು**

ನಿವೃತ್ತ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಕೆಇಬಿ.

**ಲಿಂಗೈಕ್ಯ : 02.11.1987**



**ಲಿಂ|| ಶ್ರೀಮತಿ ಮೂರ್ಕಲ್ ಸುಮಂಗಳಮ್ಮ ಬಸವರಾಜಪ್ಪನವರು (ಕರಬಸಮ್ಮ)**

**ಲಿಂಗೈಕ್ಯ : 02.09.2012**

ನೀವು ನಮ್ಮನ್ನಗಲಿ ವರ್ಷಗಳೇ ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿರುವ

ಮಕ್ಕಳಾದ : **ಶ್ರೀಮತಿ ಹೇಮಲತಾ ಲಿಂ|| ಎಂ.ಬಿ. ಕೊಟ್ರೇಶ್ವರ,** Rtd ASK, KSRTC, ಡಿಪೋ, ದಾವಣಗೆರೆ.

**ಶ್ರೀಮತಿ ಮಂಗಳಗೌರಿ ಲಿಂ|| ಎಂ.ಬಿ. ಶಿವಪ್ರಕಾಶ್,** Rtd Asst. Manager, KSFCSC Ltd., Shivamogga.

**ಶ್ರೀಮತಿ, ಶ್ರೀ ಎಂ.ಬಿ. ವೀರಭದ್ರಸ್ವಾಮಿ,** ನಿವೃತ್ತ AEE, ಅಪ್ಪರ್ ಭದ್ರಾ ಉಪ ವಿಭಾಗ, ನಂ. 18, ಚಿತ್ರದುರ್ಗ.

**ಶ್ರೀಮತಿ, ಶ್ರೀ ಎಂ.ಬಿ. ಮಂಜುನಾಥ್,** AEE, ನಂ.3 ಹೇಮಾವತಿ ನಾಲಾ ತನಿಖಾ ಉಪವಿಭಾಗ ಹೆಬ್ಬೂರು.

**ಹಾಗೂ ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ದಾವಣಗೆರೆ. ಮೊ : 94483-94667**


# ಸಾರ್ವಜನಿಕ ಗಣೇಶೋತ್ಸವ : ನಾಳೆ ಹಂದರ ಕಂಬ ಪೂಜೆ



**ಹರಿಹರ**

ಹರಿಹರ, ಸೆ. 1 - ನಗರದಲ್ಲಿ ಸಾರ್ವಜನಿಕ ಗಣೇಶ ಮಹೋತ್ಸವ ಸಮಿತಿಯ ವತಿಯಿಂದ ಗಾಂಧಿ ಮೈದಾನದಲ್ಲಿ ಶ್ರೀ ಗಣೇಶ ಮಹೋತ್ಸವವನ್ನು ಇದೇ ದಿನಾಂಕ 18 ರಂದು ಆಚರಿಸಲಾಗುತ್ತದೆ ಎಂದು ಸಮಿತಿಯ ಅಧ್ಯಕ್ಷ ಕೆ.ಜಿ. ಸಿದ್ದೇಶ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಮೂರ್ತಿ ಪ್ರತಿಷ್ಠಾಪನೆಗಾಗಿ ನಾಡಿದ್ದು ದಿನಾಂಕ 3 ರ ಭಾನುವಾರ ಬೆಳಗ್ಗೆ 10 ಗಂಟೆಗೆ ಹಂದರ ಕಂಬದ ಪೂಜೆಯನ್ನು ಏರ್ಪಡಿಸಲಾಗಿದೆ ಎಂದವರು ತಿಳಿಸಿದರು.

ಸಮಿತಿಯ ಗೌರವಾಧ್ಯಕ್ಷರಾಗಿ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಎಸ್. ರಾಮಪ್ಪ , ನಂದಿಗಾವಿ ಶ್ರೀನಿವಾಸ್ ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಪೂರ್ ಉಪಾಧ್ಯಕ್ಷರಾಗಿ ಎಲ್ಲಾ ನಗರಸಭೆ ಸದಸ್ಯರು, ಪ್ರಧಾನ ಕಾರ್ಯದರ್ಶಿಯಾಗಿ ಸಂತೋಷ ನೋಟದರ್, ಕಿರಣ್ ಭೂತೆ, ಪ್ರವೀಣ್ ಕಾರ್ಯದರ್ಶಿಯಾಗಿ ಹಾರನಹಳ್ಳಿ ಮಂಜುನಾಥ್, ಎಂ. ಚಿದಾನಂದ ಕಂಚಿಕೇರಿ, ವಿಜಯಕುಮಾರ್ ಖಜಾಂಚಿಯಾಗಿ ಮಂಜುನಾಥ್ ಸೇರಿದಂತೆ ಸಮಿತಿಯ ಪದಾಧಿಕಾರಿಗಳ ತಂಡವನ್ನು ರಚಿಸಲಾಗಿದೆ.

ಈ ಬಾರಿ ಗಣೇಶೋತ್ಸವ ಆಚರಣೆ ವೇಳೆ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುವುದರ ಬದಲಾಗಿ, ಚಂದ್ರಯಾನ - 3 ಸಾಧನೆ ಪ್ರದರ್ಶಿಸಲಾಗುವುದು. ಮಹತ್ವದ್ದ ವಿಚಾರಗಳನ್ನು ಸಾರ್ವಜನಿಕರಿಗೆ ಮತ್ತು ಶಾಲಾ ಮಕ್ಕಳಿಗೆ ತಿಳಿಸುವ ದೃಷ್ಟಿಯಿಂದ ವಸ್ತು ಪ್ರದರ್ಶನ ಆಯೋಜಿಸಲಾಗುವುದು ಎಂದು ಸಿದ್ದೇಶ್ ಹೇಳಿದರು.

ಸುಮಾರು 13 ದಿನಗಳ ಕಾಲ ಪ್ರತಿಷ್ಠಾಪನೆ ಮಾಡುವ ಚಿಂತನೆಯ ಹೊಂದಿದ್ದು, ಅಗತ್ಯವಾದಲ್ಲಿ ಅವಧಿ ವಿಸ್ತರಿಸಲಾಗುವುದು. ವೀಕ್ಷಣೆಗೆ ಯಾವುದೇ ಶುಲ್ಕ ಇಲ್ಲ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಸಮಿತಿಯ ಮುಖ್ಯಸ್ಥರಾದ ಸಂತೋಷ ನೋಟದರ್, ಮಂಜುನಾಥ್, ಪ್ರವೀಣ್ ಪವಾರ್, ಎಂ. ಚಿದಾನಂದ ಕಂಚಿಕೇರಿ, ಜಿ.ವಿ. ಪ್ರವೀಣ್, ರಮೇಶ್, ವಿಜಯಕುಮಾರ್, ಅರುಣ್, ನಾರಾಯಣ್ ಮತ್ತಿತರರು ಹಾಜರಿದ್ದರು.

## ನಗರದಲ್ಲಿ ಇಂದು ಸಂಸದರ ಜನಸಂಪರ್ಕ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಮಧ್ಯಾಹ್ನ 12 ರಿಂದ 2 ರವರೆಗೆ ಲೋಕೋಪಯೋಗಿ ಇಲಾಖೆಯ ಸಂಕೀರ್ಣದಲ್ಲಿರುವ ತಮ್ಮ ಜನಸಂಪರ್ಕ ಕಛೇರಿಯಲ್ಲಿ ಸಾರ್ವಜನಿಕರನ್ನು ಭೇಟಿಯಾಗಲಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಸೀಟು ಹಂಚಿಕೆಗಾಗಿ ಸಮನ್ವಯ ಸಮಿತಿ ರಚನೆ

## ಮೂರನೇ ಐಎನ್‌ಡಿಐಎ ಸಭೆಯಲ್ಲಿ ನಿರ್ಧಾರ

ಮುಂಬೈ, ಸೆ. 1 – ಎಷ್ಟು ಸಾಧ್ಯವೋ ಅಷ್ಟು ಕಡೆಗಳಲ್ಲಿ ಜೊತೆಯಾಗಿ ಲೋಕಸಭಾ ಚುನಾವಣೆ ಎದುರಿಸಲು ಹಾಗೂ ಕೊಡು ಕೊಳ್ಳುವಿಕೆಯ ಮೂಲಕ ಸೀಟು ಹಂಚಿಕೊಳ್ಳಲು ಪ್ರತಿಪಕ್ಷಗಳ ಕೂಟವಾದ ಐ.ಎನ್.ಡಿ.ಐ.ಎ. ನಿರ್ಧರಿಸಿದೆ.

ಮೈತ್ರಿ ಕುರಿತು ನಿರ್ಧರಿಸಲು ಹಾಗೂ ಸೀಟು ಹಂಚಿಕೊಳ್ಳಲು 14 ಸದಸ್ಯರ ಸಮನ್ವಯ ಸಮಿತಿಯೊಂದನ್ನು ರಚಿಸಲೂ ಸಹ ವಿಪಕ್ಷಗಳು ನಿರ್ಧರಿಸಿವೆ. ಸೆಪ್ಟೆಂಬರ್ ಅಂತ್ಯದ ವೇಳೆಗೆ ಸೀಟು ಹಂಚಿಕೆ ಸೂತ್ರ ಸಿದ್ಧಪಡಿಸಬೇಕು. ಈ ಬಗ್ಗೆ ನಾಯಕರ ನಡುವೆ ಅನೌಪಚಾರಿಕ ಚರ್ಚೆಗಳು ನಡೆಯಬೇಕು ಎಂದೂ ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಐ.ಎನ್.ಡಿ.ಐ.ಎ. (ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲೈಯನ್ಸ್)ನ 28 ರಾಜಕೀಯ ಪಕ್ಷಗಳ 63 ಪ್ರತಿನಿಧಿಗಳು ಮುಂಬೈನ ಗ್ರಾಂಡ್ ಹಯಾತ್ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದರು. 14 ಸದಸ್ಯರ ಸಮನ್ವಯ ಸಮಿತಿಯಲ್ಲಿ ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್, ಡಿಎಂಕೆಯ ಟಿ.ಆರ್. ಬಾಲು, ಎನ್.ಸಿ.ಪಿ.ಯ ಶರದ್ ಪವಾರ್, ಶಿವಸೇನೆಯ ಸಂಜಯ್ ರಾವತ್ ಮತ್ತಿತರರಿದ್ದಾರೆ.

ಈ ಸಭೆಯಲ್ಲಿ ಐ.ಎನ್.ಡಿ.ಐ.ಎ. ಮೈತ್ರಿಕೂಟದ ಚಿಹ್ನೆ ಬಿಡುಗಡೆ ಮಾಡಲಾಗುವುದು ಎಂದು ಹೇಳಲಾಗಿತ್ತು. ಆದರೆ, ಚಿಹ್ನೆ ಬಿಡುಗಡೆಯನ್ನು ತಡೆ ಹಿಡಿಯಲಾಗಿದೆ. ಅಲ್ಲದೇ, ಮೈತ್ರಿಕೂಟಕ್ಕೆ ಯಾವುದೇ ಸಂಚಾಲಕರನ್ನು ನೇಮಿಸದೇ ಸಾಮೂಹಿಕ ನಾಯಕತ್ವದಲ್ಲಿ ಮುನ್ನಡೆಯಲೂ ನಿರ್ಧರಿಸಲಾಗಿದೆ. ಹಲವರು ಸಂಚಾಲಕ ಸ್ಥಾನದ ಆಕಾಂಕ್ಷಿಗಳಾಗಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

# ಕನ್ನಡದ ಸೊಗಡನ್ನು ದೇಶಾದ್ಯಂತ ಬಿತ್ತರಿಸುವ ಕಾರ್ಯ ಸ್ವಾಗತಾರ್ಹ

## ಚಿತ್ರದುರ್ಗದ ತರಾಸು ರಂಗಮಂದಿರದಲ್ಲಿ ಜರುಗಿದ 'ನೃತ್ಯರೂಪಕ'ದಲ್ಲಿ ಶ್ರೀ ಕಬೀರಾನಂದ ಸ್ವಾಮೀಜಿ ಮೆಚ್ಚುಗೆ




ಚಿತ್ರದುರ್ಗ ಸೆ.1- ಇಲ್ಲಿನ ತರಾಸು ರಂಗಮಂದಿರದಲ್ಲಿ 'ತುಮ್ಹಾರೆ ಸಿವಾ ಔರ್ ಕೋಯಿ ನಹೀ' ವಚನ ಸಂಸ್ಕೃತಿ ಅಭಿಯಾನ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜಗತ್ತು ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಬಹಳಷ್ಟು ಸಾಧಿಸಿದೆ. ನೈತಿಕವಾಗಿ ಅಧಃಪತನ ಹೊಂದಿದೆ. ತುರ್ತಾಗಿ ಜನರಲ್ಲಿ ಅಜ್ಞಾನ ಕಳೆದು ಸುಜ್ಞಾನ ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರ ತಲೆಯಲ್ಲಿ ಬಂಗಾರದಂತಹ ಬುದ್ದಿ ಇದೆ. ಅಂತಹ ಬುದ್ದಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಎಲ್ಲ ಕ್ಷೇತ್ರಗಳಲ್ಲಿ ಕೊಳಕು ಇದೆ. ಕೊಳೆ ಕಳೆದು ಬೆಳಕು ಬೀರುವಂತಾಗಬೇಕು. ಬಸವಣ್ಣನವರು ಲೋಕ ಮೆಚ್ಚುವಂತಹ ಪ್ರಜಾಪ್ರತಿನಿಧಿಯಾಗಿ ಕೆಲಸ ಮಾಡಿದರು. ಈಗಿನ ಪ್ರಜಾಪ್ರತಿನಿಧಿಗಳು ಆದರ್ಶಗಳನ್ನು ಹೇಳುತ್ತಾರೆ. ಆದರೆ ನಡೆಯಲ್ಲಿ ಸೋಲುತ್ತಾರೆ. ಆದರ್ಶಗಳಿಗೆ ಚ್ಯುತಿ ಬಂದರೆ ಅಧಿಕಾರವನ್ನು ತ್ಯಾಗ ಮಾಡಿದವರು ಬಸವಣ್ಣ, ಈಗಿನ ಪ್ರಜಾಪ್ರತಿನಿಧಿಗಳು ಆದರ್ಶಗಳನ್ನು ಗಾಳಿಗೆ ತೂರಿ ಕುರ್ಚಿಗಾಗಿ ಅಂಟಿಕೊಳ್ಳುತ್ತಾರೆ ಎಂದು ಅವರು ನುಡಿದರು.

ಶ್ರೀ ಕಬೀರಾನಂದ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಈ ಕಲಾತಂಡ ಎರಡು ತಿಂಗಳ ಕಾಲ ಅವ್ಯಾಹತವಾಗಿ ಕಾರ್ಯಕ್ರಮ ನೀಡುತ್ತಾ ಬಂದಿರುವುದು ಹೆಮ್ಮೆಯ ವಿಷಯ. ಪೂಜ್ಯ ಶ್ರೀಗಳವರು ಬಸವ ತತ್ವಗಳನ್ನು ಇಡೀ ಭಾರತದಾದ್ಯಂತ ಕನ್ನಡದ ಸೊಗಡನ್ನು ಹಿಂದಿ ಭಾಷೆಗೆ ಭಾಷಾಂತರಿಸಿ ಬಿತ್ತರಿಸುವ ಕಾರ್ಯ ಮಾಡುತ್ತಿರುವುದು ಸಂತೋಷ ಎನಿಸುತ್ತಿದೆ. ಬಸವಣ್ಣನವರನ್ನು ನಾವ್ಯಾರೂ ನೋಡಿಲ್ಲ. ಆದರೆ ಬಸವಣ್ಣನವರು ಹೀಗಿದ್ದರೂ ಎನ್ನುವುದನ್ನು ವಚನ ನೃತ್ಯದ ಮೂಲಕ ತೋರಿಸುತ್ತಿರುವವರು ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಎಂದರು.

ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮಿಗಳು ಮಾತನಾಡಿ, ಬಸವಣ್ಣನವರು ಬೋಧಿಸಿದ ತತ್ವಗಳನ್ನು ಪಾಲಿಸಿದಾಗ ಮಾತ್ರ ಈ ಲೋಕ ಬದುಕುತ್ತೆ, ಮನುಷ್ಯ ಅತಿಯಾಸೆಯಿಂದ ಒತ್ತಡಕ್ಕೆ ಒಳಗಾಗಿ ಬದುಕನ್ನು ಪಾತಾಳಕ್ಕೆ ತೆಗೆದುಕೊಂಡು ಹೋಗುತ್ತಿದ್ದಾನೆ. ಅಂಥವರಿಗೆ ಬಸವಣ್ಣನವರ ತತ್ವಗಳನ್ನು ಮನೆ ಮನೆಗೆ ಮುಟ್ಟಿಸುವ ಕಾರ್ಯವನ್ನು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ಮಾಡುತ್ತಾ ಬಂದಿದ್ದಾರೆ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ್ ಮಾತನಾಡಿ, ವಚನ ಸಾಹಿತ್ಯ ಸಾಮಾನ್ಯ ಸಾಹಿತ್ಯವಲ್ಲ. ಜನಸಾಮಾನ್ಯರ ಸಾಹಿತ್ಯ. ಶರಣರು ದಾಸೋಹ, ಕಾಯಕದ ಮೂಲಕ ಹೇಗೆ ಸಮಾಜದಲ್ಲಿ ಬದುಕಬೇಕೆಂದು ತೋರಿಸಿದ್ದಾರೆ. ಕರ್ನಾಟಕದ ಪ್ರಗತಿ ಬಸವಾದಿ ಶರಣರಿಂದ ಆಗಿದೆ. ಇಲ್ಲಿ ಶಾಂತಿ, ನೆಮ್ಮದಿ, ಸೌಹಾರ್ದತೆಗೆ ಕಾರಣ ಬಸವಾದಿ ಶಿವಶರಣರು. ನಾನು ಬಸವಣ್ಣನ ನಾಡಿನಿಂದ ಬಂದು ಚಿತ್ರದುರ್ಗದಲ್ಲಿ ಬಸವಣ್ಣನ ಬಗ್ಗೆ ಮಾತನಾಡಿದ್ದು ತುಂಬಾ ಸಂತೋಷ ಎನಿಸುತ್ತಿದೆ ಎಂದರು.

ಚಿತ್ರದುರ್ಗ ನ್ಯಾಯಾಲಯದ ನ್ಯಾಯಾಧೀಶ ರಾದ ರೇಖಾ ಮಾತನಾಡಿ, ವಚನಗಳನ್ನು ಪಾಲಿಸುವುದರಲ್ಲಿ ಕ್ರಿಯಾಶೀಲರಾಗಿದ್ದೇವೆ. ಎಲ್ಲ ಕ್ಷೇತ್ರಗಳನ್ನು ಪಾಲಿಸಿದ್ದೇವೆ. ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ.... ಎನ್ನುವ ವಚನ ಐಪಿಸಿ ಸೆಕ್ಷನ್ ಇದ್ದ ಹಾಗೆ. ವಚನಗಳ ಕಲಿಯುವಿಕೆಗೆ ವಯಸ್ಸಿನ ಮಿತಿಯಿಲ್ಲ. ವಯಸ್ಸಿಗಿಂತ ಮನಸ್ಸು ಮುಖ್ಯ ಎಂದರು.

ಶಾಸಕ ವೀರೇಂದ್ರ ಪಪ್ಪಿ, ಚಿತ್ರದುರ್ಗ ರಕ್ಷಣಾಧಿಕಾರಿ ಪರಶುರಾಮ್, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶಿವಸ್ವಾಮಿ , ಕೆ. ಎಂ. ವೀರೇಶ್, ಹನುಮಲಿ ಷಣ್ಮುಖಪ್ಪ, ಮಹಡಿ ಶಿವಮೂರ್ತಿ ಉಪಸ್ಥಿತರಿದ್ದರು. ಜಿ. ಎಸ್. ಮಂಜುನಾಥ್ ಸ್ವಾಗತಿಸಿದರೆ, ಉರುಳಿ ಬಸವರಾಜ್ ನಿರೂಪಿಸಿದರು. ಕೆ. ಪಿ. ಎಂ. ಗಣೇಶ್ ವಂದಿಸಿದರು.

# ಬದಲಾದ ಜೀವನ ಶೈಲಿಯಿಂದಾಗಿ ಅನಾರೋಗ್ಯ ಹೆಚ್ಚಳ



## ಮಲೇಬೆನ್ನೂರಿನಲ್ಲಿನ ಉಚಿತ ಆರೋಗ್ಯ ಶಿಬಿರದಲ್ಲಿ ಡಾ. ಲಕ್ಷ್ಮೀದೇವಿ ಬೇಸರ

ಮಲೇಬೆನ್ನೂರು, ಸೆ.1- ಜೀವನ ಶೈಲಿ ಬದಲಾಯಿಸಿಕೊಳ್ಳದಿದ್ದರೆ ಉತ್ತಮ ಆರೋಗ್ಯ ಸಾಧ್ಯವಿಲ್ಲ. ಕಳೆದ 40 ವರ್ಷಗಳಲ್ಲಿ ಜನರ ಜೀವನಶೈಲಿ ಸಾಕಷ್ಟು ಬದಲಾಗಿರುವ ಕಾರಣ ಅನಾರೋಗ್ಯಗಳು ಹೆಚ್ಚಾಗಿವೆ ಎಂದು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಲಕ್ಷ್ಮಿ ದೇವಿ ಹೇಳಿದರು.

ಪಟ್ಟಣದ ಹರಳಹಳ್ಳಿ ರಸ್ತೆಯಲ್ಲಿರುವ ಗ್ರಾಮದೇವತೆ ಶ್ರೀ ಏಕನಾಥೇಶ್ವರಿ ದೇವಸ್ಥಾನದಲ್ಲಿ ಬಸವ ಬಳಗ ಹಾಗೂ ಅಕ್ಕನ ಬಳಗ ಮತ್ತು ಲಯನ್ಸ್ ಕ್ಲಬ್, ಮಲೇಬೆನ್ನೂರು ಇವರುಗಳ ಸಂಯುಕ್ತಾಶ್ರಯದಲ್ಲಿ ದಿ. ಬಿ.ಜಿ. ಅಭಿಷೇಕ ಗೌಡ ಇವರ ಜನ್ಮದಿನದ ಅಂಗವಾಗಿ ನಿನ್ನೆ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿ ಅವರು ಮಾತನಾಡಿದರು.

ದೈಹಿಕ ಶ್ರಮವಿಲ್ಲದ ಕಾರಣದಿಂದಾಗಿ ರಕ್ತದ ಒತ್ತಡ, ಸಕ್ಕರೆ ಕಾಯಿಲೆ ಮತ್ತು ಹೃದಯಾಘಾತಗಳು ಹೆಚ್ಚಾಗುತ್ತಿವೆ. ಜೊತೆಗೆ ಬಹಳ ಜನರಲ್ಲಿ ರಕ್ತಹೀನತೆ ಕಂಡುಬರುತ್ತಿದೆ. ಮಕ್ಕಳಲ್ಲಿ ಗರ್ಭಿಣಿ ಮಹಿಳೆ ಯರಲ್ಲಿ ಮತ್ತು 40 ವರ್ಷಕ್ಕಿಂತ ಕೆಳಗಿನವರಲ್ಲಿ ರಕ್ತಹೀನತೆ ಸಾಮಾನ್ಯವಾಗುತ್ತಿರುವುದು ಬೇಸರದ ಸಂಗತಿ ಎಂದರು.

ರಕ್ತ ಹೀನತೆಯಿಂದ ಸುಸ್ತು, ನಿಶ್ಯಕ್ತಿ ಉಂಟಾಗುತ್ತದೆ. ಆದ್ದರಿಂದ ರೆಡಿಮೇಡ್ ಆಹಾರ, ಜಂಕ್ ಫುಡ್‌ಗಳನ್ನು ಬಳಸದೇ ಪೌಷ್ಠಿಕ ಆಹಾರ ಪದಾರ್ಥಗಳನ್ನು ಮತ್ತು ತರಕಾರಿ, ಕಾಳುಗಳನ್ನು ಬಳಸಬೇಕು. 40 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಸ್ವಿಚ್ ಆನ್ ಮಾಡಿ, ಕುಳಿತು ಕೆಲಸ ಮಾಡಿಸುವುದನ್ನು ನಿಲ್ಲಿಸಿ, ಕೈಯಿಂದ ಕೆಲಸ ಮಾಡುವುದನ್ನು ಮತ್ತು ವಾಕಿಂಗ್ ಮಾಡುವುದನ್ನು ಕಡ್ಡಾಯಗೊಳಿಸಿ ಎಂದು ಡಾ.ಲಕ್ಷ್ಮಿ ದೇವಿ ತಿಳಿಸಿದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ಮಾತನಾಡಿ, ಇದೇ ದಿನಾಂಕ 4 ರಂದು ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಲಯನ್ಸ್ ಕ್ಲಬ್ ವತಿಯಿಂದ ಉಚಿತ ಹೃದಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಇಸಿಜಿ, 2ಡಿ ಇಕೋ ಮತ್ತು ತಜ್ಞ ವೈದ್ಯರಿಂದ ಸಮಾಲೋಚನೆ ಸೌಲಭ್ಯ ಇರುತ್ತದೆ ಎಂದರು.

ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ ಮಾತನಾಡಿದರು. ಬಸವ ಬಳಗದ ಅಧ್ಯಕ್ಷ ವೈ.ನಾರೇಶಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಲಯನ್ಸ್ ಕ್ಲಬ್ ಕಾರ್ಯದರ್ಶಿ ಸಿರಿಗೆರೆ ಸಿದ್ದಪ್ಪ, ಖಜಾಂಚಿ ಭರಮಳ್ಳಿ ಮಂಜು, ಅಕ್ಕನ ಬಳಗದ ಅಧ್ಯಕ್ಷೆ ಶ್ರೀಮತಿ ಸರೋಜಮ್ಮ, ಡಾ. ಎಂ.ಜಿ. ರಂಗನಾಥ್, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಓ.ಜಿ.ರುದ್ರಗೌಡ್ರು, ಎನ್.ಜಿ.ಶಿವಾಜಿ ಪಾಟೀಲ್, ಎನ್.ಜಿ.ಬಸವನಗೌಡ, ಶ್ರೀಮತಿ ರೂಪಾ ಪಾಟೀಲ್, ಇ.ಎಂ.ಮರುಳಸಿದ್ದೇಶ್, ಡಾ. ಚಂದ್ರಕಾಂತ್, ಹೆಚ್.ಜಿ.ಚಂದ್ರಶೇಖರ್, ಹುಳ್ಳಳ್ಳಿ ಸಿದ್ದೇಶ್, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಶ್ರೀಮತಿ ಸುಲೋಚನಮ್ಮ, ಓ.ಜಿ.ಕುಮಾರ್, ಕೆ.ಪಿ.ಗಂಗಾಧರ್, ಭೋವಿಕುಮಾರ್, ಕೆ.ಜಿ.ಪರಮೇಶ್ವರಪ್ಪ, ಅಂಗನವಾಡಿ ಕಾರ್ಯಕರ್ತೆ ಮಂಜುಳಾ, ಬೆಣ್ಣೆಹಳ್ಳಿ ಬಸವರಾಜ್, ಆರೋಗ್ಯ ಕೇಂದ್ರದ ಕಿರಣ್, ನಾಗರಾಜ್, ನಳಿನ, ವಿಮಲಾ, ಶೀಲಾ, ಆಪ್ತ ಸಮಾಲೋಚಕ ಕಿರಣ್ ಸೇರಿದಂತೆ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

# ವಿಮಾನ ಹಾರಾಟ, ಮದ್ಯ ಮಾರಾಟ ಕೇಂದ್ರ

(1ನೇ ಪುಟದಿಂದ) ವೇಳೆಗೆ ಹಾಸನ, ವಿಜಾಪುರ ಹಾಗೂ ರಾಯಚೂರು ವಿಮಾನ ನಿಲ್ದಾಣಗಳಲ್ಲಿ ವಿಮಾನ ಹಾರಾಟಕ್ಕೆ ಸಿದ್ಧವಾಗಲಿವೆ. ಅವುಗಳಿಗೂ ಸರ್ಕಾರಿ ಸ್ವಾಮ್ಯದ ವಿಮಾನ ಹಾರಾಟ ನಡೆಸುವ ಉದ್ದೇಶವಿದೆ ಎಂದರು. ರಾಜ್ಯದಲ್ಲಿ 103 ಬೃಹತ್ ಮದ್ಯದಂಗಡಿಗಳನ್ನು ಎಂಎಸ್‌ಐಎಲ್ ಮೂಲಕ ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ಈ ಮಳಿಗೆಯಲ್ಲಿ ಎಲ್ಲಾ ತೆರನಾದ ಮದ್ಯಗಳು ಲಭ್ಯವಾಗಲಿವೆ.

ಅದರಲ್ಲೂ ಶ್ರೀಮಂತ ವರ್ಗ ಬಳಸುವ ವಿವಿಧ ನಮೂನೆಯ ಮದ್ಯಗಳನ್ನು ಮಾರಾಟ ಮಾಡಲಾಗುವುದು. ಇದಕ್ಕಾಗಿಯೇ ದೊಡ್ಡ ಪ್ರಮಾಣದ ಮಾಲ್‌ಗಳ ಮಾದರಿ ಮಳಿಗೆ ತೆರೆಯಲಾಗುವುದು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ 100 ದಿನಗಳಲ್ಲಿ 60 ಸಾವಿರ ಕೋಟಿ ಮೊತ್ತದ ಹೂಡಿಕೆ ಒಪ್ಪಂದಗಳಾಗಿವೆ. ಒಂದು ವರ್ಷದಲ್ಲಿ ಒಂದು ಲಕ್ಷ ಕೋಟಿ ರೂ.ನಷ್ಟು ಬಂಡವಾಳ ಹರಿದುಬರಲಿದೆ ಎಂದು ಹೇಳಿದರು.

ನುಡಿದಂತೆ ನಡೆಯುವ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 100 ದಿನಗಳನ್ನು ಯಶಸ್ವಿಯಾಗಿ ಪೂರೈಸಿದೆ. ಇದೇ ಹಾದಿಯಲ್ಲಿ, ಕರ್ನಾಟಕಕ್ಕೆ ಉಜ್ವಲವಾದ ಕೈಗಾರಿಕಾ ಭವಿಷ್ಯವನ್ನು ರೂಪಿಸಲು ಮುಂದಾಗಿರುವ ನಮ್ಮ ಸರ್ಕಾರ ಸದೃಢ ಹೆಜ್ಜೆಗಳನ್ನು ಇರಿಸಿದೆ.

ಬೆಂಗಳೂರು ಹೊರವಲಯದಲ್ಲಿ ಸುಮಾರು 2000 ಎಕರೆ ಪ್ರದೇಶದಲ್ಲಿ 'ನಾಲೆಡ್ಜ್ -ಹೆಲ್ತ್- ಇನ್ನೋವೇಶನ್ ಅಂಡ್ ರಿಸರ್ಚ್' ಸಿಟಿ ಸ್ಥಾಪಿಸುವ ಉದ್ದೇಶವಿದೆ. ಮೊದಲ ಹಂತದಲ್ಲಿ ಅಭಿವೃದ್ಧಿಯಾಗ ಲಿರುವ 1000 ಎಕರೆ ಪ್ರದೇಶದಲ್ಲಿ ವಿಶ್ವದರ್ಜೆಯ ವಿಶ್ವವಿದ್ಯಾಲಯ, ಆಸ್ಪತ್ರೆ, ಆವಿಷ್ಕಾರ- ಸಂಶೋ ಧನಾ ಕೇಂದ್ರಗಳಿರಲಿವೆ. ಈ ಯೋಜನೆ ಜಾಗತಿಕ ವಲಯದಲ್ಲಿ ಬೆಂಗಳೂರಿನ ಹೆಸರನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವುದರಲ್ಲಿ ಸಂದೇಹವಿಲ್ಲ.

ಸರ್ಕಾರ ಮತ್ತು ಉದ್ಯಮಗಳ ನಡುವಿನ ಅಂತರವನ್ನು ನೀಗಿಸುವ ನಿಟ್ಟಿನಲ್ಲಿ ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಸಂವಾದ ಪ್ರಾರಂಭಿಸಿದ್ದೇನೆ. ಸ್ಟಾರ್ಟ್‌ಅಪ್‌ಗಳಿಂದ ಆರಂಭಿಸಿ ಸಂಘಟಿತ ಸಂಸ್ಥೆಗಳವರೆಗೆ, ಏರೋಸ್ಪೇಸ್‌ನಿಂದ ಎಲೆಕ್ಟ್ರಿಕ್ ವಾಹನಗಳ ಉತ್ಪಾದಕರ ಜತೆ ಮಾತುಕತೆ ಸಾಗಿದೆ.

ವೆಂಚರ್ ಕ್ಯಾಪಿಟಲ್, ಪ್ರೈವೇಟ್ ಇಕ್ವಿಟಿ ಮತ್ತು ಮೂಲಸೌಕರ್ಯ ಅಭಿವೃದ್ಧಿಯಂತಹ ವಿವಿಧ ವಲಯಗಳ ಅನುಭವಿಗಳನ್ನು ಒಳಗೊಂಡ 'ಕಾರ್ಯತಂತ್ರ ಹೂಡಿಕೆ ಸಮಿತಿ' ರಚಿಸಲಾಗುವುದು.

ಇದಲ್ಲದೇ, ಸುಲಲಿತ ವ್ಯವಹಾರಕ್ಕೆ ಅನುವು ಮಾಡಲು ಅತ್ಯಾಧುನಿಕ ಏಕಗವಾಕ್ಷಿ ವ್ಯವಸ್ಥೆಯನ್ನು ರೂಪಿಸುವ ಕೆಲಸ ಆಗುತ್ತಿದೆ. ಈ ಸಂಬಂಧ ಹಲವಾರು ಸುತ್ತಿನ ಚರ್ಚೆಗಳು ನಡೆದಿದ್ದು, ಶೀಘ್ರದಲ್ಲೇ ಕ್ರಮ ವಹಿಸಲಾಗುತ್ತದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜಿಸಲು 9 ಆದ್ಯತಾ ವಲಯಗಳಲ್ಲಿ 'ವಿಷನ್ ಗ್ರೂಪ್' ರಚಿಸುತ್ತೇವೆ. ಏರೋಸ್ಪೇಸ್ ಮತ್ತು ಡಿಫೆನ್ಸ್, ಮೆಷಿನ್ ಟೂಲ್ಸ್, ಇಎಸ್‌ಡಿಎಂ, ಫಾರ್ಮಾಸ್ಯೂಟಿಕಲ್ಸ್, ಕೋರ್ ಮ್ಯಾನುಫ್ಯಾಕ್ಚರಿಂಗ್, ಆಟೋಮೋಟಿವ್/ ಎಲೆಕ್ಟ್ರಿಕ್ ವೆಹಿಕಲ್ಸ್, ಇಂಡಸ್ಟ್ರಿ 5.0, ಟೆಕ್ಸ್‌ಟೈಲ್ಸ್ ಮತ್ತು ಗ್ರೀನ್ ಎನರ್ಜಿಯನ್ನು ಒಳಗೊಂಡಿದೆ.

ಹೊಸ ಕೈಗಾರಿಕಾ ನೀತಿ ರೂಪಿಸಲು ನಮ್ಮ ಸರ್ಕಾರ ಮುಂದಾಗಿದ್ದು, ಎಲೆಕ್ಟ್ರಿಕ್ ವೆಹಿಕಲ್ ಮತ್ತು ವೇರ್‌ಹೌಸಿಂಗ್ ಮತ್ತು ಲಾಜಿಸ್ಟಿಕ್ಸ್ ವಲಯ ಗಳಿಗೆ ಈಗಾಗಲೇ ಕರಡು ರೂಪುಗೊಂಡಿವೆ. ಸದ್ಯ ಇತರೆ ರಾಜ್ಯಗಳ ಕೈಗಾರಿಕಾ ನೀತಿಯ ಅಧ್ಯಯನ ನಡೆಯುತ್ತಿದ್ದು, ಶೀಘ್ರದಲ್ಲೇ ಪ್ರಗತಿಪರ ನೀತಿಯನ್ನು ಹೊರತರಲಿದ್ದೇವೆ. ಜತೆಗೆ, ಪ್ರೋತ್ಸಾಹಕ ಪ್ಯಾಕೇಜ್‌ಗಳನ್ನು ಘೋಷಿಸಲಿದ್ದೇವೆ. ರಫ್ತು ಉತ್ತೇಜ ನಕ್ಕೂ ಹೊಸ ನೀತಿಯಲ್ಲಿ ಅವಕಾಶ ನೀಡಲಾಗುತ್ತದೆ.

ಫಾಕ್ಸ್‌ಕಾನ್, ಜೆಎಸ್‌ಡಬ್ಲ್ಯೂ ಎನರ್ಜಿ, ಟಾಟಾ ಎಲೆಕ್ಟ್ರಾನಿಕ್ಸ್ ಮತ್ತು ಐಬಿಸಿ ಮುಂತಾದ ಕಂಪನಿಗಳೊಂದಿಗಿನ ಫಲಪ್ರದ ಮಾತುಕತೆ ನಡೆಸಲಾಗಿದೆ. ಈ ಕಂಪನಿಗಳು ದೊಡ್ಡ ಮೊತ್ತದ ಹೂಡಿಕೆ ಒಪ್ಪಂದಗಳಿಗೆ ಸಹಿ ಮಾಡಿವೆ ಎಂದರು.

# ಸೋನಿಯಾಗೆ ಪೌರತ್ವ ಬೇಡ ಅಂದಿದ್ದರು

## ಇಂದು ಅವರ ಕಾಲಡಿಯಲ್ಲೇ ಸಿಎಂ ಇದ್ದಾರೆ: ಜಿ.ಟಿ. ದೇವೇಗೌಡ



ಬೆಂಗಳೂರು, ಸೆ.1 - ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ ಅವರಿಗೆ ರಾಷ್ಟ್ರದ ಪೌರತ್ವ ನೀಡಬಾರದು ಎಂದು ಅಂದು ಒತ್ತಾಯಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಅವರ ಕಾಲಡಿಯಲ್ಲೇ ಇದ್ದಾರೆ ಎಂದು ಮಾಜಿ ಸಚಿವ, ಹಾಲಿ ಶಾಸಕ, ಜೆಡಿಎಸ್ ಕೋರ್‌ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ವಾಗ್ದಾಳಿ ನಡೆಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ನಡೆದ ಕೋರ್ ಕಮಿಟಿ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವನ್ನು ಸೀಮೆ ಎಣ್ಣೆ ಪಾರ್ಟಿ ಎಂದು ಬಿಜೆಪಿಯನ್ನು ಬೆಂಕಿ ಪೊಟ್ಟಣ ಪಾರ್ಟಿ ಎಂದು ನಿಂದಿಸಿದ್ದ ನೀವೇ ಅವರೊಂದಿಗೆ ಕೈ ಜೋಡಿಸಿ ಅಧಿಕಾರ ಪಡೆದಿದ್ದೀರಿ ಎಂದು ಹೇಳಿದರು.

ಒಬ್ಬ ಜವಾನನ್ ಆಗಿರಲಿ ಗೌರವ ಕೊಡುವುದನ್ನು ಕಲಿಯಿರಿ. ಐದು ಬಾರಿ ಶಾಸಕನಾಗಿದ್ದು, ನನ್ನನ್ನು ಸೋಲಿಸಲು ಬಂದ ನಿಮ್ಮನ್ನು ಸೋಲಿಸಿದ್ದೇನೆ. ಅನಗತ್ಯ ಆರೋಪ ಮಾಡುವುದನ್ನು ನಿಲ್ಲಿಸಿ.

ಒಳ್ಳೆಯ ಬಟ್ಟೆ ಹಾಕಿದರೆ, ಚೆನ್ನಾಗಿ ಓದಿದರೆ, ಬ್ರಾಹ್ಮಣರು ಸಹಿಸಲ್ಲ ಎಂದು ನೀವು ಹೇಳಿದ್ದೀರಿ. ನೀವು ಈಗ ಯಾರ ತರಹ ಆಗಿದ್ದೀರಿ. ಯಾರು ಅಧಿಕಾರ ಮಾಡುವುದನ್ನು ಸಹಿಸುವುದಿಲ್ಲ. ಎಲ್ಲವೂ ನಿಮಗೇ ಬೇಕು ಎಂದು ತೀವ್ರ ವಾಗ್ದಾಳಿ ನಡೆಸಿದರು.

ನಾನು ಜಿಲ್ಲಾ ಪರಿಷತ್‌ನಲ್ಲಿ 5 ವರ್ಷ ಅಧಿಕಾರ ನಡೆಸುತ್ತೇನೆ ಎಂಬ ಕಾರಣಕ್ಕೆ 20 ತಿಂಗಳಿಗೆ ಇಳಿಸಿದ್ದಿರಿ.

ನಂತರ ಕುಮಾರಸ್ವಾಮಿ ನಾಯಕತ್ವ ಸಹಿಸಲಾಗದೆ, ಯಡಿಯೂರಪ್ಪ ಅವರ ಜತೆ ಕೈಜೋಡಿಸಿ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಿದ್ದಿರಿ. ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ನಂತರ ಎಲ್ಲಾ ಅಧಿಕಾರ ಪಡೆದಿದ್ದೀರಿ. ಆ ಪಕ್ಷಕ್ಕೆ ನಿಮ್ಮ ಕೊಡುಗೆ ಏನು? ಎಂದು ಪ್ರಶ್ನಿಸಿದರು.

ಕೆಲಸಕ್ಕೆ ಬಾರದವನನ್ನು ಗೆಲ್ಲಿಸಿದ್ದೀರಿ ಎಂದು ಏಕ ವಚನದಲ್ಲಿ ಮಾತನಾಡಿ ಕ್ಷೇತ್ರ, ಜಿಲ್ಲೆ ಹಾಗೂ ರಾಜ್ಯದ ಜನರಿಗೆ ಅಪಮಾನ ಮಾಡಿದ್ದೀರಿ.

ಇನ್ನಾದರೂ ಲಘುವಾಗಿ ಮಾತನಾಡುವುದನ್ನು ಬಿಡಿ. ಸದಾ ಸಂವಿಧಾನದ ಬಗ್ಗೆ ಮಾತನಾಡುವ ನೀವು, ಸಂವಿಧಾನದ ಪ್ರಕಾರ ನಡೆದುಕೊಳ್ಳುತ್ತಿದ್ದೀರಾ ಎಂದು ವಾಗ್ದಾಳಿ ನಡೆಸಿ, ಆಕ್ರೋಶ ಹೊರ ಹಾಕಿದರು.

## ರಾಣೇಬೆನ್ನೂರಿನಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಸೆ.1- ಇಲ್ಲಿನ ಅಶೋಕ ನಗರ ಪ್ರದೇಶಗಳಿಗೆ ನಾಡಿದ್ದು ದಿನಾಂಕ 3 ರ ಭಾನುವಾರ ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಸಿದ್ದೇಶ್ವರ ಸ್ಪರ್ಧೆ ಇಲ್ಲ : ಯತ್ನಾಳ್

(1ನೇ ಪುಟದಿಂದ) ಎಂಟು ಹಾಲಿ ಸಂಸದರು ಸ್ವಯಂ ಪ್ರೇರಿತರಾಗಿ ಚುನಾವಣೆಗೆ ಸ್ಪರ್ಧಿಸದೇ ಹಿಂದೆ ಸರಿಯಲಿದ್ದಾರೆ. ಇವರಲ್ಲಿ ಸಂಸದರಾದ ಸದಾನಂದ ಗೌಡ, ಸಿದ್ದೇಶ್ವರ, ಶಿವಕುಮಾರ ಉದಾಸಿ ಇತರರು ಸ್ಪರ್ಧಿಸುವುದಿಲ್ಲ. ಹೊಸಬರಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಸ್ವಯಂ ಪ್ರೇರಣೆಯಿಂದ ಸ್ಪರ್ಧೆಗೆ ಇಳಿಯುತ್ತಿಲ್ಲ. ಸ್ಪರ್ಧೆಯಿಂದ ಹಿಂದೆ ಸರಿಯಲು ಯಾರೂ ಅವರ ಮೇಲೆ ಒತ್ತಡ ಹೇರಿಲ್ಲ ಎಂದರು.

# ಅವಧಿಗೆ ಮುಂಚೆಯೇ ಲೋಕಸಭಾ ಚುನಾವಣೆ ಸಾಧ್ಯತೆ

(1ನೇ ಪುಟದಿಂದ) ಮಾತುಗಳು ಕೇಳಿ ಬರುತ್ತಿವೆ. ಲೋಕಸಭಾ ಚುನಾವಣೆಯನ್ನು ಅವಧಿಗೆ ಮುಂಚೆ ನಡೆಸುವ ಸಾಧ್ಯತೆ ಇದೆ.

2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ನಂತರ, ಏಕಕಾಲಕ್ಕೆ ಲೋಕಸಭೆ ಹಾಗೂ ವಿಧಾನಸಭೆಗಳ ಚುನಾವಣೆ ನಡೆಸುವ ಬಗ್ಗೆ ಪ್ರಸ್ತಾಪಿಸುತ್ತಲೇ ಬಂದಿದ್ದಾರೆ. ಪದೇ ಪದೇ ಚುನಾವಣೆ ನಡೆಸುವುದರಿಂದ ಮಾನವ ಸಂಪನ್ಮೂಲ ಗಳ ಮೇಲೆ ಹೊರೆಯಾಗುವ ಜೊತೆಗೆ, ಅಭಿವೃದ್ಧಿ ಕಾರ್ಯಗಳಿಗೂ ಹಿನ್ನಡೆಯಾಗುತ್ತದೆ ಎಂದು ಪ್ರಧಾನಿ ಹೇಳಿದ್ದರು. ಕೋವಿಂದ್ ಅವರೂ ಸಹ ಇದೇ ರೀತಿ ನಿಲುವುಗಳನ್ನು ವ್ಯಕ್ತಪಡಿಸಿದ್ದರು.

ಮೋದಿ ಸರ್ಕಾರದ ಎರಡನೇ ಅವಧಿ ಮುಗಿಯುತ್ತಾ ಬರುತ್ತಿದೆ. ಈ ಹಂತದಲ್ಲಿ ಏಕಕಾಲಕ್ಕೆ ಚುನಾವಣೆ ವಿಷಯವನ್ನು ಮತ್ತಷ್ಟು ವಿಳಂಬ ಮಾಡಬಾರದು. ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಬಿಜೆಪಿಯ ಉನ್ನತ ನಾಯಕರು ಭಾವಿಸಿರುವಂತಿದೆ. ಅವಧಿಗೆ ಮುಂಚೆ ಚುನಾವಣೆ ನಡೆಸುವುದು ಬಿಜೆಪಿಗೆ ಸೂಕ್ತವಾಗಲಿದೆ ಎಂಬ ಅಭಿಪ್ರಾಯವೂ ಕೇಳಿ ಬರುತ್ತಿದೆ. ಸರ್ಕಾರ ಅವಧಿಗೆ ಮುಂಚೆ ಚುನಾವಣೆ ನಡೆಸಿದರೆ, ಪ್ರತಿಪಕ್ಷಗಳ ಕೂಟವಾದ ಐ.ಎನ್.ಡಿ.ಐ.ಎ.ಗೆ ಅನಿರೀಕ್ಷಿತ ಸವಾಲುಗಳೂ ಎದುರಾಗಲಿವೆ. ಮಹಾರಾಷ್ಟ್ರದಲ್ಲಿ ಐ.ಎನ್.ಡಿ.ಐ.ಎ. ನಾಯಕರು ಸಭೆ ನಡೆಸುತ್ತಿರುವಾಗಲೇ ಸರ್ಕಾರ, ಕೋವಿಂದ್ ನೇತೃತ್ವದ ಸಮಿತಿ ರಚನೆ ನಿರ್ಧಾರ ತೆಗೆದುಕೊಂಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸರ್ಕಾರ ದಿಕ್ಕು ತಪ್ಪಿಸುವ ಪ್ರಯತ್ನ ನಡೆಸಿದೆ. ಅವರೇನೇ ಪ್ರಯತ್ನ ನಡೆಸಿದರೂ ದೇಶದ ನಾಗರಿಕರಿಗೆ ದ್ರೋಹ ಮಾಡಲು ಸಾಧ್ಯವಾಗದು ಎಂದಿದ್ದಾರೆ.

ಕೇಂದ್ರ ಸರ್ಕಾರ ಏಕಕಾಲದ ಚುನಾವಣೆಯ ಕುರಿತು ಚರ್ಚೆ ಬಿರುಸುಗೊಳಿಸಿರುವುದನ್ನು ನೋಡಿದಾಗ, ಕೆಲ ರಾಜ್ಯ ವಿಧಾನಸಭೆಗಳ ಚುನಾವಣೆ ಜೊತೆಗೇ ಲೋಕಸಭಾ ಚುನಾವಣೆ ನಡೆಸಲು ಮುಂದಾಗುವ ಸಾಧ್ಯತೆ ಕಂಡು ಬರುತ್ತಿದೆ. ಮಿಜೋರಾಂ, ಮಧ್ಯ ಪ್ರದೇಶ, ಛತ್ತೀಸ್‌ಘಡ, ತೆಲಂಗಾಣ ಹಾಗೂ ರಾಜಸ್ಥಾನ ವಿಧಾನಸಭೆಗಳಿಗೆ ನವೆಂಬರ್ - ಡಿಸೆಂಬರ್‌ಗೆ ಚುನಾವಣೆ ನಡೆಯಲಿದೆ. ಲೋಕಸಭೆಗೆ ಮುಂದಿನ ವರ್ಷ ಮೇ - ಜೂನ್ ತಿಂಗಳಲ್ಲಿ ಚುನಾವಣೆ ನಡೆಯಬೇಕಿದೆ. ಆಂಧ್ರ ಪ್ರದೇಶ, ಒಡಿಶಾ, ಸಿಕ್ಕಿಂ ಹಾಗೂ ಅರುಣಾಚಲ ಪ್ರದೇಶ ವಿಧಾನಸಭೆಗಳಿಗೆ ಲೋಕಸಭಾ ಚುನಾವಣೆಯ ನಂತರ ಚುನಾವಣೆಗಳು ಎದುರಾಗಲಿವೆ. ಈ ಹಿಂದೆ 2 ಕಾನೂನು ಆಯೋಗಗಳು ಏಕ ಕಾಲಕ್ಕೆ ಚುನಾವಣೆ ನಡೆಸುವುದರ ಪರ ವರದಿ ನೀಡಿ ದ್ದವು. ಚುನಾವಣಾ ಆಯೋಗ ಸಹ ಏಕಕಾಲಕ್ಕೆ ಚುನಾವಣೆ ನಡೆಸುವ ಸಾಧ್ಯತೆಗಳ ಬಗ್ಗೆ ಮಾತನಾಡಿತ್ತು.

# ನಿವ್ವಳ ಶೂನ್ಯ ಎನ್‌ಪಿಎ ದಾವಣಗೆರೆ ಅರ್ಬನ್ ಬ್ಯಾಂಕಿನ ಹೆಗ್ಗಳಿಕೆ

(1ನೇ ಪುಟದಿಂದ)

**ನೂತನ ಶಾಖೆ :** ಬೆಳೆಯುತ್ತಿರುವ ದಾವಣಗೆರೆ ನಗರಕ್ಕನುಗುಣವಾಗಿ ಮತ್ತು ಪ್ರಗತಿಯ ಪಥದಲ್ಲಿ ಮುನ್ನಡೆದಿರುವ ತಮ್ಮ ಬ್ಯಾಂಕಿನ ಸೇವೆಯನ್ನು ಷೇರುದಾರರು ಹಾಗೂ ಗ್ರಾಹಕರ ಹತ್ತಿರಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಸುಮಾರು 8-10 ವರ್ಷಗಳಿಂದ ನಿರೀಕ್ಷೆಯಲ್ಲಿದ್ದ ಶಾಖೆಗಳನ್ನು ತೆರೆಯುವ ಕಾಲ ಇದೀಗ ಕೂಡಿ ಬಂದಿದೆ ಎಂದು ಬಕ್ಕೇಶಪ್ಪ ಹರ್ಷಿಸಿದರು.

ಎರಡು ಶಾಖೆಗಳನ್ನು ಪ್ರಾರಂಭಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಈಗಾಗಲೇ ಅನುಮತಿ ನೀಡಿದೆ. ಇದಕ್ಕಾಗಿ ನಿಟುವಳ್ಳಿ-ಸರಸ್ವತಿ ಬಡಾವಣೆ ಭಾಗದಲ್ಲಿ ನಿವೇಶನ ಖರೀದಿಸಲಾಗಿದ್ದು, ಈ ಮಾಸಾಂತ್ಯದ ವೇಳೆಗೆ ಭೂಮಿ ಪೂಜೆ ನೆರವೇರಿಸಿ, ಅತಿ ಶೀಘ್ರದಲ್ಲಿ ಸ್ವಂತ ಕಟ್ಟಡದಲ್ಲೇ ನೂತನ ಶಾಖೆಯನ್ನು ಆರಂಭಿಲಾಗುವುದು ಎಂದು ಅವರು ತಿಳಿಸಿದರು.

ಮತ್ತೊಂದು ಶಾಖೆಯನ್ನು ಶಾಮನೂರು ರಸ್ತೆ ಅಥವಾ ಎಸ್. ನಿಜಲಿಂಗಪ್ಪ ಬಡಾವಣೆ ಭಾಗದಲ್ಲಿ ತೆರೆಯಲುದ್ದೇಶಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ನಡೆಯುತ್ತಿವೆ ಎಂದು ಬಕ್ಕೇಶಪ್ಪ ವಿವರಿಸಿದರು.

**ಬ್ಯಾಂಕಿಂಗ್ ಸೇವೆ :** ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಸಿಗಬಹುದಾದ ಎಲ್ಲಾ ಸೌಲಭ್ಯಗಳನ್ನು ತಮ್ಮ ಬ್ಯಾಂಕಿನ ಗ್ರಾಹಕರಿಗೆ ಶೀಘ್ರ ಒದಗಿಸುವ ದಿಸೆಯಲ್ಲಿ ಕಾರ್ಯೋನ್ಮುಖವಾಗಿದ್ದು, ಈಗಾಗಲೇ ಮೊಬೈಲ್ ಆಪ್ ನೀಡಲಾಗಿದೆ. ಈಗ ಅಂತರ್ಜಾಲದ ಮೂಲಕ ತಮ್ಮ ವ್ಯವಹಾರವನ್ನು ನೋಡಿಕೊಳ್ಳಲು ಅಥವಾ ಕಾರ್ಯ ನಿರ್ವಹಿಸಲು ಮತ್ತು ಯುಪಿಐ ಮೂಲಕ ಹಣ ವರ್ಗಾವಣೆಗಾಗಿ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಕೂಡಲೇ ಪ್ರಾರಂಭಿಸುವ ಸಂಬಂಧ ಪ್ರಕ್ರಿಯೆಗಳು ನಡೆಯುತ್ತಿವೆ ಎಂದು ಅವರು ಹೇಳಿದರು.

ಗುರಿ - ಬ್ಯಾಂಕಿನ ಆರ್ಥಿಕ ವರ್ಷ 2023-24ನೇ ಸಾಲಿನಲ್ಲಿ ಠೇವಣಿ ಸಂಗ್ರಹಣೆಯಲ್ಲಿ 600 ಕೋಟಿ ರೂ. ಮೀರಿ, ಸಾಲ ನೀಡುವಿಕೆಯಲ್ಲಿ 425 ಕೋಟಿ ರೂ.ಗಳಿಗೂ ಹೆಚ್ಚು ಹಾಗೂ 15 ಕೋಟಿ ರೂ.ಗಳಿಗೂ ಅಧಿಕ ಲಾಭ ಗಳಿಸುವ ಗುರಿಯನ್ನಿಟ್ಟುಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಬ್ಯಾಂಕಿನ ಸದಸ್ಯರು, ಗ್ರಾಹಕರು ತಮ್ಮ ಎಲ್ಲಾ ವ್ಯವಹಾರಗಳನ್ನು ತಮ್ಮ ಬ್ಯಾಂಕಿನಲ್ಲಿಯೇ ನಡೆಸುವ ಮೂಲಕ ಬ್ಯಾಂಕಿನ ಪ್ರಗತಿ ಹಾಗೂ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಸಹಕಾರ ನೀಡುವಂತೆ ಕೇಳಿಕೊಂಡರು.

ಬ್ಯಾಂಕಿನ ಷೇರುದಾರರು ಮತ್ತು ಗ್ರಾಹಕರಾದ ಜೆ. ಸೋಮನಾಥ್, ಜಯಪ್ರಕಾಶ್ ಮಾಗಿ, ಎಸ್.ಎನ್. ಪ್ರಕಾಶ್, ಲಿಂಗರಾಜ್, ರವಿಕುಮಾರ್, ಬಕ್ಕೇಶ್ ನಾಗನೂರು, ಇನಾಯತ್ ಉಲ್ಲಾ ಖಾನ್, ಪಿ.ಕೆ. ವೀರಣ್ಣ, ಟಿ. ಎಂ. ಪರಮೇಶ್ವರಯ್ಯ, ಕೆ. ಬಸವರಾಜ್, ಗೋಪಾಲಪ್ಪ, ಎಸ್. ರಾಮಪ್ಪ, ಕೆ.ಆರ್. ಪರಮೇಶ್ವರಪ್ಪ ಮತ್ತು ಇತರರು ಕೇಳಿದ ಹಲವಾರು ಪ್ರಶ್ನೆಗಳನ್ನು ಆಲಿಸಿದ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ಎಲ್ಲಾ ಪ್ರಶ್ನೆಗಳಿಗೂ ಸಮರ್ಥವಾಗಿ ಉತ್ತರ ನೀಡಿದರು.

ಬ್ಯಾಂಕಿನ ಮಾಜಿ ಅಧ್ಯಕ್ಷರೂ ಆಗಿರುವ ಹಾಲಿ ಹಿರಿಯ ನಿರ್ದೇಶಕ ಬಿ.ಸಿ. ಉಮಾಪತಿ ಮಾತನಾಡಿ, ತಮ್ಮ ಬ್ಯಾಂಕ್ ಕೇವಲ ಲಾಭವನ್ನೇ ನೋಡದೆ ಬ್ಯಾಂಕಿಂಗ್ ವ್ಯವಹಾರದಲ್ಲಿ ಸದಸ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಕೂಡಾ ಮಾಡುತ್ತಿದೆ ಎಂದು ಉದಾಹರಣೆಗಳೊಂದಿಗೆ ತಿಳಿಸಿದರು.

ತಮ್ಮ ಬ್ಯಾಂಕ್ 62 ವರ್ಷಗಳಲ್ಲಿ ಮುನ್ನಡೆದಿದ್ದು, ಇಲ್ಲಿವರೆಗೂ ಬ್ಯಾಂಕಿನ ಪ್ರಗತಿಗೆ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಿದ ಪ್ರತಿಯೊಬ್ಬರನ್ನೂ ಸ್ಮರಿಸಿದ ಉಮಾಪತಿ, ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

62ನೇ ವಾರ್ಷಿಕ ವರದಿಯನ್ನು ಬ್ಯಾಂಕಿನ ನಿರ್ದೇಶಕರೂ ಆದ ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷ ಟಿ.ಎಸ್. ಜಯರುದ್ರೇಶ್ ಮಂಡಿಸಿದರು. ನಿರ್ದೇಶಕರೂ ಆದ ವ್ಯವಸ್ಥಾಪನಾ ಮಂಡಳಿ ಸದಸ್ಯ ಕಂಚಿಕೇರಿ ಮಹೇಶ್ ಅವರು ಕಳೆದ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಸಭೆಯ ಗಮನಕ್ಕೆ ತಂದರು. ನೂತನ ಸಾಲಿಗೆ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲದ ಗರಿಷ್ಠ ಮಿತಿ ಮತ್ತು ಲೆಕ್ಕ ಪರಿಶೋಧಕ ವಿಚಾರಗಳ ಕುರಿತಂತೆ ವೃತ್ತಿಪರ ನಿರ್ದೇಶಕ ಮಲ್ಲಿಕಾರ್ಜುನ್ ಕಣವಿ ಸಭೆಯ ಗಮನಕ್ಕೆ ತಂದರು.

ಹಿರಿಯ ನಿರ್ದೇಶಕ ಅಜ್ಜಂಪುರ ಶೆಟ್ರು ವಿಜಯ ಕುಮಾರ್ ಮಾತನಾಡಿ, ಚಂದಿರನ ಅಂಗಳದಲ್ಲಿ ವಿಕ್ರಮ್ ಲ್ಯಾಂಡರ್ ಸುಸೂತ್ರವಾಗಿ ಲ್ಯಾಂಡ್ ಆಗಿರುವುದು ದಕ್ಷಿಣ ಧ್ರುವ ಮುಟ್ಟಿದ ಮೊದಲ ದೇಶ ಭಾರತ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಚಂದ್ರಯಾನದ ಯಶಸ್ಸಿಗೆ ಕಾರಣರಾದ ಇಸ್ರೋ ಸಂಸ್ಥೆಯ ವಿಜ್ಞಾನಿಗಳನ್ನು ಅಭಿನಂದಿಸಿದರು.

ಬ್ಯಾಂಕಿನ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ, ನಿರ್ದೇಶಕರುಗಳಾದ ಪಲ್ಲಾಗಟ್ಟೆ ಶಿವಾನಂದಪ್ಪ, ಎಂ. ಚಂದ್ರಶೇಖರ್, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ವಿ. ವಿಕ್ರಮ್, ಶ್ರೀಮತಿ ಎ.ಆರ್. ಅರ್ಚನ ಡಾ. ರುದ್ರಮುನಿ, ವೃತ್ತಿಪರ ನಿರ್ದೇಶಕ ಮುಂಡಾಸ್ ವೀರೇಂದ್ರ, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಬಸವರಾಜಪ್ಪ ಬೆಳಗಾವಿ, ಜಂಬಿಗಿ ರಾಧೇಶ್, ಕೆ. ಕೊಟ್ರೇಶ್ ಅವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಡಿ.ಇ. ಸಿಂಧು ಅವರ ಪ್ರಾರ್ಥನೆ ನಂತರ ಜಾನಪದ ಅಕಾಡೆಮಿ ಸದಸ್ಯರಾದ ಶ್ರೀಮತಿ ರುದ್ರಾಕ್ಷಿಬಾಯಿ ನಾಡಗೀತೆಯನ್ನು ಹಾಡಿದರು. ನಿರ್ದೇಶಕರೂ ಆಗಿರುವ ವ್ಯವಸ್ಥಾಪನಾ ಮಂಡಳಿ ಸದಸ್ಯ ದೇವರಮನಿ ಶಿವಕುಮಾರ್ ಸ್ವಾಗತಿಸಿದರು. ನಿರ್ದೇಶಕ ನಲ್ಲೂರು ಎಸ್. ರಾಘವೇಂದ್ರ ಅವರಿಂದ ವಂದನಾರ್ಪಣೆ, ನಿರ್ದೇಶಕ ಇ.ಎಂ. ಮಂಜುನಾಥ ಅವರಿಂದ ಕಾರ್ಯಕ್ರಮ ನಿರೂಪಣೆ ನಡೆಯಿತು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್, ಉಪ ಪ್ರಧಾನ ವ್ಯವಸ್ಥಾಪಕ ಆರ್.ಎ. ಪ್ರಸನ್ನ ಅವರುಗಳು ಕಾರ್ಯಕ್ರಮ ಉಸ್ತುವಾರಿ ವಹಿಸಿದ್ದರು.

ವ್ಯವಸ್ಥಾಪಕರುಗಳಾದ ಪ್ರಧಾನ ಕಛೇರಿಯ ಕೆ.ಎಸ್. ಮಹೇಶ್, ಚೌಕಿಪೇಟೆಯ ಜಿ.ಕೆ. ವಿಜಯಕುಮಾರ್, ನರಸರಾಜ ರಸ್ತೆ ಹೆಚ್.ವಿ. ರುದ್ರೇಶ್, ಪಿ.ಜೆ. ಬಡಾವಣೆಯ ಶ್ರೀಮತಿ ಎಲ್.ಎಸ್. ಗೀತಾ, ಡಿ. ದೇವರಾಜ ಅರಸು ಬಡಾವಣೆಯ ಸಾನಂದ ಗಣೇಶ್, ಹೊನ್ನಾಳಿಯ ಹೆಚ್. ಕುಮಾರ್, ಆಡಳಿತ ಕಛೇರಿಯ ಡಿ.ಬಿ.ಎ. ಬಿ. ಎಸ್. ಪ್ರಶಾಂತ್ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

ಜಾನಪದ ಗಾಯಕ ಉಮೇಶ್ ನಾಯಕ್ ಚಿನ್ನಸಮುದ್ರ ಮತ್ತು ಜಿಲ್ಲಾ ವಾರ್ತಾ ಇಲಾಖೆಯ ನಿವೃತ್ತ ಸಹಾಯಕ ಬಿ.ಎಸ್. ಬಸವರಾಜ್ ಅವರುಗಳಿಂದ ಅವರುಗಳು ಜಾನಪದ ಗೀತೆಗಳನ್ನು ಹಾಡಿ ಗಮನ ಸೆಳೆದರು.

## ಸಂಸದ ಪ್ರಜ್ವಲ್ ರೇವಣ್ಣ ಆಯ್ಕೆ ಅಸಿಂಧು

(1ನೇ ಪುಟದಿಂದ) ಜಯ ಗಳಿಸಿ ಸಂಸತ್ ಪ್ರವೇಶಿಸಿದ್ದರು.

ಆದರೆ, ಪ್ರಮಾಣದಲ್ಲಿ ತಪ್ಪು ಮಾಹಿತಿ ನೀಡಿ ಜನರ ದಿಕ್ಕು ತಪ್ಪಿಸುವ ಕೆಲಸಕ್ಕೆ ಮುಂದಾಗಿದ್ದಾರೆ ಎಂದು ಮಂಜು ಅವರು, 2019ರ ಜೂ.19ರಂದು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರು. 2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆ ಸಮೀಪ ಇರುವಾಗಲೇ ರಾಜ್ಯದಲ್ಲಿ ಜೆಡಿಎಸ್ ಪಕ್ಷದಿಂದ ಏಕೈಕ ಸಂಸತ್ ಸದಸ್ಯರಾಗಿದ್ದ ಪ್ರಜ್ವಲ್ ತಮ್ಮ ಸ್ಥಾನ ಕಳೆದುಕೊಂಡಿದ್ದಾರೆ. ದೇವೇಗೌಡರು ಇದಕ್ಕೂ ಮೊದಲು ತಾವು ಪ್ರತಿನಿಧಿಸುತ್ತಿದ್ದ ಹಾಸನ ಕ್ಷೇತ್ರವನ್ನು ತಮ್ಮ ಮೊಮ್ಮಗನಿಗೆ ಬಿಟ್ಟು, ತುಮಕೂರು ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು.


## ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ.

**ಪಿ. ಅಂಡ್ ಎಸ್.ಸಿ. ಸಂಖ್ಯೆ 29/2023**

ಅರ್ಜಿದಾರರು : 1) ಕೊಟ್ರೇಶಿ ಹೆಚ್. ಬಿನ್ ಲೇಟ್ ಬಸಪ್ಪ ಎಂ. ವಯಸ್ಸು ಸುಮಾರು 66 ವರ್ಷ, 2) ಅಜ್ಜಯ್ಯ ಬಿ. ಬಿನ್ ಲೇಟ್ ಬಸಪ್ಪ ಎಂ. ವಯಸ್ಸು ಸುಮಾರು ವರ್ಷ, ವಾಸ : 920/53, 3ನೇ ತಿರುವು, ನಿಟುವಳ್ಳಿ ರಸ್ತೆ, ಲೇಬರ್ ಕಾಲೋನಿ, ದಾವಣಗೆರೆ ಸಿಟಿ. ವಿರುದ್ಧ/- ಎದುರುದಾರರು : ಯಾರೂ ಇಲ್ಲ.

### ಪತ್ರಿಕಾ ಪ್ರಕಟಣೆ

ಈ ಮೇಲ್ಕಾಣಿಸಿದ ಅರ್ಜಿದಾರರು ಸದರಿ ಪ್ರಕರಣದಲ್ಲಿ ದಾವಣಗೆರೆ ತಾಲ್ಲೂಕು ಹುಲಿಕಟ್ಟೆ ಗ್ರಾಮದ ಶ್ರೀಮತಿ ಬಸವಲಿಂಗಮ್ಮ ಕೋಂ ಪಕ್ಕೀರಪ್ಪ ನಾಯಕರ ಇವರು ಅರ್ಜಿದಾರರುಗಳ ಹೆಸರಿಗೆ ಕೆಳಕಂಡ ಅನುಸೂಚಿಯ ಜಮೀನನ್ನು ಮರಣ ಶಾಸನ ಯಾನೆ ವಿಲ್ ಮಾಡಿದ್ದು. ಆ ಕಾರಣ ಪ್ರೊಬೇಟ್ ಕೋರಿ ಮಾನ್ಯ ನ್ಯಾಯಾಲಯಾದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಅರ್ಜಿಗೆ ಸಂಬಂಧಪಟ್ಟಂತೆ ಯಾರದಾದರೂ ತಕರಾರು ಇದ್ದರೆ ದಿನಾಂಕ : 27.9.2023 ರಂದು ಬೆಳಿಗ್ಗೆ 11.00 ಘಂಟೆಗೆ ವೈಯಕ್ತಿಕವಾಗಿಯಾಗಲೀ ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಈ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 2023ರಂದು ಆಗಸ್ಟ್ ತಿಂಗಳಿನ 29ನೇ ದಿನದಂದು ಇದನ್ನು ನೀಡಲಾಗಿದೆ.

ಅನುಸೂಚಿಯ : ದಾವಣಗೆರೆ ತಾಲ್ಲೂಕು ಹುಲಿಕಟ್ಟೆ ಗ್ರಾಮದ ಸರ್ವೆನಂ. 57/10 ಹೊಸ ಸರ್ವೆ ನಂ. 57 ವಿಸ್ತೀರ್ಣ 1 ಎಕರೆ 20 ಗುಂಟೆಗೆ, ಚಕ್ಕುಬಂದಿ : ಪೂರ್ವಕ್ಕೆ : ದ್ಯಾಮವ್ವನಹಳ್ಳಿ ತಿಪ್ಪಣ್ಣನ ಜಮೀನು, ಪಶ್ಚಿಮಕ್ಕೆ : ಗುಡ್ಡ, ಉತ್ತರಕ್ಕೆ : ಬೋವಿ ಹೊಟ್ಲಪ್ಪನ ಜಮೀನು, ದಕ್ಷಿಣಕ್ಕೆ : ವೆಂಕಟ ತಿಮ್ಮಣ್ಣನ ಜಮೀನು.

ನ್ಯಾಯಾಲಯದ ಆದೇಶದ ಮೇರೆಗೆ

**ಸಹಿ/- ಅರ್ಜಿದಾರರ ಪರ ವಕೀಲರು, ವೀರೇಶ್ ಕೆ.ಎಂ.ಎಸ್., ನ್ಯಾಯವಾದಿಗಳು, ದಾವಣಗೆರೆ**

**ಸಹಿ/- ಮುಖ್ಯ ಆಡಳಿತಾಧಿಕಾರಿಗಳು, ಪ್ರಧಾನ ಜಿಲ್ಲಾ & ಸತ್ರ ನ್ಯಾಯಾಲಯ, ದಾವಣಗೆರೆ.**

# ಕಲ್ಪವೃಕ್ಷಕ್ಕೆ ಬೇಕು... ಕಾಯಕಲ್ಪ

*ಸೆಪ್ಟೆಂಬರ್ 2, ಅಂತರರಾಷ್ಟ್ರೀಯ ತೆಂಗು ದಿನಾಚರಣೆ*



ತೆಂಗು ಎಂಬುದು ಬರೀ ಬೆಳೆಯಲ್ಲ, ಇದು ಭೂ ಮಾತೆಯು ನಮಗೆ ನೀಡಿರುವ ಪೌಷ್ಟಿಕತೆಯ ಮಿಶ್ರಣ. ಭಾರತದಲ್ಲಿ ತೆಂಗನ್ನು ದೈವಾಂಶದ ಸಂಕೇತವಾಗಿ ಬಳಸುತ್ತಾರೆ. ತೆಂಗಿನ ಮೂಲ ನಿಖರವಾಗಿ ತಿಳಿಯದಿದ್ದರೂ, ವರದಿಯ ಪ್ರಕಾರ ಸುಮಾರು ಸಾವಿರಾರು ವರ್ಷಗಳ ಹಿಂದಿನ ಇದರ ಇರುವಿಕೆಯನ್ನು ಭಾರತ ಶ್ರೀಲಂಕಾ ಹಾಗೂ ಆಸ್ಟ್ರೇಲಿಯಾದಲ್ಲಿ ಕಾಣಬಹುದಾಗಿದೆ. ವಾಸ್ತವ ಏನೆಂದರೆ ತೆಂಗಿನ ಭೌಗೋಳಿಕ ಹರಡುವಿಕೆಯು ಸಮುದ್ರದ ಮೂಲಕ, ವಲಸಿಗರ ಮೂಲಕ ಏಷ್ಯಾದ ತೀರಗಳಿಂದ ಹಿಡಿದು ಪಾಶ್ಚಾತ್ಯ ತೀರಗಳವರೆಗೆ ತಲುಪಿದೆ.

1930 ರ ವರೆಗೂ ಅಮೇರಿಕಾದಲ್ಲಿ ಬ್ರೆಡ್ಡು ತಯಾರಿಕೆಯಿಂದ ಹಿಡಿದು ಎಲ್ಲಾ ಪ್ರಮುಖ ಖಾದ್ಯಗಳಲ್ಲಿ ತೆಂಗಿನೆಣ್ಣೆಯನ್ನು ಬಳಸಲಾಗುತ್ತಿತ್ತು. ನಂತರದ ದಿನಗಳಲ್ಲಿ ಕೊಬ್ಬಿನ ಅಂಶ ಎಂಬ ದೈತ್ಯದ ಮೂಲಗಳು ಪಾಶ್ಚಿಮಾತ್ಯದಲ್ಲೇ ಹುಟ್ಟಿಕೊಂಡ ಪರಿಣಾಮ ತೆಂಗು ಮೂಲೆ ಗುಂಪಾಯಿತು, ಅಲ್ಲದೆ ಅವರ ವ್ಯಾಪಾರೀಕರಣದ ಜಾಣ್ಮೆಯಿಂದ ಕಲ್ಪವೃಕ್ಷಕ್ಕೆ ಕಪ್ಪುಚುಕ್ಕೆಯಾಗಿ ಮಾರ್ಪಟ್ಟಿತು. ಅವರ ವಾದವು ಏನಾಗಿತ್ತೆಂದರೆ ತೆಂಗು ಕೊಬ್ಬಿನ ಅಂಶದ ಆಗರ. ಆದರೆ ಜೀವ ರಸಾಯನ ಶಾಸ್ತ್ರದ ಪ್ರಕಾರ ಕೊಬ್ಬಿನ ಅಂಶದ ಪ್ರಾಥಮಿಕ ಮೂಲ ಪ್ರಾಣಿಗಳೇ ಹೊರತು ಸಸ್ಯಗಳಲ್ಲ. ಮುಂದುವರೆದು ತೆಂಗಿನ ಎಣ್ಣೆಯು ಸ್ಯಾಚ್ಯುರೇಟೆಡ್ ಫ್ಯಾಟಿ ಆಸಿಡ್ಸ್‌ಗಳಿಂದ ಕೂಡಿದ್ದು, ಇದು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು. ಆದರೆ ಇದರ ನೈಜತೆಯನ್ನು ಇತ್ತೀಚಿನ ವೈಜ್ಞಾನಿಕ ವರದಿಗಳು ತಳ್ಳಿ ಹಾಕುತ್ತಿವೆ.

ಮೂಲತಃ ಈ ಎಣ್ಣೆಯನ್ನು 7 ವಿವಿಧ ರೂಪಗಳಲ್ಲಿ ಕಾಣಬಹುದಾಗಿದೆ ಹಾಗೂ ಇವುಗಳನ್ನು ತೆಂಗಿನ ಎಣ್ಣೆ ಹಾಗೂ ಕೊಬ್ಬರಿ ಎಣ್ಣೆ ಎಂದು ವಿಂಗಡಿಸಬಹುದು.

ತೆಂಗಿನ ಎಣ್ಣೆ ಹಾಗೂ ಕೊಬ್ಬರಿ ಎಣ್ಣೆಗೆ ಇರುವ ವ್ಯತ್ಯಾಸ... ಕಾಯನ್ನು ಒಣಗಿಸಿ ಅದರ ಕೊಬ್ಬರಿಯನ್ನು ಗಾಣದ ಮೂಲಕ ಅರೆದು ತೆಗೆಯುವುದು ಕೊಬ್ಬರಿ ಎಣ್ಣೆ, ಕಾಯಿಯನ್ನು ಒಡೆದ ತಕ್ಷಣ ಅದರ ಹಸಿ ಕೊಬ್ಬರಿಯಿಂದ ಯಾವುದೇ ರಾಸಾಯನಿಕಗಳನ್ನು ಬಳಸದೆ, ಕಾಯಿಸದೆ ತೆಗೆಯುವುದು ತೆಂಗಿನ ಎಣ್ಣೆ. ಇದನ್ನು ಸುಮಾರು ಐನೂರು ದಿನಗಳವರೆಗೆ ಶೇಖರಿಸಿಡಬಹುದು. ವೈಜ್ಞಾನಿಕವಾಗಿ ಹೇಳುವುದಾದರೆ ತಾಯಿಯ ಎದೆ ಹಾಲು ಬಿಟ್ಟರೆ ಮಗುವಿನ ಬಾಯಲ್ಲಿ ಜೀರ್ಣಗೊಳ್ಳುವ ಏಕೈಕ ನೈಸರ್ಗಿಕ ವಸ್ತು ಎಂದರೆ ಅದು ತೆಂಗಿನ ಎಣ್ಣೆ. ಈ ಎರಡೂ ಪದಾರ್ಥಗಳಲ್ಲಿಯೂ ಸೋಡಿಯಂ ಮೋನೋ ಲೌರೇಟ್‌ಎಂಬ ಮೀಡಿಯಮ್ ಚೈನ್ ಫ್ಯಾಟಿ ಆಸಿಡ್ ಅಂಶವು ಮಗುವಿನ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಇದಲ್ಲದೆ ತೆಂಗಿನ ಎಣ್ಣೆಯು ದೇಹ ರಚನೆಗೆ ಸಹಕಾರಿಯಾಗುವಂತಹ ನಿಯಮಿತ ಕೊಬ್ಬಿನ ಪ್ರಮಾಣವನ್ನು ಸರಿದೂಗಿಸುತ್ತದೆ. ವೈದ್ಯಲೋಕ ಕೂಡ ಈ ಅಂಶವನ್ನು ಒಪ್ಪಿಕೊಂಡಿದೆ. ತೆಂಗಿನ ಎಣ್ಣೆಯಲ್ಲಿ ಉಪ್ಪಿನ ಅಂಶವೂ ಸೇರಿದಂತೆ ಒಟ್ಟು 24 ವಿವಿಧ ಬಗೆಯ ದೇಹದ ಸಮೃದ್ಧ ಬೆಳವಣಿಗೆಗೆ ಮತ್ತು ಸ್ಥಿರ ಆರೋಗ್ಯಕ್ಕೆ ಬೇಕಾದ ಅಂಶಗಳನ್ನು ಹೊಂದಿದೆ. ಇದಲ್ಲದೆ ತೆಂಗಿನ ಎಣ್ಣೆಯನ್ನು ಹೃದಯ ಸಂಬಂಧಿ ಕಾಯಿಲೆಗಳನ್ನು ಗುಣಪಡಿಸಲು ವಿಶೇಷವಾಗಿ ಬಳಸಲಾಗುತ್ತಿದೆ. ಮುಂದುವರೆದು ಮೆದುಳಿಗೆ ಸಂಬಂಧಿಸಿದ, ಸಕ್ಕರೆ ಕಾಯಿಲೆಗಳನ್ನು ಮೆಟ್ಟಿ ನಿಲ್ಲಬಲ್ಲ ಶಕ್ತಿಯನ್ನು ಹೊಂದಿರುವ ತೆಂಗಿನ ಎಣ್ಣೆಯನ್ನು ಪಾಶ್ಚಾತ್ಯರು ಈಗೀಗ ಮುಕ್ತ ಮನಸ್ಸಿನೊಂದಿಗೆ ಒಪ್ಪಿಕೊಳ್ಳುತ್ತಿದ್ದಾರೆ. ತೆಂಗಿನ ಎಣ್ಣೆ ಹಸಿ ಕೊಬ್ಬರಿಯಿಂದ ಮಾಡಲ್ಪಟ್ಟಿದೆ ಹಾಗೂ ಇದರಲ್ಲಿ ಯಾವುದೇ ರಾಸಾಯನಿಕಗಳು ಇರುವುದಿಲ್ಲ. ಆದರೆ ನಾವು ಬಳಸುವ ರಿಫೈನ್ಡ್ ಪಾಲಿ ಅನ್ ಸ್ಯಾಚುರೇಟೆಡ್ ಫ್ಯಾಟ್ ವೆಜಿಟೇಬಲ್ ಆಯಿಲ್ ದೇಹಕ್ಕೆ ತುಂಬಾ ಅಪಾಯಕಾರಿ. ಬಾಯಿ ಚಪಲದ ರೇಸಿಗೆ ಬಿದ್ದಂತೆ ತಿನ್ನುವ ನಾವುಗಳು ತೆಂಗಿನ ಎಣ್ಣೆಯ ಅಂತರಾಳದ ರುಚಿಯನ್ನು ಅರಿಯಲು ಸಂಪೂರ್ಣ ವಿಫಲರಾಗಿದ್ದೇವೆ.

1 ಚಮಚ ತೆಂಗಿನ ಎಣ್ಣೆಯು 117 ಕ್ಯಾಲರಿ ಹಾಗೂ 13.6ಗ್ರಾಂ ನಷ್ಟು ಫ್ಯಾಟ್ ಹೊಂದಿದೆ. ಇದರ ಮೀಡಿಯಂ ಚೈನ್ ಟ್ರೈಗ್ಲಿಸರೈಡ್ಸ್ ಸುಲಭವಾಗಿ ಶಕ್ತಿಯಾಗಿ ಮಾರ್ಪಡುತ್ತದೆ.ಇತ್ತೀಚಿನ ಅನೇಕ ಸಂಶೋಧನೆಗಳ ಫಲವಾಗಿ ತೆಂಗಿನ ಎಣ್ಣೆಯು ನಿಧಾನವಾಗಿ ಅಡುಗೆ ಮನೆಯಿಂದ ಹೊರಬಂದು ಹಲವಾರು ಕಾಯಿಲೆಗಳಿಗೆ ರಾಮಬಾಣವಾಗಿರುವುದನ್ನು ಅಂತರರಾಷ್ಟ್ರೀಯ ಸಂಸ್ಥೆಗಳೂ ಪುರಸ್ಕರಿಸಿವೆ. ಇದಕ್ಕೆ ಪೂರಕವಾದ ಕೆಲವು ಉದಾಹರಣೆಗಳನ್ನು ಈ ಕೆಳಗೆ ಕಾಣಬಹುದು.

* ಥೈರಾಯ್ಡ್ ಸಮಸ್ಯೆಗೆ ಪರಿಹಾರ (ವಿಶೇಷವಾಗಿ ಮಹಿಳೆಯರಲ್ಲಿ).
* ನಿಯಮಿತ ಸೇವನೆಯು ಖಚಿತವಾಗಿ ಗ್ಯಾಸ್ಟ್ರಿಕ್ ಹಾಗೂ ಮೂಲವ್ಯಾಧಿಯಂತಹ ಸಮಸ್ಯೆಗಳನ್ನು ನಿವಾರಿಸುತ್ತದೆ.
* ಸಕ್ಕರೆ ರೋಗಿಗಳಿಗೆ ಉತ್ತಮ ಫಲಿತಾಂಶ ಕೊಡುತ್ತದೆ.
* ಹೃದಯ ಸಂಬಂಧಿ ಕಾಯಿಲೆಗಳನ್ನು ದೂರ ವಿಟ್ಟು ಮಾರಕ ಕ್ಯಾನ್ಸರ್ ತಡೆಗಟ್ಟುವಲ್ಲಿ ಸಹಾಯ ಮಾಡುತ್ತದೆ.
* ಸ್ಥೂಲಕಾಯವನ್ನು ಸರಿದೂಗಿಸುತ್ತದೆ.
* ವಿಶೇಷವಾಗಿ ತಲೆ ಕೂದಲಿನ ನೈಸರ್ಗಿಕ ಆರೈಕೆ ಮಾಡುತ್ತದೆ.

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಈ ದಿನಾಚರಣೆಯನ್ನು 'ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಗೆ ತೆಂಗು ವಲಯವನ್ನು ಉಳಿಸಿಕೊಳ್ಳುವುದು' ಎಂಬ ವಿಷಯದೊಂದಿಗೆ ಆಚರಿಸಲಾಗುತ್ತಿದೆ. ಅಂತರರಾಷ್ಟ್ರೀಯ ಕಾರ್ಯ ಸಂಸ್ಥೆಯಾದ ಏಷಿಯನ್ ಅಂಡ್ ಪೆಸಿಫಿಕ್ ಕೋಕೋನಟ್ ಕಮ್ಯೂನಿಟಿ (APCC)ಯು ಇಂಡೋನೇಷ್ಯಾದ ಜಕಾರ್ತದಲ್ಲಿ ತನ್ನ ಕಾರ್ಯಸಂಸ್ಥೆಯನ್ನು ಹೊಂದಿದೆ.

ವಿಶ್ವದಾದ್ಯಂತ ತೆಂಗು ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ, ಸಹಕಾರ ನೀಡುವ ಹಾಗೂ ಪೋಷಿಸುವ ಮೂಲ ಧ್ಯೇಯದೊಂದಿಗೆ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಈ ಸಂಸ್ಥೆಯು ಹದಿನೆಂಟು ದೇಶಗಳನ್ನು ಒಳಗೊಂಡಿದ್ದು, ಭಾರತವೂ ಕೂಡ ಇದರ ಸದಸ್ಯತ್ವವನ್ನು ಹೊಂದಿದೆ. ಭಾರತದಲ್ಲಿ 1950-51ನೇ ಸಾಲಿನಲ್ಲಿ ತೆಂಗನ್ನು 626.5 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತಿತ್ತು, ಇತ್ತೀಚಿನ ವರದಿಗಳ ಪ್ರಕಾರ 2 ಸಾವಿರ ಹೆಕ್ಟೇರ್‌ಗಿಂತಲೂ ಹೆಚ್ಚಿನ ಪ್ರದೇಶ ದಲ್ಲಿ ಬೆಳೆಯಲಾಗುತ್ತಿದೆ. ಪ್ರತಿ ವರ್ಷ ತೆಂಗು ಉತ್ಪಾದನೆಯ ಪ್ರಮಾಣ ಹೆಚ್ಚಾಗುತ್ತಿದ್ದರೂ ಅದರ ಸಂಪೂರ್ಣ ಪ್ರತಿಫಲ ಪಡೆಯುವಲ್ಲಿ ನಾವುಗಳು ವಿಫಲರಾಗುತ್ತಿದ್ದೇವೆ.

ಸಂಪೂರ್ಣ ಮಾಹಿತಿಗಾಗಿ ಸರ್ಕಾರವು ತೆಂಗು ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಿದ್ದು, ಇದರ ಮುಖೇನ ಅನೇಕ ರೈತಪರ ಹಾಗೂ ತೆಂಗು ಉತ್ಪನ್ನ ಆಧರಿತ ಉದ್ಯಮಿಗಳ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಯಶಸ್ವಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಯುವ ಉದ್ಯಮಿಗಳಿಗೆ ಬೇಕಾದಂತಹ ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಸುಮಾರು ಹದಿನೈದಕ್ಕೂ ಹೆಚ್ಚು ಉಪ ಉತ್ಪನ್ನಗಳ ತಯಾರಿಕೆ ಹಾಗೂ ಅದಕ್ಕೆ ಬೇಕಾದಂತಹ ಹಣಕಾಸಿನ ನೆರವನ್ನು ನೀಡುತ್ತಾ ಬಂದಿದೆ.

ಕೊನೆಯದಾಗಿ, ಅಂತರರಾಷ್ಟ್ರೀಯ ತೆಂಗು ದಿನಾಚರಣೆ ಮೂಲ ಉದ್ದೇಶ ಹಾಗೂ ಇತ್ತೀಚಿನ ಸಂಶೋಧನೆಗಳ ಸಮಾಗಮ ಜನಸಾಮಾನ್ಯರಲ್ಲಿ ನೈಜತೆಯನ್ನು ಅರ್ಥ ಮಾಡಿಸುವ ಪ್ರಯತ್ನಗಳನ್ನು ಮಾಡುತ್ತಿವೆ. ಈ ಎಲ್ಲಾ ಅಂಶಗಳನ್ನು ಗಮನಿಸಿ ತೆಂಗನ್ನು ಕೇವಲ ತೋಟಗಾರಿಕೆ ಬೆಳೆ ಎಂದು ಪರಿಗಣಿಸದೇ ವಿಶೇಷ ಬೆಳೆಯನ್ನಾಗಿ ಮಾರ್ಪಡಿಸುವುದು ಸೂಕ್ತ. ಸಂಬಂಧಿಸಿದ ಇಲಾಖೆಗಳು ಈ ನಿಟ್ಟಿನಲ್ಲಿ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ.

**- ಡಾ. ಜಗದೀಶ್ ಶ್ಯಾಗಲೆ ಎಂ.ಆರ್.** ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ. ಮೊ : 9740776111

# ಶಿಕ್ಷಕರು ಉತ್ತಮ ಶಿಕ್ಷಣ ನೀಡಿ ಮಕ್ಕಳನ್ನು ಸತ್ಪ್ರಜೆಗಳನ್ನಾಗಿಸಬೇಕು



ಹರಪನಹಳ್ಳಿ, ಸೆ.1- ಈ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ ದೇಶದ ಸತ್ಪ್ರಜೆಗಳನ್ನಾಗಿ ಮಾಡಬೇಕು ಎಂದು ಸಂಸದ ವೈ. ದೇವೇಂದ್ರಪ್ಪ ಹೇಳಿದರು. ತಾಲ್ಲೂಕಿನ ಅರಸೀಕೆರೆ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಸಮವಸ್ತ್ರ ವಿತರಿಸಿ ಮಾತನಾಡಿದರು

**ಹರಪನಹಳ್ಳಿ ಕಾರ್ಯಕ್ರಮದಲ್ಲಿ ಸಂಸದ ವೈ. ದೇವೇಂದ್ರಪ್ಪ**

ನಾನು ಇದೇ ಶಾಲೆಯಲ್ಲಿ ಓದಿದ್ದೇನೆ, ಈಗ ಈ ಶಾಲೆಗೆ 100 ವರ್ಷ ತುಂಬಿದೆ. ಈ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು ಉನ್ನತ ಹುದ್ದೆಯಲ್ಲಿದ್ದಾರೆ. ಸಂಸದರ ಅನುದಾನದಲ್ಲಿ 5ನೇ ತರಗತಿಯಿಂದ 10ನೇ ತರಗತಿ ಮಕ್ಕಳಿಗೆ ಹಾಸ್ಟೆಲ್ ಮಂಜೂರು ಮಾಡಲಾಗಿದೆ. ಈ ಶಾಲೆಗೆ ನಾಲ್ಕು ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ. ಹೊಸದಾಗಿ ಹೈಟೆಕ್ ಶೌಚಾಲಯ, ಅಡುಗೆ ಕೋಣೆ ಮಂಜೂರಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷ ಡಿ. ಹನುಮಂತಪ್ಪ, ಉಪಾಧ್ಯಕ್ಷೆ ಅನಿತಾ, ಸದಸ್ಯ ವೈ.ರಂಗಪ್ಪ, ಮುಖಂಡರಾದ ಅಬ್ದುಲ್ ಸಾಬ್, ಶಾಲಾ ಪ್ರಭಾರಿ ಮುಖ್ಯ ಗುರುಗಳಾದ ಹಾಲಪ್ಪ, ಸಹ ಶಿಕ್ಷಕರಾದ ಬಂದಮ್ಮ, ಮಾಲತೇಶ್ ಪಾಟೀಲ್, ಕೆಂಪಪ್ಪ, ರೇಣುಕಾ, ಚೇತನ, ಗಿರಿಜಾ, ತಾಸೀನಾ ಬೇಗಂ ಹಾಗೂ ಸೌಜನ್ಯ ಹಾಜರಿದ್ದರು.

# ಹಳೇಬಾತಿಯಲ್ಲಿ ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಉಚಿತ ಹೃದಯ, ರಕ್ತದೊತ್ತಡ, ಮಧುಮೇಹ ತಪಾಸಣಾ ಶಿಬಿರವನ್ನು ಹಳೇಬಾತಿ ಶ್ರೀ ಆಂಜನೇಯ ದೇವಸ್ಥಾನ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2.30ರವರೆಗೆ ಏರ್ಪಡಿಸಲಾಗಿದೆ. ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಪ್ರೀತಿ ಆರೈಕೆ ಟ್ರಸ್ಟ್ ಇವರ ಸಹಯೋಗದಲ್ಲಿ ನಡೆಯುವ ಶಿಬಿರದ ನೇತೃತ್ವವನ್ನು ಹಿರಿಯ ವೈದ್ಯ ಡಾ. ಟಿ.ಜಿ. ರವಿಕುಮಾರ್ ವಹಿಸಲಿದ್ದಾರೆ. ಸಂಪರ್ಕಿಸಿ : 91644 65550, 97317 82463.

# ಅಮೆರಿಕಾದ ಶಿಕಾಗೋದಲ್ಲಿ ಅದಿತಿ ಆಚಾರ್ಯ ಭರತನಾಟ್ಯ



ಬಹುಮುಖ ಪ್ರತಿಭೆ ಅಂತರರಾಷ್ಟ್ರೀಯ ಖ್ಯಾತಿಯ ಬಾಲ ಕಲಾವಿದೆ ಕುಮಾರಿ ಅದಿತಿ ಆಚಾರ್ಯ ಯುಎಸ್‌ಎ ಅವಳ ಭರತನಾಟ್ಯ ರಂಗಪ್ರವೇಶ ಅಮೆರಿಕದ ಶಿಕಾಗೋದಲ್ಲಿ ತುಂಬಾ ಅದ್ಭುತವಾಗಿ, ಶಾಸ್ತ್ರ ಬದ್ಧವಾಗಿ ನಡೆಯಿತು.

ಭಾರತೀಯರು ಹಾಗೂ ಅಮೆರಿಕಾದವರು ಸೇರಿದ್ದ ಸಮಾರಂಭದಲ್ಲಿ ಮೊದಲಿಗೆ ಪುಷ್ಪಾಂಜಲಿ, ಗಣೇಶ ಸ್ತುತಿ, ಕೌತ್ವಂ, ಶಬ್ದಂ, ವರ್ಣಂ, ಪದಂ, ಕೀರ್ತನೆ, ತನಿ ಆವರ್ತಂ, ದೇವರ ನಾಮ, ತಿಲ್ಲಾನ, ಮಂಗಳಂ ಪ್ರತಿಯೊಂದು ನೃತ್ಯದಲ್ಲಿ ಹಾವಭಾವ ಅಭಿನಯ ಎಲ್ಲವನ್ನು ತುಂಬಾ ಅದ್ಭುತವಾಗಿ ಪ್ರದರ್ಶಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಅದಿತಿ ಆಚಾರ್ಯ ಮೂಲತಃ ದಾವಣಗೆರೆಯ ಕಲಾಪ್ರತಿಭೆ, ವಿದುಷಿ ಶ್ರೀಮತಿ ಆಶಾ ಅಡಿಗ ಆಚಾರ್ಯ ಅವರ ಮಗಳು ಹಾಗೂ ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಚಂದ್ರಶೇಖರ ಅಡಿಗರವರ ಮೊಮ್ಮಗಳು. ಅದಿತಿಗೆ ತಾಯಿ ಯೇ ಗುರು. ಅದಿತಿ ಆಚಾರ್ಯ ಹತ್ತನೇ ತರಗತಿಯಲ್ಲಿ ಓದುತ್ತಿದ್ದು, ಸಂಗೀತ, ನೃತ್ಯ, ಇಂಡಿಯನ್ ವಯೋಲಿನ್ ಮತ್ತು ವೆಸ್ಟರ್ನ್ ವಯೋಲಿನ್ ಸಹ ಅಭ್ಯಾಸ ಮಾಡುತ್ತಿದ್ದು, ಸಾಕಷ್ಟು ಕಾರ್ಯಕ್ರಮ ಕೊಟ್ಟಿದ್ದಾರೆ. ಅನೇಕ ನೃತ್ಯರೂಪಕಗಳಲ್ಲಿ ಮುಖ್ಯ ಪಾತ್ರದಲ್ಲಿ ಅಭಿನಯಿಸಿರುವರು. ಇವರು ಅಮೆರಿಕದ ಟೆಕ್ಸಾಸ್, ಸೆಂಟ್‌ಲೂಯಿಸ್, ಇಲಿನಾಯ್ಸ್, ಇಂಡಿಯಾ ಮುಂತಾದ ಕಡೆ ಪ್ರದರ್ಶನ ನೀಡಿರುವರು.

ಈ ರಂಗ ಪ್ರವೇಶ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಭಾರತ ಸರ್ಕಾರದ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಪ್ರಖ್ಯಾತ ಭರತನಾಟ್ಯ ಕಲಾವಿದೆ ಮೈಸೂರಿನ ವಿದುಷಿ ಡಾ. ವಸುಂಧರ ದೊರೆಸ್ವಾಮಿ, ನೃತ್ಯ ಗುರು ವಿದುಷಿ ಶ್ರೀಮತಿ ಕೃಪಾ ಭಾಸ್ಕರ್ ಅಮೆರಿಕ, ವಿದುಷಿ ಡಾ. ಚೇತನ ಆಚಾರ್ ಅಮೆರಿಕ ಹಾಗೂ ಶ್ವೇತಾ ಬೈಡ್ ಅರೋರ ಅಮೆರಿಕ ಮೇಯರ್, ಶ್ರೀಮತಿ ಚಂದ್ರಶೇಖರ ಅಡಿಗ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ದಾವಣಗೆರೆ, ಮತ್ತು ಗುರು ವಿದುಷಿ ಆಶಾ ಅಡಿಗ ಆಚಾರ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ವಿದ್ವಾನ್ ರಘುರಾಮ್ ರಾಜಗೋಪಾಲ್, ವಿದ್ವಾನ್ ಎಸ್.ವಿ. ಬಾಲಕೃಷ್ಣ, ವಿದ್ವಾನ್ ವಿವೇಕ ಕೃಷ್ಣ, ವಿದ್ವಾನ್ ಗೋಪಾಲ ವೆಂಕಟರಮಣರಾವ್, ರಿದಂ ಪ್ಯಾಡ್ ವಿದ್ವಾನ್ ಅರುಣ್‌ಕುಮಾರ್ ಹಿನ್ನೆಲೆ ಸಂಗೀತ ನೀಡಿದರು.

ಸಂದೇಶ್ ಭಾರ್ಗವ್, ಡಾ. ರೂಪಾ ಕಾರ್ಯಕ್ರಮ ನಿರೂಪಿಸಿದರು. ಶ್ರೀನಿವಾಸ ಆಚಾರ್ಯ ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

ದಾವಣಗೆರೆಯ ವಿದುಷಿ ಆಶಾ ಅಡಿಗ ಆಚಾರ್ಯ ಕಳೆದ 17 ವರ್ಷಗಳಿಂದಲೂ ಪತಿ ಶ್ರೀನಿವಾಸ ಆಚಾರ್ಯರೊಂದಿಗೆ ಅಮೆರಿಕದಲ್ಲಿ ನೆಲೆಸಿದ್ದು ಆಚಾರ್ಯ ಪರ್ಫಾರ್ಮಿಂಗ್ ಆರ್ಟ್ಸ್ ಅಕಾಡೆಮಿಯ ಮೂಲಕ ಸಂಗೀತ ಮತ್ತು ನೃತ್ಯವನ್ನು ನೂರಾರು ಮಕ್ಕಳಿಗೆ ಕಲಿಸುತ್ತಿದ್ದು, ಅವರಿಗೆ ಜ್ಯೂನಿಯರ್ ಸೀನಿಯರ್ ಪರೀಕ್ಷೆಯನ್ನು ಕಟ್ಟಿಸಿರುತ್ತಾರೆ. ಹಾಗೆ ಇವರು ಇಲ್ಲಿಯವರೆಗೆ 23 ಶಿಷ್ಯರಿಗೆ ರಂಗ ಪ್ರವೇಶವನ್ನು ಮಾಡಿಸಿರುತ್ತಾರೆ. ಅನೇಕ ನೃತ್ಯ ರೂಪಕಗಳನ್ನು ನಿರ್ದೇಶಿಸಿ ಪ್ರದರ್ಶನ ನೀಡಿರುವ ಹೆಗ್ಗಳಿಕೆ ಇವರದು.

# ಲಕ್ಷ್ಮಿ ಸೊಸೈಟಿಯಲ್ಲಿ ಅವ್ಯವಹಾರದ ಆರೋಪ



**ಸಹಕಾರ ಸಚಿವರಿಗೆ ದೂರು**

ದಾವಣಗೆರೆ, ಸೆ.1- ನಗರದ ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ 2011-12ರಿಂದಲೂ ಕೋಟಿಗಟ್ಟಲೇ ಅವ್ಯವಹಾರ ನಡೆದಿದೆ ಎನ್ನಲಾಗಿದ್ದು, ಸೊಸೈಟಿ ಆಡಳಿತ ಮಂಡಳಿ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ಸಹಕಾರ ಸಚಿವ ಕೆ. ಎನ್. ರಾಜಣ್ಣ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು ಎಂದು ಎಂ.ಬಿ.ಜಗನ್ನಾಥ ರಾವ್ ತಿಳಿಸಿದ್ದಾರೆ.

ಸೊಸೈಟಿಯ ಸುಮಾರು ಜನ ಠೇವಣಿದಾರರು ನಿಧನರಾಗಿದ್ದಾರೆ, ಸುಮಾರು ಜನ ನಿರ್ಗತಿಕರಾಗಿದ್ದಾರೆ, ಸಾವಿರಾರು ಬಡ ಜನರಿಗೆ ಅನ್ಯಾಯವಾಗಲು ಸೊಸೈಟಿ ಕಾರ್ಯದರ್ಶಿ, ಹಿಂದಿನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳೇ ಮೂಲ ಕಾರಣರಾಗಿದ್ದಾರೆ. ಇವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಚಿವರನ್ನು ಒತ್ತಾಯಿಸಲಾಯಿತು. ತಮ್ಮ ಮನವಿಗೆ ಸಚಿವರು ಸ್ಪಂದನೆ ಮಾಡಿದ್ದು, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಜಗನ್ನಾಥರಾವ್ ತಿಳಿಸಿದ್ದಾರೆ.

# ಬೆಳ್ಳೂಡಿಯಲ್ಲಿ ಇಂದು ಆಂಜನೇಯ ಸ್ವಾಮಿ ಪುನಃ ಪ್ರತಿಷ್ಠಾಪನೆ

ಬೆಳ್ಳೂಡಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿಗೆ ಇಂದು ಬ್ರಾಹ್ಮೀ ಮುಹೂರ್ತದಲ್ಲಿ ವಿವಿಧ ಪೂಜೆ, ಅಭಿಷೇಕಗಳೊಂದಿಗೆ ಪುನಃ ಪ್ರಾಣ ಪ್ರತಿಷ್ಠಾಪನೆಯನ್ನು ರಟ್ಟಿಹಳ್ಳಿ ಕಬ್ಬಿಣ ಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ನೆರವೇರಿಸಲಾಗುವುದು. ನಂತರ ಧಾರ್ಮಿಕ ಸಭೆಯನ್ನು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾಂದ ಪುರಿ ಸ್ವಾಮೀಜಿ, ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ.


**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರದ ಮೊದಲನೆ ಬಸ್ ಸ್ಟಾಪ್ ಹತ್ತಿರ 2BHK ಮನೆಗಳು ಲೀಸ್‌ಗಿವೆ.
ಸಂಪರ್ಕಿಸಿ : 97400 01129

**ಮನೆಗಳು ಮಾರಾಟಕ್ಕಿವೆ**
1) 50x30 West 2) 30x50 West ಡಾಲರ್ಸ್ ಕಾಲೋನಿಯಲ್ಲಿ, 3) 30x50 East 60 ಲಕ್ಷ ಇದೆ. KHBಯಲ್ಲಿ. 4) 30x50 East.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
98457 75768
88846 75884

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಹೊಸ ಬಡಾವಣೆಯಲ್ಲಿ 30x40 ಪಶ್ಚಿಮ-ದಕ್ಷಿಣ ಕಾರ್ನರ್ 30x40 ಪಶ್ಚಿಮ, 30x40 ಪೂರ್ವ 30x50 ಪೂರ್ವ, 30x50 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗೆ ಇದೆ**
2BHK ಸಸ್ಯಹಾರಿಗಳಿಗೆ ಮಾತ್ರ, ನಲ್ಲಿ, ಬೋರ್ ನೀರು ಇದೆ. 20×30, #696/19, ಶ್ರೀನಿವಾಸ ನಗರ, 10ನೇ ಕ್ರಾಸ್, ದಾವಣಗೆರೆ. ವಿಚಾರಿಸಿ
98800 68009

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಸೈಟುಗಳು ಮಾರಾಟಕ್ಕಿವೆ**
ಜಯನಗರದ 'C' ಬ್ಲಾಕ್‌ನಲ್ಲಿ 30x50 ಪಶ್ಚಿಮ ಅಕ್ಕ-ಪಕ್ಕ, ಕುಂದವಾಡ ರಸ್ತೆ ಹತ್ತಿರ, ಬಸವೇಶ್ವರ ಲೇಔಟ್‌ನಲ್ಲಿ 30x50 ಪೂರ್ವ, ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಪನ್ನೀರ್ ಹಾಗೂ ಗಿರ್ ಹಾಲು ದೊರೆಯುತ್ತದೆ**
ನಮ್ಮಲ್ಲಿ ಆರ್ಗ್ಯಾನಿಕ್ ಪನ್ನೀರ್ ದೊರೆಯುತ್ತದೆ, ಪನ್ನೀರ್ ಬಲ್ಕ್ ಆರ್ಡರ್ ಇದ್ದಲ್ಲಿ ಮಾಡಿಕೊಡಲಾಗುವುದು, A2 ಗಿರ್ ಹಸುವಿನ ಹಾಲು ಸಿಗುತ್ತದೆ, ಸಂಪರ್ಕಿಸಿ : ನಿರಂಜನ್
99641 11189

**ಕಮರ್ಷಿಯಲ್ ಅಥವಾ ಇಂಡಸ್ಟ್ರಿಯಲ್ ಸೈಟುಗಳು ಮಾರಾಟಕ್ಕಿವೆ**
ಸೋನಾಲಿಕ ಟ್ರ್ಯಾಕ್ಟರ್ ಷೋರೂಮ್ ಹಿಂಭಾಗ, 40x68 ಅಳತೆಯ 2 ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ : 97424 34049

**ಸೈಟುಗಳು ಮಾರಾಟಕ್ಕಿವೆ**
ಗ್ಲಾಸ್ ಹೌಸ್ ಹತ್ತಿರ 65x147 East, 30x50 West, 30x40 East, 30x40 Corner, 60x40 North-East Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕೆಲಸಕ್ಕೆ ಬೇಕಾಗಿದ್ದಾರೆ**
ನಮ್ಮ ಮನೆಯಲ್ಲಿ 4 ರಿಂದ 6 ಜನರಿಗೆ. ಸಸ್ಯಾಹಾರಿ ಹಾಗು ಮಾಂಸಾಹಾರಿ ಅಡುಗೆ ಮಾಡುವ ಹೆಂಗಸರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ.
ಅಭಿಷೇಕ್ ಟಿಂಬರ್ & ಸಾಮಿಲ್
# 24 ಆರ್.ಎಂ.ಸಿ. ಲಿಂಕ್ ರಸ್ತೆ, ವಿನಾಯಕ ಚಿತ್ರಮಂದಿರದ ಹತ್ತಿರ, ಬಂಬೂ ಬಜಾರ್, ಆನೆಕೊಂಡ, ದಾವಣಗೆರೆ-577003.
99727 51777, 77605 65777

**24X7 CAR TAXI ಬಾಡಿಗೆಗೆ**
ಸಂಪರ್ಕಿಸಿ :
91642 56425
90711 06106

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 90x100 ಪೂರ್ವ ಕ್ಕೆ ರೋಡ್, ಪಶ್ಚಿಮಕ್ಕೆ ರೋಡ್ ಇದೆ, 60 ಅಡಿ ರೋಡಿಗಿದೆ, ಅಪಾರ್ಟ್‌ಮೆಂಟ್ ಕಟ್ಟಲಿಕ್ಕೆ 40x60 East, 20x48 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಬಾಡಿಗೆಗೆ ಅಥವಾ ಲೀಸ್‌ಗೆ ಇದೆ**
ದಾವಣಗೆರೆಯ ವಿದ್ಯಾನಗರದಲ್ಲಿ ದೇವಸ್ಥಾನ ಹಾಗು ಬಸ್ ಸ್ಟಾಪ್ ಗೆ ಹತ್ತಿರವಿರುವ ಮನೆಗಳು ಬಾಡಿಗೆಗೆ ಅಥವಾ ಲೀಸ್‌ಗೆ ಇವೆ, ಸಂಪರ್ಕಿಸಿ :
96322 74557

**ತಕ್ಷಣ ಬೇಕಾಗಿದ್ದಾರೆ**
ರಾಜ್ ಭವನ ಬಾರ್ ಮತ್ತು ರೆಸ್ಟೋರೆಂಟ್ ಹರಿಹರದಲ್ಲಿ ಕೆಲಸ ಮಾಡಲು ಸ್ಟೀವರ್ಡ್, ಸಪ್ಲೈಯರ್, ಹೌಸ್‌ಮನ್ ಹಾಗೂ ಬಾರ್ ವೆಂಡರ್ ಬೇಕಾಗಿದ್ದಾರೆ, ಅನುಭವ ಇದ್ದವರಿಗೆ ಆಕರ್ಷಕ ಸಂಬಳ.ಸಂಪರ್ಕಿಸಿ :
99726 98591, 94490 37488

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದವಾಡ ಸೈ. ನಂ. 44 (30x50) ಪಶ್ಚಿಮ, ನೈರುತ್ಯ ಮೂಲೆ
3) ಕುಂದವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**ಮನೆ ಬಾಡಿಗೆಗೆ ಇದೆ**
(ಸಸ್ಯಹಾರಿಗಳಿಗೆ ಮಾತ್ರ) ಡಬಲ್ ಬೆಡ್ ರೂಂ, ಬೋರ್ ನೀರಿನ ಸೌಕರ್ಯವಿರುವ, First floor, 3ನೇ ಮೇನ್, 15ನೇ ಕ್ರಾಸ್, #608, ಕೆ.ಟಿ.ಜೆ. ನಗರ, ದಾವಣಗೆರೆ.
90085 46527, 99800 87469

**2BHK ಮನೆ ಬಾಡಿಗೆಗಿದೆ**
ಉತ್ತರ ದಿಕ್ಕಿಗೆ ಬಾಗಿಲುಳ್ಳ, ಸುಸಜ್ಜಿತ 2 BHK 1ನೇ ಮಹಡಿ ಹೊಸಮನೆ ಬಾಡಿಗೆಗಿದೆ, GMIT ಕಾಲೇಜ್, DC ಆಫೀಸ್ & ಸಬ್ ರಿಜಿಸ್ಟರ್ ಆಫೀಸ್ ಗೆ ಹತ್ತಿರವಿದ್ದು, SS ಲೇಔಟ್, 'B' ಬ್ಲಾಕ್, 4ನೇ ಮೇನ್, 9ನೇ ಕ್ರಾಸ್‌ನಲ್ಲಿ ಬಾಡಿಗೆಗಿದೆ, ಸಂಪರ್ಕಿಸಿ :
99168 82209

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
80502 19547

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ ದಂಪತಿ ಬೇಕಾಗಿದ್ದಾರೆ. ಸಂಬಳ 20,000 ರೂಂ ಉಚಿತ. ಸಂಪರ್ಕಿಸಿ :
97400 98047

**ಖಾಲಿ ಜಾಗ ಬಾಡಿಗೆಗೆ ಇದೆ**
ದಾವಣಗೆರೆ ಪಿ.ಬಿ. ರಸ್ತೆ, ಸಬ್‌ರಿಜಿಸ್ಟ್ರಾರ್ ಆಫೀಸ್ ಎದುರು, # 857/18, 7ನೇ 'ಬಿ' ಕ್ರಾಸ್‌ನಲ್ಲಿ 50×88=4400 ಚದುರಡಿಯ ಖಾಲಿ ಜಾಗ ಬಾಡಿಗೆಗೆ ಇದೆ ಸಂಪರ್ಕಿಸಿ :
63662 34939, 98444 20009

**ಮನೆ ಬಾಡಿಗೆಗಿದೆ**
ಶಾಮನೂರಿನ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗಿದೆ.
ಸಸ್ಯಹಾರಿಗಳಿಗೆ ಮಾತ್ರ.
9449942404, 9482666522

**Computer Operator Required**
in MS-Office & Tally with experience. Attractive Salary
Keonics Yuva.com
88849 89666

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**2 BHK House & Room for Rent**
1st floor, 2 BHK house, 2nd floor bachelor/Students1 room for rent. # 1926A/3 Taralabalu Badavane, vidyanagara, 1st bus stop,cafe coffee day behind, Davangere.
99019 03072

**KASHMIR TOUR**
Dep: 11th Oct
6 Days All inclusive Group Tour
DVG WORLD TOURS
PJ Extension, DVG.
99006 66122

**ಸೈಟ್ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆ, 'ಸಿ' ಬ್ಲಾಕ್, 5ನೇ ಪಾರ್ಕ್ ಬಳಿ, ಪಶ್ಚಿಮ ದಿಕ್ಕು 9x15 ಮೀ. (30x50)
97396 53300
94491 88896

**ಗೋಡೌನ್ ಬೇಕಾಗಿದೆ**
ದಾವಣಗೆರೆ APMCಯಲ್ಲಿ 5000 ಚದರಡಿ ಗೋಡೌನ್ ಖರೀದಿಗೆ ಬೇಕಾಗಿದೆ.
ಸಂಪರ್ಕಿಸಿ :
74063 96332

**ಬಾಡಿಗೆಗೆ ಇದೆ**
ಗೋಡೌನ್ ಬಾಡಿಗೆಗೆ ಇದೆ. 30x100 sq ಕೊಂಡಜ್ಜಿ ರಸ್ತೆ, ದಾವಣಗೆರೆ.
ಸಂಪರ್ಕಿಸಿ : ಹನುಮಂತಪ್ಪ
81050 63330

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು, ವೀಲ್ ಅಲೈನ್‌ಮೆಂಟ್ & ಬ್ಯಾಲೆನ್ಸಿಂಗ್ ಮಾಡಲು, ಕಾರ್ ಎಲೆಕ್ಟ್ರಿಷಿಯನ್ ಮತ್ತು ಪೀಸ್ ವರ್ಕ್ ಮಾಡಲು ಬೇಕಾಗಿದ್ದಾರೆ.
ಶ್ರೀ ಪ್ರಿಯಾ ಕಾರ್ ಕೇರ್
ವಿದ್ಯಾನಗರ, ದಾವಣಗೆರೆ.
8867322545, 7349194155, 8867322645

**Abacus class**
in Shamnur Behind Timmareddy school. Dollars colony
M : 9739066956

**WANTED**
FEMALE TELECALLERS FRESHER or EXPERIENCED ANY DEGREE. GOOD IN ENGLISH COMMUNICATION
AGE LIMIT : 20 - 30 Attractive salary + Incentives
ALPHA RECRUITMENT SERVICE
office no.3, Behind Nowkara samudaya Bhavana .nijalingappa layout davanagere
84315 65643

**ಬೇಕಾಗಿದ್ದಾರೆ**
ವಾಟರ್ ವಾಷ್ ಸರ್ವಿಸ್ ಸ್ಟೇಷನ್‌ನ ಅನುಭವವುಳ್ಳ ವಾಷಿಂಗ್, ಇಂಟೀರಿಯರ್, ಕ್ಲೀನಿಂಗ್, ಬಾಡಿ ಪಾಲೀಷ್ ಮತ್ತು ಸೆರಾಮಿಕ್ ಕೋಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
Car Professionals, P.B. Road, Davanage.
97399 42217

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸೆಲ್ ಕಟ್ಟಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಸಮಯ: 6 AM to 6 PM.
ಗರಿಷ್ಠ ವೇತನ ನೀಡಲಾಗುವುದು.
93809 45052

**ಮನೆ ಬಾಡಿಗೆಗೆ ಇದೆ**
#1946/18, 16ನೇ ಕ್ರಾಸ್, 5ನೇ ಮುಖ್ಯರಸ್ತೆ, ವಿದ್ಯಾನಗರ, ದಾವಣಗೆರೆ, 1ನೇ ಮಹಡಿ, ಪೂರ್ವ ದಿಕ್ಕಿನ ಬಾಗಿಲಿನ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ
94802 43601, 74118 13545

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ದೇವಸ್ಥಾನಕ್ಕೆ ಅರ್ಚಕರು ಹಾಗೂ ಆಫೀಸ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ.
77230 46988

**FOR SALE**
32.5x20.5 (3bhk) and 15.5x20.5 (Duplex) 2nd Main, 1st Cross, PJ Extension, Raithara Beedi, Davangere.
99165 95733
87479 44084

**2 BHK HOUSE FOR RENT/LEASE**
Near Podar International in J.H. Patel Badavane, Davangere.
95359 99218, 88617 11072

**ಸನ್ನಿಧಿ ಟ್ರೇಡಿಂಗ್ ಕೋ**
ಎಪಿಎಂಸಿ 'ಇ' ಬ್ಲಾಕ್, ದಾವಣಗೆರೆ ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಉತ್ತಮ ದಿನಸಿ ಮತ್ತು ಮಸಾಲಾ ಪದಾರ್ಥಗಳು ದೊರೆಯುತ್ತವೆ. ವಿಚಾರಿಸಿ :
89045 80039
73493 91298

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. ಪಿಯುಸಿ ಅಥವಾ ಯಾವುದೇ ಪದವಿ ಆಗಿರಬೇಕು.
ಕಾವೇರಿ ಮೆಡಿಹೌಸ್ ಪ್ರೈ.ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-2.

**ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ದೈವಶಕ್ತಿ ಜ್ಯೋತಿಷ್ಯರು**
(ಪಂಡಿತ್ ಮಂಜುನಾಥ ಭಟ್)
ನಂ.1. ವಶೀಕರಣ ಸ್ಪೆಷಲಿಸ್ಟ್
ಸಮಸ್ಯೆ: ವಿದ್ಯೆ, ಉದ್ಯೋಗ, ಆರೋಗ್ಯ, ಹಣಕಾಸು, ಸಾಲಬಾಧೆ, ಮಾಟ ಮಂತ್ರ
ವಿ.ಸೂ.: ಸ್ತ್ರೀ-ಪುರುಷ ವಶೀಕರಣಕ್ಕೆ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ.
ಫೋ.: 9902324487

**WANTED**
Technician & Account Executive
Any Degree Male Candidate (Below 30 Age)
VANI HONDA
P.B.Road, Davanagere.

**ಸೈಟ್ ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆ, ಶಾಮನೂರು 30x40 ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕಿದೆ.
81236 83761

**ಸನ್ನಿಧಿ ಟ್ರೇಡಿಂಗ್ ಕೋ**
ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ. ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್, ಟೆಲಿಕಾಲರ್ಸ್, ಡ್ರೈವರ್ಸ್, ಡೆಲಿವರಿ ಬಾಯ್ಸ್
89045 80039, 89045 80034, 89045 80037

**ಕೆಲಸಗಾರರು ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ನುರಿತ AC, Ref, TV, Washing Machine Technician System Operating ಗಾಗಿ Lady Candidate ಬೇಕಾಗಿದ್ದಾರೆ. Salary + Incentives ಸಹ ನೀಡುತ್ತೇವೆ.
98805 31599

**ಮಾರಾಟಕ್ಕಿದೆ**
ಉತ್ತಮವಾದ ಸಿಮೆಂಟ್ ಬ್ರಿಕ್ಸ್ ಮಿಷನ್ ಮಾರಾಟಕ್ಕೆ ಇದೆ
ಸಂಪರ್ಕಿಸಿ :
94482 32826

**ಶ್ರೀ ದುರ್ಗಾ ಪರಮೇಶ್ವರಿ ದೇವಿ ಜ್ಯೋತಿಷ್ಯಾಲಯ**
ಪಂಡಿತ್ ದುರ್ಗಾ ಪ್ರಸಾದ್
ನಿಮ್ಮ ಸಮಸ್ಯೆಗಳಾದ - ಪ್ರೇಮ ವಿವಾಹ, ಕೋರ್ಟ್ ಕೇಸ್, ಶತ್ರುಕಾಟ, ಆಸ್ತಿ ವಿಚಾರದಲ್ಲಿ ಸಮಸ್ಯೆ, ಸಂತಾನ, ಆರೋಗ್ಯ, ಮಾಟ-ಮಂತ್ರ ತಡೆ, ಸತಿ-ಪತಿ ಕಲಹ, ಇನ್ನಿತರೆ ಸಮಸ್ಯೆಗಳಿಗೆ ಪರಿಹಾರ ಮಾಡಿಕೊಡುತ್ತಾರೆ. ಫೋನಿನ ಮೂಲಕ ಪರಿಹಾರ ಶತಃ ಸಿದ್ಧ 100%.
ಮೊ : 91489 57725

**To- Let**
2BHK Rent Only.
2BHK in 1st Floor, East face.
2BHK in 2nd Floor, North face.
Swami Vivekananda Badavane 7th 'B' Cross.
NO lease, Only Rent.
M / Whatsapp : 94482 01483

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

# ನಗರದಲ್ಲಿ ನಾಡಿದ್ದು ವಿಶ್ವ ಪತ್ರಿಕಾ ವಿತರಕರ ದಿನಾಚರಣೆ

ದಾವಣಗೆರೆ, ಸೆ. 1- ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇದೇ ದಿನಾಂಕ 4 ರಂದು ಸೋಮವಾರ ಬೆಳಿಗ್ಗೆ 10.30 ಕ್ಕೆ ನಗರದ ಕುವೆಂಪು ಕನ್ನಡ ಭವನದಲ್ಲಿ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ರಮೇಶ್ ಜೆ. ವತನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟನೆ ನೆರವೇರಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ.

ಇದೇ ವೇಳೆ ಹಿರಿಯ ಪತ್ರಿಕಾ ವಿತರಕರಾದ ಉಮೇಶ್, ನಾಗೇಂದ್ರಪ್ಪ ಕಡಾರನಾಯಕನಹಳ್ಳಿ, ನಾಗೇಂದ್ರ, ಟಿ. ಪ್ರಕಾಶ್, ಬಸವರಾಜ್ ಅವರನ್ನು ಸನ್ಮಾನಿಸಲಾಗುವುದು.

ನಗರದಲ್ಲಿ 230 ಜನ ಪತ್ರಿಕಾ ವಿತರಕರಿದ್ದು, ತಾಲ್ಲೂಕು, ಹೋಬಳಿ, ಗ್ರಾಮಗಳಿಂದ 600 ಕ್ಕೂ ಅಧಿಕ ಪತ್ರಿಕಾ ವಿತರಕರಿದ್ದಾರೆ ಎಂದು ಅವರು ವಿವರಿಸಿದರು.

ಪತ್ರಿಕಾ ವಿತರಕರಿಗೆ ಕುಳಿತುಕೊಳ್ಳಲು ಸರಿಯಾದ ಜಾಗದ ವ್ಯವಸ್ಥೆ ಮಾಡಬೇಕು. ವಿತರಣೆ ಮಾಡುವ ಸಂದರ್ಭದಲ್ಲಿ ಅಪಘಾತದಿಂದ ಮೃತಪಟ್ಟರೆ ಅವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ವಿತರಕರಿಗೆ ವಿಮೆ ವ್ಯವಸ್ಥೆ ಮಾಡಬೇಕು. ಪತ್ರಿಕೆ ವಿತರಣೆ ಮಾಡಲು ವಾಹನದ ಅವಶ್ಯಕತೆ ಇದ್ದು, ಸಾಲದ ರೂಪದಲ್ಲಿ ವಾಹನ ನೀಡಬೇಕು. ಪತ್ರಿಕಾ ವಿತರಕರ ಮಕ್ಕಳಿಗೆ ಶಿಕ್ಷಣದ ವೆಚ್ಚ ನೀಡಬೇಕು. 60 ವರ್ಷದ ನಂತರ ಪತ್ರಿಕಾ ವಿತರಕರಿಗೆ ಪಿಂಚಣಿ ಸೌಲಭ್ಯ ನೀಡಬೇಕು. ಸೂಕ್ತ ನಿವೇಶನದೊಂದಿಗೆ ವಸತಿ ಸೌಲಭ್ಯ ಕಲ್ಪಿಸಬೇಕೆಂಬ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ಸಂಘದ ಅಧ್ಯಕ್ಷ ಹೆಚ್. ಚಂದ್ರು, ಇತರೆ ಪದಾಧಿಕಾರಿಗಳಾದ ಕೆ. ಅರುಣ್ ಕುಮಾರ್, ಎಂ.ಬಿ. ಬಸವರಾಜ್, ಎ.ನಂದಕುಮಾರ್, ಎ. ನಿಂಗಪ್ಪ, ಟಿ. ಕುಮಾರಸ್ವಾಮಿ ಉಪಸ್ಥಿತರಿದ್ದರು.

## 'ಇಟ್ಸಿ ಬಿಟ್ಸಿ' ಶಾಪ್ ಉದ್ಘಾಟನೆ

ದಾವಣಗೆರೆ, ಸೆ. 1- 'ಇಟ್ಸಿ ಬಿಟ್ಸಿ' ಫ್ರಾಂಚೈಸಿ ಶಾಪ್ ನಾಳೆ ದಿನಾಂಕ 2ರ ಶನಿವಾರ ಬೆಳಿಗ್ಗೆ 11 ಕ್ಕೆ ಆರಂಭಗೊಳ್ಳಲಿದೆ ಎಂದು ಸಂಸ್ಥೆ ಮಾಲೀಕರಾದ ರಶ್ಮಿ ಕ್ಲೋಸ್‌ಪೇಟ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಪಿ.ಜೆ.ಬಡಾವಣೆಯ 6 ನೇ ಮೇನ್, 6 ನೇ ಕ್ರಾಸ್‌ನಲ್ಲಿನ ಮಳಿಗೆಯಲ್ಲಿ ಚಾಲನೆ ನೀಡಲಾಗುವುದು. ಬೆಂಗಳೂರು ನೇತ್ರಾಲಯದ ಅಧ್ಯಕ್ಷ ಡಾ.ಎನ್. ವೀರಭದ್ರರಾವ್, ಪುಷ್ಪ ನಾಯಕ್ ಮಳಿಗೆ ಉದ್ಘಾಟಿಸಲಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಐಶ್ವರ್ಯ, ಮನೋಜ್ ಮತ್ತಿತರರು ಉಪಸ್ಥಿತರಿದ್ದರು.

# ವಚನ ಸಾಹಿತ್ಯ ಬದುಕಿನ ಸಂವಿಧಾನ : ಮಂಜುನಾಥ ಕುರ್ಕಿ



## ಶರಣ ಸಾಹಿತ್ಯ ಪರಿಷತ್ತಿನ ದತ್ತಿ ಉಪನ್ಯಾಸ ಕಾರ್ಯಕ್ರಮ

ದಾವಣಗೆರೆ, ಸೆ. 1- ನಮ್ಮ ಬದುಕಿಗೆ ಚೌಕಟ್ಟು ಹಾಕಿ, ನಾವು ಹೇಗೆ ಬದುಕಬೇಕೆಂದು ತೋರಿಸುವ ವಚನ ಸಾಹಿತ್ಯ 'ಬದುಕಿನ ಸಂವಿಧಾನ' ಎಂದು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಜಿಲ್ಲಾಧ್ಯಕ್ಷರೂ, ಎವಿಕೆ ಮಹಿಳಾ ಕಾಲೇಜು ವಿಶ್ರಾಂತ ಪ್ರಾಧ್ಯಾಪಕರೂ ಆದ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಬಣ್ಣಿಸಿದರು.

ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಹಯೋಗದೊಂದಿಗೆ ನಿನ್ನೆ ಏರ್ಪಾಡಾಗಿದ್ದ ಮಹಾಶರಣ ಲಿಂ. ಮಾಗನೂರು ಬಸಪ್ಪ ಮತ್ತು ಲಿಂ. ಸರ್ವಮಂಗಳಮ್ಮ ಸ್ಮಾರಕ ದತ್ತಿ ಮತ್ತು ವಚನ ದಿನಾಚರಣೆ ಕಾರ್ಯಕ್ರಮದಲ್ಲಿ 'ವಚನ ಸಾಹಿತ್ಯ ಮತ್ತು ಮಾಗನೂರು ಬಸಪ್ಪ' ವಿಷಯ ಕುರಿತು ಅವರು ಮಾತನಾಡಿದರು.

ವಚನಕಾರರು ಸತ್ಯದ ಆರಾಧಕರೂ, ನಡೆ-ನುಡಿ ನಡುವೆ ಸಮನ್ವಯತೆ ಸಾಧಿಸಿದವರು. ಅವರ ಅರಿವು, ಆಚಾರ, ಅನುಭಾವ ವಚನ ಸಾಹಿತ್ಯದಲ್ಲಿದೆ. ಇಂದಿನ ರೋಗಗ್ರಸ್ಥ ಸಮಾಜಕ್ಕೆ ವಚನ ಸಾಹಿತ್ಯ ಔಷಧವಿದ್ದಂತೆ. ವಚನ ಸಾಹಿತ್ಯ ಅಳವಡಿಸಿಕೊಂಡರೆ ಮಾತ್ರ ನಾಗರಿಕ ಸಮಾಜ ಕಟ್ಟಲು ಸಾಧ್ಯವಿದೆ ಎಂದು ಅಭಿಪ್ರಾಯಿಸಿದರು.

ಅಧರ್ಮದಿಂದ ಧರ್ಮದ ಕಡೆಗೆ, ಅಸತ್ಯದಿಂದ ಸತ್ಯದ ಕಡೆಗೆ, ಕತ್ತಲಿನಿಂದ ಬೆಳಕಿನ ಕಡೆಗೆ ಕೊಂಡೊಯ್ಯುವ ಮೂಲಕ ವಚನ ಸಾಹಿತ್ಯ ಮನುಷ್ಯನಿಗೆ ಸಂಸ್ಕಾರ ನೀಡುತ್ತದೆ. ಅದನ್ನು ಅಳವಡಿಸಿಕೊಂಡರೆ ಮನುಷ್ಯ ದೇವಾತ್ಮನಾಗುತ್ತಾನೆ. ಇಲ್ಲದಿದ್ದರೆ ಪಾಪಾತ್ಮನಾಗಿ ಬದುಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜನತೆ ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿರುವ ಪ್ರಸ್ತುತ ದಿನಗಳಲ್ಲಿ ವಾದಿಗಳು, ವಿಚಾರ ವಂತರ ಸಂಖ್ಯೆಯಿಂದ ಜಗತ್ತು ವಾದಗಳ ಯುಗವಾಗಿ ಪರಿಣಮಿಸಿದೆ. ವಚನ ಸಾಹಿತ್ಯದ ಸಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ 12ನೇ ಶತಮಾನವನ್ನು 21ನೇ ಶತಮಾನಕ್ಕೆ ಕರೆತರುವ ಸಾಮರ್ಥ್ಯ ನಮ್ಮೆಲ್ಲರಿಗಿದೆ ಎಂದರು.

ದೇಶದಲ್ಲಿ ಗುಂಡು ಸೂಜಿಯನ್ನೂ ಉತ್ಪಾದಿಸಲು ಸಾಧ್ಯವಾಗದ ವ್ಯವಸ್ಥೆಯಲ್ಲಿ ಸಾಮಾಜಿಕ ಹಾಗೂ ನೈತಿಕ ಮೌಲ್ಯಗಳು ಉನ್ನತ ಮಟ್ಟದಲ್ಲಿದ್ದವು. ಆದರೆ ಇಂದು ಚಂದ್ರನ ಮೇಲೆ ನೌಕೆ ಕಳುಹಿಸುವಷ್ಟು ವಿಜ್ಞಾನ, ತಂತ್ರಜ್ಞಾನ ಮುಂದುವರೆದ ದಿನಗಳಲ್ಲಿ ಮೌಲ್ಯಗಳು ನೆಲಕಚ್ಚಿವೆ. ಈ ಸಂದರ್ಭದಲ್ಲಿ ವಚನ ಸಾಹಿತ್ಯ ಕೇಳಿ ಅಂತರಂಗದ ಅರಿವಿನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಮತ್ತೊಬ್ಬರ ಬಾಳಿಗೆ ಬೆಳಕಾಗಿ ಬಾಳಲು ಸಾಧ್ಯ ಎಂದರು.

ಶರಣರ ತತ್ವಾದರ್ಶಗಳನ್ನು ಜಗತ್ತಿಗೆ ಉಣಬಡಿಸಿ ಜನರ ಅರಿವಿನ ವ್ಯಾಪ್ತಿಯನ್ನು ಹಿಗ್ಗಿಸುವ ದೃಷ್ಟಿಯಿಂದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರು 1986ರ ಆಗಸ್ಟ್ 29ರಂದು ಶರಣ ಸಾಹಿತ್ಯ ಪರಿಷತ್ ಸ್ಥಾಪಿಸಿದರು. ಪ್ರಸ್ತುತ ಶರಣ ಸಾಹಿತ್ಯ ಪರಿಷತ್‌ನಲ್ಲಿ 630 ದತ್ತಿಗಳು ಸ್ಥಾಪನೆಗೊಂಡಿದ್ದು, ಕನ್ನಡ ಸಾಹಿತ್ಯ ಪರಿಷತ್‌ಗೆ ಸಮಾನವಾಗಿ ಬೆಳೆಯುತ್ತಿದೆ ಎಂದರು.

ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ.ಎಂ.ಜಿ. ಈಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು. ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಾಸಬ ಕಾಲೇಜು ಪ್ರಾಂಶುಪಾಲರಾದ ಎಸ್.ಜಿ. ಶಾಂತರಾಜು, ಪ್ರೊ. ಜಿ.ಸಿ. ನೀಲಾಂಬಿಕ, ಎವಿಕೆ ಕಾಲೇಜು ಪ್ರಾಂಶುಪಾಲರಾದ ಪ್ರೊ.ಕಮಲಾ ಸೊಪ್ಪಿನ್, ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ವಿನೋದ ಅಜಗಣ್ಣನವರ್ ಉಪಸ್ಥಿತರಿದ್ದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ರಣಧೀರ ಸ್ವಾಗತಿಸಿದರು. ಎಂ.ಸಹನಾ, ನೇತ್ರಾ ಪಿ. ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ.ಕವಿತ ಆರ್.ಜಿ. ನಿರೂಪಿಸಿದರು. ಡಾ.ಮಾಚಿಹಳ್ಳಿ ಮಂಜಪ್ಪ ವಂದಿಸಿದರು.

# ಹಾವೇರಿ ಜಿಲ್ಲಾ ನೇಕಾರ ಒಕ್ಕೂಟದ ಅಧ್ಯಕ್ಷರಾಗಿ ಹನುಮಂತಪ್ಪ



ರಾಣೇಬೆನ್ನೂರು, ಸೆ.1- ಹಾವೇರಿ ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷರಾಗಿ ಹನುಮಂತಪ್ಪ ತಿಮ್ಮಣ್ಣ ಮುಕ್ತೇನಹಳ್ಳಿ ಆಯ್ಕೆಯಾಗಿದ್ದಾರೆ.

ಇಲ್ಲಿನ ದೇವರಗುಡ್ಡ ರಸ್ತೆಯಲ್ಲಿರುವ ತುಳುಜಾ ಭವಾನಿ ದೇವಸ್ಥಾನದ ಸಭಾಭವನದಲ್ಲಿ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಸೋಮಶೇಖರ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಗೌರವ ಅಧ್ಯಕ್ಷ ಡಾ.ಬಸವರಾಜ ಕೇಲಗಾರ, ಅಧ್ಯಕ್ಷರಾದ ಶಂಕ್ರಣ್ಣ ನ್ಯಾಮತಿ, ರಾಜ್ಯ ಸಮಿತಿಯ ನವೀನ ಚಿಲ್ಲಾಳ ದಯಾನಂದ ಶೆಟ್ಟಿ ಉಪಸ್ಥಿತರಿದ್ದರು

ಬಸಣ್ಣ ಲಕ್ಷ್ಮೇಶ್ವರ, ಹನುಮಂತಪ್ಪ ಮುಕ್ತೇನಹಳ್ಳಿ, ಹಿರಿಯರಾದ ಶಂಕ್ರಣ್ಣ ನ್ಯಾಮತಿ ಮಾತನಾಡಿದರು.

ಶಿವಾನಂದ ಬಗಾದಿ ಪರಿಚಯ ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಕಪ್ಪ ಮಾರನಾಳ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಕರಿಬಸಪ್ಪ ನೀಲಗುಂದ, ನಾಗರಾಜ ಅಗಡಿ, ಬಸವರಾಜ ಮೈಲಾರ, ಗಣೇಶ ಹಾವನೂರು, ಮಾರುತಿ ಗರಡಿಮನಿ. ಪ್ರಕಾಶ ಅಗಡಿ, ಬಸವರಾಜ ಐರಣಿ, ಮಲ್ಲಿಕಾರ್ಜುನ ಮಾಗೇನಹಳ್ಳಿ, ವೀರಣ್ಣ, ಮಾರುತೆಪ್ಪ ಕೊಟ್ಟೂರು, ಪ್ರಭು ಕೊಟ್ಟೂರು, ಚಿನ್ನಿಕಟ್ಟಿ ನೀಲಪ್ಪ, ಕುಮಾರಪ್ಪನವರ ನಾಗಪ್ಪ, ಹಟಗಾರ ಸೋಮಪ್ಪ, ವಿಭೂತಿ ವಾಸಪ್ಪ, ನೇಕಾರ ಶಿವಾನಂದ, ಕದರಮಂಡಲಗಿ ನೀಲಕಂಠಪ್ಪ ರೋಖಡೆ ಮತ್ತಿತರರು ಭಾಗವಹಿಸಿದ್ದರು.

# ಹೊನ್ನಾಳಿ ಉಪ ವಿಭಾಗಾಧಿಕಾರಿಯಾಗಿ ಹುಲ್ಲುಮನಿ ತಿಮ್ಮಣ್ಣ ಮುಂದುವರಿಕೆ



ಹೊನ್ನಾಳಿ, ಸೆ. 1 - ಅವಧಿ ಮುಗಿಯುವ ಮುನ್ನವೇ ವರ್ಗಾವಣೆ ಗೊಂಡಿದ್ದ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರು ಮೂರು ದಿನದಲ್ಲಿ ಮತ್ತೆ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಉಪವಿಭಾಗಾಧಿಕಾರಿ ಸ್ಥಾನಕ್ಕೆ ಹಿರಿಯ ಶ್ರೇಣಿ ಉಪವಿಭಾಗಾಧಿಕಾರಿ ರೇಷ್ಮಾ ಹಾನಗಲ್ ಅವರು ಆಗಸ್ಟ್ 24ರಂದು ಕರ್ತವ್ಯಕ್ಕೆ ಹಾಜರಾಗಿದ್ದರು.

ಇಲ್ಲಿಂದ ವರ್ಗಾವಣೆಗೊಂಡಿದ್ದ ಹುಲ್ಲುಮನಿ ತಿಮ್ಮಣ್ಣ ಅವರು ವರ್ಗಾವಣೆ ಆದೇಶದ ವಿರುದ್ಧ ಸೋಮವಾರವೇ ಕರ್ನಾಟಕ ನ್ಯಾಯಾಧೀರಣ ಮೊರೆ ಹೋಗಿ ವರ್ಗಾವಣೆ ಆದೇಶಕ್ಕೆ ತಡೆಯಾಜ್ಞೆ ತಂದಿದ್ದರು. ಆದೇಶ ಪ್ರತಿಯೊಂದಿಗೆ ಮತ್ತೆ ಗುರುವಾರ ಕಚೇರಿಗೆ ಕರ್ತವ್ಯಕ್ಕೆ ಹಾಜರಾದರು.

ಕಳೆದ 16 ತಿಂಗಳ ಹಿಂದೆ ನೂತನವಾಗಿ ಉಪ ವಿಭಾಗಾಧಿಕಾರಿಗಳ ಕಚೇರಿ ಹೊನ್ನಾಳಿಯಲ್ಲಿ ಪ್ರಾರಂಭ ವಾಗಿತ್ತು. ಅಲ್ಲಿಂದ ಹುಲ್ಲುಮನಿ ತಿಮ್ಮಣ್ಣ ಅವರು ಪ್ರಥಮ ಉಪವಿಭಾಗಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

# ಪ್ಲಾಂಟೇಷನ್ ನನ್ನ ನೆಚ್ಚಿನ ಹವ್ಯಾಸ : ಎಸ್ಪಿ ಉಮಾ



ದಾವಣಗೆರೆ, ಸೆ. 1 - ಪರಿಸರ ಸಂರಕ್ಷಣೆಗೆ ನಾವೆಲ್ಲರೂ ಆದ್ಯತೆ ನೀಡಬೇಕಾಗಿದೆ. ಪ್ಲಾಂಟೇಷನ್ ನನ್ನ ನೆಚ್ಚಿನ ಹವ್ಯಾಸಗಳಲ್ಲಿ ಒಂದು ಎಂದು ದಾವಣಗೆರೆಯ ಪೊಲೀಸ್ ವರಿಷ್ಠಾಧಿಕಾರಿ ಎಸ್‌ಪಿ ಉಮಾ ಪ್ರಶಾಂತ್ ಹೇಳಿದರು. ರೋಟರಿ ಕ್ಲಬ್ ದಾವಣಗೆರೆ ವತಿಯಿಂದ ಪೊಲೀಸ್ ಕ್ವಾರ್ಟರ್ಸ್ ಅಂಗಳದಲ್ಲಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದ್ದರು.

ರೋಟರಿ ಕ್ಲಬ್ ಸದಸ್ಯರು, ಇನ್ನರ್‌ವ್ಹೀಲ್ ಸದಸ್ಯರು ಮತ್ತು ಪೊಲೀಸ್ ಇಲಾಖೆ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸುಮಾರು 50 ವಿವಿಧ ಜಾತಿಯ ಗಿಡಗಳನ್ನು ಪೊಲೀಸ್ ಕ್ವಾರ್ಟರ್ಸ್ ಅಂಗಳದಲ್ಲಿ ನೆಡಲಾಯಿತು. ದಾವಣಗೆರೆ ಜಿಲ್ಲಾ ಎಸ್‌ಪಿ ಶ್ರೀಮತಿ ಉಮಾ ಪ್ರಶಾಂತ್, ರೋಟರಿ ಕ್ಲಬ್ ದಾವಣಗೆರೆಯ ಅಧ್ಯಕ್ಷೆ ಕುಸುಮಾ ವಿಜಯಾನಂದ್, ಕಾರ್ಯದರ್ಶಿ ಸುನೀತಾ ಮೃತುಂಜಯ, ಇನ್ನರ್‌ವ್ಹೀಲ್ ಅಧ್ಯಕ್ಷೆ ಆಶಾ ಜಗದೀಶ್ ಬೇತೂರ್, ಕಾರ್ಯದರ್ಶಿ ಡಾ. ಚೈತಾಲಿ, ಸಹಾಯಕ ಗವರ್ನರ್ ಅಂದನೂರು ಆನಂದ ಕುಮಾರ್ ಮತ್ತು ಹಿರಿಯ ರೋಟರಿ ಸದಸ್ಯ ಎಸ್.ಕೆ. ವೀರಣ್ಣ, ಆರ್.ಎಸ್. ವಿಜಯಾನಂದ್, ಆರ್.ಟಿ. ಮೃತ್ಯುಂಜಯ, ಜಗದೀಶ್ ಬೇತೂರ್, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ, ಮಾಜಿ ಕಾರ್ಪೊರೇಟರ್ ದಿನೇಶ್ ಶೆಟ್ಟಿ ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಸಸಿ ನೆಡುವ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹರಳಹಳ್ಳಿ ಕೆರೆಗೆ ಜಿಲ್ಲೆಯ ಅತ್ಯುತ್ತಮ ಕೆರೆ ಸಮಿತಿ ಪ್ರಶಸ್ತಿ



ಮಲೇಬೆನ್ನೂರು, ಸೆ. 1- ಹರಳಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಕೆರೆಯ ಸಮಿತಿಯನ್ನು ದಾವಣಗೆರೆ ಜಿಲ್ಲೆಯ ಅತ್ಯುತ್ತಮ ಕೆರೆ ಸಮಿತಿ ಎಂದು ಗುರುತಿಸಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಧ್ಯಕ್ಷರಾದ ಡಾ.ಡಿ. ವೀರೇಂದ್ರ ಹೆಗ್ಗಡೆ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಲ್.ಹೆಚ್. ಮಂಜುನಾಥ್ ಅವರು ಅಭಿನಂದನಾ ಪತ್ರ ನೀಡಿದ್ದಾರೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದಡಿಯಲ್ಲಿ ಈ ವರ್ಷ ಜನವರಿ ತಿಂಗಳಲ್ಲಿ ಹರಳಹಳ್ಳಿ ಗ್ರಾಮದ ಸುಮಾರು 20 ಎಕರೆ ಪ್ರದೇಶದ ಕೆರೆಯನ್ನು ಹೂಳು ತೆಗೆಸಿ ನಂತರ ಕೆರೆಯ ಸುತ್ತಲು ಕಲ್ಲು ಕಟ್ಟಿ ಸುಂದರ ಕೆರೆಯನ್ನಾಗಿ ಗ್ರಾಮಸ್ಥರ ಸಹಯೋಗದಲ್ಲಿ ಅಭಿವೃದ್ಧಿ ಪಡಿಸಲಾಗಿತ್ತು. ನಂತರ ಆ ಕೆರೆಗೆ ನೀರು ತುಂಬಿಸಿ ಕೆರೆಯ ಸುತ್ತಲು ಗಿಡಗಳನ್ನು ನೆಟ್ಟು ಹೊಸ ರೂಪ ನೀಡಿದ ಗ್ರಾಮಸ್ಥರು ಕೆರೆಯ ನಿರ್ವಹಣೆಯ ಬಗ್ಗೆ ಕಾಳಜಿ ವಹಿಸಿರುವುದಕ್ಕೆ ನೀಡಿರುವ ಅಭಿನಂದನಾ ಪತ್ರವನ್ನು ಶುಕ್ರವಾರ ದಾವಣಗೆರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಜನೆಯ ಸಮುದಾಯ ಅಭಿವೃದ್ಧಿ ವಿಭಾಗದ ಪ್ರಾದೇಶಿಕ ನಿರ್ದೇಶಕ ಆನಂದ ಸುವರ್ಣ ಅವರು ಕೆರೆ ಸಮಿತಿಯವರಿಗೆ ನೀಡಿದರು.

ಅಲ್ಲದೇ ಇದೇ ವೇಳೆ ಜಿಲ್ಲೆಯಲ್ಲಿ ಧರ್ಮಸ್ಥಳ ಯೋಜನೆಯಿಂದ ಅಭಿವೃದ್ಧಿ ಪಡಿಸಿರುವ ಕೆರೆಗಳ ಸಮಿತಿ ಸದಸ್ಯರ ಸಭೆಯನ್ನು ನಡೆಸಿ, ಕೆರೆ ನಿರ್ವಹಣೆ ಬಗ್ಗೆ ಅಗತ್ಯ ಮಾಹಿತಿ ನೀಡಲಾಯಿತು.

ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ, ಪ್ರಗತಿಪರ ಕೃಷಿಕ ಡಾ.ಎನ್.ಎಸ್. ವೆಂಕಟರಾಮಾಂಜನೇಯ, ಕೆರೆ ಮತ್ತು ಶುದ್ಧಗಂಗಾ ವಿಭಾಗದ ನಿರ್ದೇಶಕ ಶಿವಾನಂದ ಆಚಾರ್ಯ ಕೆರೆ ಅಭಿಯಂತರ ಹರೀಶ ಮತ್ತು ಜಿಲ್ಲೆಯ ಕೃಷಿ ಮೇಲ್ವಿಚಾರಕರಾದ ಗಂಗಾಧರ್, ಪ್ರವೀಣ್, ಪ್ರೇಮ್ ಕುಮಾರ್, ಶಂಬುಲಿಂಗಪ್ಪ, ನಟರಾಜ್, ಸುನೀಲ್ ಮತ್ತಿತರರು ಸಭೆಯಲ್ಲಿದ್ದರು.

ಹರಳಹಳ್ಳಿ ಆಂಜನೇಯಸ್ವಾಮಿ ಕೆರೆ ಸಮಿತಿಯ ಎನ್. ರವಿಕುಮಾರ್, ಭಾರತಮ್ಮ ಬಿ.ಟಿ. ಹನುಮಂತಪ್ಪ, ಜಗನ್ನಾಥ್, ಕರಿಬಸಪ್ಪ, ಹರೀಶ ಈ ವೇಳೆ ಹಾಜರಿದ್ದು ಪ್ರಶಸ್ತಿ ಸ್ವೀಕರಿಸಿದರು.

## ವಿಕೃತಿ ಮೆರೆದ ಚಾಲಕ : ಸ್ಪಷ್ಟನೆ

ಚನ್ನಗಿರಿ, ಸೆ.1-ಕರೇಕಟ್ಟೆಯ ಜಂಬಣ್ಣ ಸರ್ಕಲ್‌ನಲ್ಲಿ ಕಾರು ಚಾಲಕನೊಬ್ಬ ಶ್ವಾನದ ಮೇಲೆ ಕಾರು ಹತ್ತಿಸಿ ವಿಕೃತಿ ಮರೆದಿದ್ದಾನೆ ಎಂಬ ಪತ್ರಿಕಾ ವರದಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಕಾರು ಚಾಲಕ ಮಿರ್ಜಾ ಮುಸ್ತಾಕ್ ಅಹಮದ್ ಕಾರಣರಲ್ಲ ಎಂದು ಪೊಲೀಸ್ ಮೂಲಗಳು ಸ್ಪಷ್ಟಪಡಿಸಿವೆ.

# ಭದ್ರಾ ಡ್ಯಾಂ ನೀರನ್ನು ಆನ್ ಅಂಡ್ ಆಫ್ ಕ್ರಮದಲ್ಲಿ ಹರಿಸಲು ಒತ್ತಾಯ

ದಾವಣಗೆರೆ, ಸೆ.1- ಭದ್ರಾ ಜಲಾಶಯದಲ್ಲಿ ಹಾಲಿ ಲಭ್ಯವಿರುವ ನೀರನ್ನು ನಾಲೆಗಳಲ್ಲಿ ಆನ್ ಅಂಡ್ ಆಫ್ ಕ್ರಮದಲ್ಲಿ ಹರಿಸುವ ಬಗ್ಗೆ ಸೂಕ್ತ ಕ್ರಮವನ್ನು ತಕ್ಷಣವೇ ಕೈಗೊಳ್ಳಬೇಕೆಂದು ಭದ್ರಾ ಅಚ್ಚುಕಟ್ಟು ರೈತರ ಹಿತರಕ್ಷಣಾ ಸಮಿತಿ ಧರಣಿ ಸತ್ಯಾಗ್ರಹ ನಡೆಸುವ ಮೂಲಕ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ಈ ಬಾರಿ ಮುಂಗಾರು ಮಳೆ ಕೊರತೆಯಿಂದಾಗಿ ಭದ್ರಾ ಜಲಾಶಯದಲ್ಲಿ ಕಡಿಮೆ ನೀರು ಸಂಗ್ರಹವಾಗಿರುವುದು ಸರಿಯಷ್ಟೇ. ಇಡೀ ರಾಜ್ಯ ಬರಗಾಲಕ್ಕೆ ತುತ್ತಾಗಿ ಈಗಾಗಲೇ ನೀರಿನ ಸಮಸ್ಯೆ ತಲೆದೋರಿದೆ. ತೀವ್ರವಾದ ಬರಗಾಲ ಆವರಿಸಿರುವ ಈ ತುರ್ತು ಸಂದರ್ಭದಲ್ಲಿ ಜಲಾಶಯದಲ್ಲಿ ಲಭ್ಯವಿರುವ ನೀರನ್ನು ಸದ್ಬಳಕೆ ಮಾಡಿ ಜನ-ಜಾನುವಾರು ಸೇರಿದಂತೆ ಭತ್ತ, ತೆಂಗು, ಅಡಿಕೆ, ಬಾಳೆ ಬೆಳೆಗಳನ್ನು ರಕ್ಷಿಸಿ ರೈತರನ್ನು ರಕ್ಷಣೆ ಮಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಸಂದರ್ಭದಲ್ಲಿ ರೈತರ ರಕ್ಷಣೆಯ ಹೊಣೆ ಹೊರದಿದ್ದರೆ ಸರ್ಕಾರವೇ ರೈತರನ್ನು ಸಾವಿನ ದವಡೆಗೆ ತಳ್ಳಿದಂತಾಗುತ್ತದೆ ಎಂದ ಸಮಿತಿ ಹೇಳಿದೆ.

ಭದ್ರಾ ಜಲಾಶಯದಲ್ಲಿ ಈ ದಿನಕ್ಕೆ 164 ಅಡಿ ನೀರು ಲಭ್ಯವಿದ್ದು, ಸರ್ಕಾರ ಈಗಾಗಲೇ ನಿರಂತರವಾಗಿ 100 ದಿನಗಳ ಕಾಲ ನೀರು ಹರಿಸುವ ಅವೈಜ್ಞಾನಿಕ ತೀರ್ಮಾನವನ್ನು ಕೈಗೊಂಡಿದ್ದು, ಅಚ್ಚುಕಟ್ಟು ಪ್ರದೇಶದ ರೈತರಲ್ಲಿ ಬದುಕಿನ ಆತಂಕ ಸೃಷ್ಠಿಯಾಗಿದೆ. ನಿರಂತರವಾಗಿ 100 ದಿನಗಳ ಕಾಲ ನೀರು ಹರಿಸಿದಲ್ಲಿ ಬೇಸಿಗೆಯಲ್ಲಿ ತೋಟಗಾರಿಕೆ ಬೆಳೆಗಳು ಸಂಪೂರ್ಣವಾಗಿ ನಾಶವಾಗುವುದರ ಜೊತೆಗೆ ರೈತರ ಬದುಕು ಹಾಳಾಗುತ್ತದೆ ಎಂದು ಸಮಿತಿ ಸಂಚಾಲಕ ಮಂಜಪ್ಪಗೌಡ ಮತ್ತಿತರರು ತಿಳಿಸಿದರು. ಬರಗಾಲದ ಈ ತುರ್ತು ಸಂದರ್ಭದಲ್ಲಿ ಹಾಲಿ ಲಭ್ಯವಿರುವ ನೀರನ್ನು ಆನ್ ಅಂಡ್ ಆಫ್ ಕ್ರಮದಲ್ಲಿ ಹರಿಸಬೇಕೆಂದು ಒತ್ತಾಯಿಸಿದರು.

## ಮೌನೇಶ್ವರಿ ಕಿವುಡ - ಮೂಕ ಮಕ್ಕಳ ವಸತಿಯುತ ಶಾಲೆಯ ಸಾಧನೆ



ದಾವಣಗೆರೆ ಸೆ. 1 - ಶ್ರೀ ವಿನಾಯಕ ಎಜುಕೇಷನ್ ಸೊಸೈಟಿಯ ಶ್ರೀ ಮೌನೇಶ್ವರಿ ಕಿವುಡ ಮತ್ತು ಮೂಕ ವಸತಿಯುತ ಶಾಲೆಯ ವಿದ್ಯಾರ್ಥಿಗಳು ಉಡುಪಿಯಲ್ಲಿ ಕಳೆದ ವಾರ ಜರುಗಿದ ಕರ್ನಾಟಕ ರಾಜ್ಯ ಕಿವುಡರ 13ನೇ ಕ್ರೀಡಾಕೂಟದಲ್ಲಿ ಸ್ಪರ್ಧಿಸಿ 11 ಚಿನ್ನ, 9 ಬೆಳ್ಳಿ ಮತ್ತು 10 ಕಂಚು ಪದಕಗಳನ್ನು ಗಳಿಸುವುದರ ಜೊತೆಗೆ 2ನೇ ಸ್ಥಾನದಲ್ಲಿ ಚಾಂಪಿಯನ್ ಶಿಪ್ ಟ್ರೋಫಿ ಪಡೆದಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ, ಸಿಬ್ಬಂದಿ ವರ್ಗದವರು ಮತ್ತು ಮಕ್ಕಳು ಹಾಗೂ ಸಂಸ್ಥೆಯ ಕಾರ್ಯದರ್ಶಿ ಹೆಚ್.ವಿ. ಗೋಪಾಲಪ್ಪ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಸಾವಯವ ಮೇಳ

ದಾವಣಗೆರೆ, ಸೆ. 1- ಗಾಯುಸ್ ಗ್ಲಿಟ್ಸ್ ಯೂಟ್ಯೂಬ್ ಚಾನಲ್ ವತಿ ಯಿಂದ ನಾಳೆ ದಿನಾಂಕ 2 ರ ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ಶ್ರೀ ಸದ್ಯೋಜಾತ ಹಿರೇಮಠದಲ್ಲಿ 'ಆರ್ಗ್ಯಾನಿಕ್ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಯೂಟ್ಯೂಬರ್ ಟಿ. ಗಾಯತ್ರಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.ಮೇಳ ವನ್ನು ರಾಷ್ಟ್ರ ಪ್ರಶಸ್ತಿ ವಿಜೇತ ವಿಶ್ವೇಶ್ವರ ಸಜ್ಜನ್ ಉದ್ಘಾಟಿಸಲಿದ್ದಾರೆ. ಅಭಯ್ ಮುತಾಲಿಕ್ ದೇಸಾಯಿ, ಮಾರುತಿ ಮಂಚಿ ಹಾಗೂ ಸರೋಜ ಪಾಟೀಲ್ ಆಗಮಿಸಲಿದ್ದಾರೆ. ಸಂಜೆ ಸಾಮೂಹಿಕ ಅಗ್ನಿಹೋತ್ರ ನೆರವೇರಲಿದೆ. ಪತ್ರಿಕಾಗೋಷ್ಠಿಯಲ್ಲಿ, ಪಿ.ವಿ. ರವಿಕುಮಾರ್, ಟಿ. ಸತೀಶ್, ಜೆ. ಕಿರಣ್ ಉಪಸ್ಥಿತರಿದ್ದರು.

# ವಲಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿಗೆ ಚಾಲನೆ

## ಕ್ರೀಡಾಪಟುಗಳ ಪ್ರತಿಭೆ ರಾಷ್ಟ್ರ ಮಟ್ಟದಲ್ಲಿ ಬೆಳಗುವಂತಾಗಲಿ : ಪ್ರೊ. ವೈ. ವೃಷಭೇಂದ್ರಪ್ಪ ಹಾರೈಕೆ



ದಾವಣಗೆರೆ, ಸೆ. 1 -ಕ್ರೀಡಾಪಟುಗಳ ಪ್ರತಿಭೆ ಕೇವಲ ಜಿಲ್ಲೆಗೆ ಮೀಸಲಾಗದೇ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಬೆಳಗುವಂತಾಗಲಿ ಎಂದು ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಅವರು ಶುಭ ಹಾರೈಸಿದರು.


ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಮೈದಾನದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯ ಹಾಗೂ ಜೆ.ಜೆ.ಎಂ.ವೈದ್ಯಕೀಯ ಕಾಲೇಜಿನ ಸಹಯೋಗದಲ್ಲಿ ನಿನ್ನೆ ಆಯೋಜಿಸಿದ್ದ 2023-24ನೇ ಸಾಲಿನ ಬೆಳಗಾಂ ವಲಯ ಮಟ್ಟದ ಪುರುಷರ ಫುಟ್‌ಬಾಲ್ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಹೆಚ್ಚಾಗಿ 25 ರಿಂದ 40 ವರ್ಷದವರು ಹಲವಾರು ಕಾರಣಗಳಿಂದ ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ನಿಮ್ಮ ನಿತ್ಯದ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಿರಿ. ನಿಮ್ಮಗಳ ಓದಿನ, ಕೆಲಸಗಳ ಒತ್ತಡದಿಂದ ಹೊರ ಬಂದು ಹೆಚ್ಚು ಹೆಚ್ಚು ದೈಹಿಕ ಕ್ರೀಡೆಗಳಲ್ಲಿ ಪಾಲ್ಗೊಳ್ಳಿ. ಇದರಿಂದ ನಿಮ್ಮ ಆರೋಗ್ಯ ಕಾಪಾಡಿಕೊಳ್ಳ ಬಹುದಾಗಿದೆ. ವಿಶ್ವವಿದ್ಯಾನಿಲಯದಿಂದ ನಿಮಗೆ ಇರುವ ಕ್ರೀಡಾ ಸವಲತ್ತುಗಳನ್ನು ಚೆನ್ನಾಗಿ ಬಳಸಿಕೊಂಡು ರಾಜ್ಯ, ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ನಿಮ್ಮ ಕಾಲೇಜಿಗೆ, ಜಿಲ್ಲೆಗೆ ಕೀರ್ತಿ ತನ್ನಿರಿ ಎಂದು ಎಂದು ಅವರು ಹಾರೈಸಿದರು.

ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ. ಎಸ್.ಬಿ. ಮುರುಗೇಶ್ ಮಾತನಾಡಿ, ಕ್ರೀಡೆಗಳನ್ನು ಬರೀ ಕ್ರೀಡಾ ಮನೋಭಾವದಿಂದ ಆಡಬೇಕು. ಕ್ರೀಡೆಗಳಲ್ಲಿ ಬಹುಮಾನ ಗಳಿಸುವುದು ಮುಖ್ಯವಲ್ಲ. ಕ್ರೀಡೆಗಳಲ್ಲಿ ಭಾಗವಹಿಸುವಿಕೆ ಮುಖ್ಯ ಎಂದು ತಿಳಿಸಿದರು.


ಈ ಸಂದರ್ಭದಲ್ಲಿ ಬೆಳಗಾಂ ವಲಯದ ಕಾಡ್ಸ್ ಕೋ ಆರ್ಡಿನೇಟರ್ ಸಿ.ಪಿ.ಮಹೇಶ್, ಆರ್‌ಜಿಯುಎಚ್‌ಎಸ್‌ನ ದೈಹಿಕ ನಿರ್ದೇಶಕರ ಸಂಘದ ಅಧ್ಯಕ್ಷರು, ವಿಜಯನಗರ ವೈದ್ಯಕೀಯ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಜೋಸೆಫ್ ಅನಿಲ್, ಜೆಜೆಎಂ ವೈದ್ಯಕೀಯ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಕೆ.ಎನ್.ಗೋಪಾಲಕೃಷ್ಣ, ಜಿಎಂ ಫಾರ್ಮಸಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಹನುಮಂತಪ್ಪ, ಹುಬ್ಬಳ್ಳಿಯ ಕಿಮ್ಸ್‌ನ ದೈಹಿಕ ಶಿಕ್ಷಣ ನಿರ್ದೇಶಕ ಅರುಣ ಗೌಡರ್, ತರಬೇತುದಾರರಾದ ಗ್ಯಾಬ್ರಿಯಲ್, ರೆಹಮಾನ್, ನಾಗೇಶ್, ಇಮ್ತಿಯಾಜ್ ಶಾಂತಕುಮಾರ, ಕಾಲೇಜಿನ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು, ಸೇರಿದಂತೆ, ಇತರರು ಭಾಗವಹಿಸಿದ್ದರು.

# ನಗರದಲ್ಲಿ ಇಂದು ಶ್ರೀ ರಾಘವೇಂದ್ರ ಸ್ವಾಮಿಗಳ ರಥೋತ್ಸವ



ಕೆ.ಬಿ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಶ್ರೀ ಗುರುರಾಯರ 352ನೇ ಆರಾಧನಾ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10.30ಕ್ಕೆ ಶ್ರೀ ಗುರುರಾಯರ ಚಲ ಪ್ರತಿಮೆಯೊಂದಿಗೆ ಹಾಗು ರಾಘವೇಂದ್ರ ಸ್ವಾಮಿಗಳು ರಚಿಸಿರುವ ಪರಿಮಳ ಗ್ರಂಥದ ಮೆರವಣಿಗೆ, ವೇದ ಘೋಷ ಭಜನೆ, ನಾದಸ್ವರ, ಚಂಡೆ ಮೇಳಗಳೊಂದಿಗೆ ಜರುಗಲಿದೆ. ಸಂಜೆ 7 ರಿಂದ ವಿದ್ವಾನ್ ವಿಶ್ವಂಭರ ಮತ್ತು ಸಂಗಡಿಗರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಶ್ರೀ ಗುರುರಾಜ ಸೇವಾ ಸಂಘದ ಅಧ್ಯಕ್ಷ ಕೋಸ ಪ್ರಸನ್ನಕುಮಾರ್ ತಿಳಿಸಿದರು.

# ಸಹಕಾರ ಭಾರತಿ ಪದಾಧಿಕಾರಿಗಳ ಕಾರ್ಯಾಗಾರ



ದಾವಣಗೆರೆ, ಸೆ. 1- ಸಹಕಾರ ಭಾರತಿ ಸಹಕಾರ ಸಂಘಗಳ ಅಧ್ಯಕ್ಷರ-ಉಪಾಧ್ಯಕ್ಷ ಹಾಗೂ ನಿರ್ದೇಶಕರುಗಳ ಕಾರ್ಯಾಗಾರವು ನಗರದ ಬಂಟರ ಭವನದಲ್ಲಿ ನಡೆಯಿತು.

ರಾಷ್ಟ್ರೀಯ ಅಧ್ಯಕ್ಷ ಬಿ.ಹೆಚ್.ಕೃಷ್ಣಾರೆಡ್ಡಿ ಮಾತನಾಡಿ, ಸಹಕಾರ ಭಾರತಿ ಕಾರ್ಯನಿರ್ವಹಣೆ, ಆಡಿಟ್ ಬಗ್ಗೆ ಮಾಹಿತಿ ನೀಡಿದರು.

ಮಧ್ಯೆ ಕ್ಷೇತ್ರಿಯ ಸಂಪರ್ಕ ಪ್ರಮುಖ ಸತೀಶ್ ಚಂದ್ರ ಮಾತನಾಡಿ, ಒಟ್ಟಿಗೆ ಬಾಳೋಣ, ಒಟ್ಟಿಗೆ ದುಡಿಯೋಣ, ಒಟ್ಟಿಗೆ ಇರೋಣ ಎಂಬ ತತ್ವದಿಂದ ಆಯ್ಕೆಯಾದ ಮಂಡಳಿಯಿಂದ ಮಾತ್ರ ಉತ್ತಮ ಸಂಸ್ಥೆ ಮುಂದೆ ಸಾಗುತ್ತದೆ ಎಂದರು.

ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಜಿ.ಎನ್. ಸ್ವಾಮಿ, ರಾಷ್ಟ್ರೀಯ ಸಂರಕ್ಷಕ ರಮೇಶ್ ವೈದ್ಯ, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧ್ಯಕ್ಷ ನಂಜನಗೌಡ್ರು, ನಿರ್ದೇಶಕ ಪ್ರಭುದೇವ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಎಂ.ಬಿ. ಅಣ್ಣೇಶ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕೆ.ಜಿ. ಸಂತೋಷ್, ಜಿಲ್ಲಾ ಕೋಶಾಧ್ಯಕ್ಷ ಉಮೇಶ್ ಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ರವಿ ಮತ್ತಿತರರು ಭಾಗವಹಿಸಿದ್ದರು.

# ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ, ರಥೋತ್ಸವ ಸಂಭ್ರಮ



ದಾವಣಗೆರೆ, ಸೆ. 1 - ಶ್ರೀ ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವದ ಅಂಗವಾಗಿ ಸ್ಥಳೀಯ ಪಿ.ಜೆ. ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಶುಕ್ರವಾರ ವಿಜೃಂಭಣೆಯ ರಥೋತ್ಸವ ನಡೆಯಿತು.

ಬೆಳಿಗ್ಗೆ ರಾಯರ ಅಷ್ಟೋತ್ತರ, ಪಂಚಾಮೃತ ಅಭಿಷೇಕ, ಅಲಂಕಾರ ನಡೆಯಿತು. ಮಠದ ಆವರಣದಲ್ಲಿ ಪಲ್ಲಕ್ಕಿ ಸೇವೆ ನಂತರ ರಥದಲ್ಲಿ ರಾಯರ ಬೃಂದಾವನ ಮತ್ತು ಪಾದುಕೆ ಹಾಗೂ ಪ್ರಹ್ಲಾದ ರಾಜರ ಮೂರ್ತಿ ಪ್ರತಿಷ್ಠಾಪಿಸಿ ಮಠದ ಬೀದಿಯಲ್ಲಿ ಮಂಗಳ ವಾದ್ಯ, ಭಜನೆಯೊಂದಿಗೆ, ಮಹಿಳೆಯರ ನೃತ್ಯದೊಂದಿಗೆ ಮೆರವಣಿಗೆ ನಡೆಸಲಾಯಿತು. ರಥೋತ್ಸವದ ವೇಳೆ ಮಳೆಯ ಸಿಂಚನ ಭಕ್ತರಲ್ಲಿ ಹರ್ಷ ತಂದಿತು.

ರಥೋತ್ಸವದ ನಂತರ ನೈವೇದ್ಯ, ಭಕ್ತರಿಗೆ ತೀರ್ಥ ಪ್ರಸಾದ ಏರ್ಪಡಿಸಲಾಗಿತ್ತು. ಮಠದ ವ್ಯವಸ್ಥಾಪಕ ಸುತೀರ್ಥ ಕಟ್ಟಿ ಮತ್ತು ಕುಟುಂಬದವರು, ನಾಗರಾಜ್, ರಾಮಚಂದ್ರರಾವ್, ಪ್ರಕಾಶ್ ನಾಡಿಗೇರ್, ರಾಜಣ್ಣ, ವಿಠ್ಠಲ್ ದಿದ್ದಿ, ಸುನಿಲ್, ವೃಷಭೇಂದ್ರ, ಸಮೀರ್ ದೇವಳೆ, ರಾಮು, ಸೀನು, ವ್ಯಾಸರಾಜ್, ಮೋಹನ್, ವಾದಿರಾಜ್ ಹಂದಿಗೋಳ್, ಶ್ರೀಕಾಂತ್ ಭಾದ್ರಿ, ಪೃಥ್ವಿ, ಮಧುಸೂದನ್, ಪ್ರಹ್ಲಾದ್, ಬಾದ್ರಿ ವಕೀಲರು ಹಾಗೂ ವಿಶ್ವ ಮಾಧ್ವ ಪರಿಷತ್ ಪದಾಧಿಕಾರಿಗಳು ಉಪಸ್ಥಿತರಿದ್ದರು. ಇಂದು ಶನಿವಾರ ಶ್ರೀ ಸತ್ಯನಾರಾಯಣ ಪೂಜೆ, ಧನ್ವಂತರಿ ಹೋಮ ಪ್ರವಚನದ ಮಂಗಳ ಮಹೋತ್ಸವ ನಡೆಯಲಿದೆ.

ಕೆ.ಬಿ. ಬಡಾವಣೆಯಲ್ಲಿರುವ ರಾಯರ ಮಠದಲ್ಲಿ ಶುಕ್ರವಾರ ಸಂಜೆ ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಗಳು ನಡೆದವು.

# ಹರಿಹರ: ಆಟೋ ಚಾಲಕರ ಪ್ರತಿಭಟನೆ



## ಯುಜಿಡಿ, ಜಲಸಿರಿ ಕಾಮಗಾರಿಗಳಿಂದ ರಸ್ತೆಗಳು ಹಾಳು, ದುರಸ್ತಿ ವಿಳಂಬಕ್ಕೆ ಆಕ್ರೋಶ, ಅರೆ ಬೆತ್ತಲೆ ಪ್ರತಿಭಟನೆ

ಹರಿಹರ, ಆ. 1 - ಯುಜಿಡಿ ಮತ್ತು ಜಲಸಿರಿ ಯೋಜನೆಯ ಕಾಮಗಾರಿಯಿಂದಾಗಿ ಎಲ್ಲಾ ಬಡಾವಣೆಗಳಲ್ಲಿ ರಸ್ತೆಗಳು ಹಾಳಾಗಿವೆ. ರಸ್ತೆ ದುರಸ್ತಿ ವಿಳಂಬವಾಗಿದೆ ಎಂದು ಆಕ್ರೋಶಗೊಂಡ ನಗರದ ಆಟೋ ಚಾಲಕರು ಹಾಗೂ ಮಾಲೀಕರು, ನಗರಸಭೆ ಮುಖ್ಯ ದ್ವಾರದ ಮುಂದೆ ಅರೆ ಬೆತ್ತಲೆ ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಗೌರವಾಧ್ಯಕ್ಷ ಸಿದ್ದಲಿಂಗಸ್ವಾಮಿ, ಅಧ್ಯಕ್ಷ ಮೋಹನ್ ಗೌಡ ಮಾತ ನಾಡಿ, ರಸ್ತೆಗಳು ಹಾಳಾಗಿರುವು ದರಿಂದ ವೃದ್ದರು, ಶಾಲಾ ಮಕ್ಕಳು, ಗರ್ಭಿಣಿ ಮಹಿಳೆ ಯರಿಗೆ ಸಾಕಷ್ಟು ತೊಂದರೆಯಾಗಿದೆ. ಪ್ರತಿನಿತ್ಯ ಅವ ಘಡಗಳು ಸಂಭವಿಸುತ್ತಿವೆ ಎಂದರು.

ಪೌರಾಯುಕ್ತ ಐಗೂರು ಬಸವರಾಜ್ ಮಾತನಾಡಿ, ನಗರಸಭೆಗೆ ನಾಲ್ಕನೇ ಹಂತದಲ್ಲಿ 19 ಕೋಟಿ ರೂ. ಹಾಗೂ ಹಿಂದೆ ಬಿಡುಗಡೆ ಆಗಿ ವಾಪಸ್ಸು ಹೋಗಿದ್ದ 8 ಕೋಟಿ ರೂ. ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆ. ಆ ಹಣದಿಂದ ಮುಂದಿನ ಸೋಮವಾರದಿಂದ ಶೇ. 70 ರಷ್ಟು ನಗರದ ಪ್ರಮುಖವಾದ ರಸ್ತೆಯನ್ನು ದುರಸ್ತಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಾಪೂರ್, ಉಪಾಧ್ಯಕ್ಷ ಕೆ.ಜಿ. ಸಿದ್ದೇಶ್, ನಗರಸಭೆ ಸದಸ್ಯರಾದ ಹನುಮಂತಪ್ಪ, ಆರ್.ಸಿ. ಜಾವೇದ್, ಮುಖಂಡ ದಾದಾಪೀರ್ ಭಾನುವಳ್ಳಿ, ಆಟೋ ಚಾಲಕರಾದ ನಾಗರಾಜ್, ಚಂದ್ರಪ್ಪ, ಹನುಮಂತಪ್ಪ, ಬಸವರಾಜಪ್ಪ, ಮುನ್ನಾಬಾಯಿ, ಸೋಮಣ್ಣ, ಆಮ್ಜದ್ ಶರೀಫ್, ನಜೀರ್ ಸಾಬ್, ತಿಪ್ಪೇಶ್, ಚಂದ್ರಶೇಖರ್ ಇತರರು ಹಾಜರಿದ್ದರು.

# ಘಂಟ್ಯಾಪುರದ ಡಾ. ಅರವಿಂದ್ ಅತ್ಯುತ್ತಮ ವೈದ್ಯ



ಹೊನ್ನಾಳಿ, ಸೆ.1- ತಾಲ್ಲೂಕಿನ ಘಂಟ್ಯಾಪುರ ಗ್ರಾಮದ ತುಂಗಭದ್ರಾ ಫಾರಂನ ನಿವಾಸಿ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕ ಜಿ.ಮಹೇಶ್ವರಪ್ಪ ಮತ್ತು ಮೀನಾಕ್ಷಮ್ಮ ದಂಪತಿ ಪುತ್ರ ಡಾ. ಜಿ.ಎಂ. ಅರವಿಂದ್ ಅತ್ಯುತ್ತಮ ವೈದ್ಯರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಪ್ರತಿಷ್ಠಿತ ನೆಬ್ಕಾರ್ ಮೀಡಿಯಾ ನಡೆಸಿದ ಸಮೀಕ್ಷೆಯಲ್ಲಿ ದಕ್ಷಿಣ ಭಾರತದ 10 ವೈದ್ಯರುಗಳಲ್ಲಿ ಡಾ. ಜಿ.ಎಂ.ಅರವಿಂದ್ ಅವರು ಅತ್ಯುತ್ತಮ ವೈದ್ಯರಾಗಿ ಹೊರಹೊಮ್ಮಿದ್ದಾರೆ. ಇದು ಪ್ರತಿಷ್ಠಿತ 2023ರ ಔಟ್‌ಲುಕ್ ವಾರಪತ್ರಿಕೆಯಲ್ಲಿ ಪ್ರಕಟವಾಗಿದೆ.

ಅರವಿಂದ್ ಅವರ ಆರೋಗ್ಯ ಕ್ಷೇತ್ರದಲ್ಲಿನ ಅತ್ಯುತ್ತಮ ಸೇವೆಗೆ ಅತ್ಯುತ್ತಮ ವೈದ್ಯ ಎಂಬ ಪ್ರಶಸ್ತಿಯೂ ಲಭಿಸಿದೆ. ಇವರಿಗೆ 2022ರ ಜುಲೈ ತಿಂಗಳಲ್ಲಿ ಇಂಡಿಯಾ ಟುಡೇ ವಾರ ಪತ್ರಿಕೆಯವರು ನಡೆಸಿದ ಸಮೀಕ್ಷೆಯಲ್ಲಿಯೂ ಸಹ ಇವರನ್ನು ಅತ್ಯುತ್ತಮ ವೈದ್ಯರೆಂದು ಘೋಷಿಸಲಾಗಿತ್ತು.

ಡಾ. ಜಿ.ಎಂ.ಅರವಿಂದ್ ಅವರು ಪ್ರಸ್ತುತ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ಮೆಡಿಷಿನ್ ವಿಭಾಗದಲ್ಲಿ ಕಳೆದ 15 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಾಥಮಿಕ ಶಾಲೆಯಿಂದ ಪಿಯುಸಿವರೆಗೆ ಶಿವಮೊಗ್ಗದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ, ಮೈಸೂರಿನ ಜೆ.ಎಸ್.ಎಸ್. ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್., ದಾವಣಗೆರೆಯ ಜೆ.ಜೆ.ಎಂ. ಮೆಡಿಕಲ್ ಕಾಲೇಜಿನಲ್ಲಿ ಎಂ.ಡಿ. ಮುಗಿಸಿದ್ದಾರೆ.

# ನಗರದಲ್ಲಿ ನಾಳೆ ಟಿಇಟಿ ಪರೀಕ್ಷೆ

ದಾವಣಗೆರೆ, ಸೆ. 1 - ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ನಾಡಿದ್ದು ದಿನಾಂಕ 3 ರಂದು ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ. ಮೊದಲ ಅಧಿವೇಶನ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12 ರವರೆಗೆ ಹಾಗೂ 2ನೇ ಅಧಿವೇಶನ ಅಪರಾಹ್ನ 2.30 ರಿಂದ 4 ರವರೆಗೆ ನಡೆಯುತ್ತದೆ. ಒಟ್ಟು 7086 ಅಭ್ಯರ್ಥಿಗಳು ಪರೀಕ್ಷೆ ಬರೆಯುತ್ತಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೊಟ್ರೇಶ್ ತಿಳಿಸಿದ್ದಾರೆ.


ಜನ್ಮದಿನದ




ದಾವಣಗೆರೆ ಮಹಾನಗರ ಪಾಲಿಕೆಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಮತ್ತು ಜಿಲ್ಲಾ ವೀರಶೈವ ಲಿಂಗಾಯಿತ ಪಂಚಮಸಾಲಿ ಯುವ ಘಟಕದ ಕಾರ್ಯಾಧ್ಯಕ್ಷರೂ, ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟದ ಖಜಾಂಚಿಗಳೂ, ಹರ ವಿವಿದೋದ್ದೇಶ ಸಹಕಾರ ಸಂಘದ ನಿರ್ದೇಶಕರೂ, ದಾವಣಗೆರೆ ಕೆಐಡಿಬಿ ಟೆಕ್ಸ್‌ಟೈಲ್ ಅಸೋಸಿಯೇಷನ್ ನಿರ್ದೇಶಕರೂ ಹಾಗೂ ಉದ್ಯಮಿಗಳೂ ಆದ

ಶ್ರೀ ಬಾದಾಮಿ ಜಯಣ್ಣ

ಅವರಿಗೆ ಜನ್ಮದಿನದ ಶುಭಾಶಯಗಳು.

ಶುಭ ಕೋರುವವರು :
- ಸಾಯಿ ಕ್ರಿಯೇಷನ್, ಸಿದ್ದ ಉಡುಪುಗಳ ತಯಾರಕರು, ನಿಟುವಳ್ಳಿ.
- ಶ್ರೀ ಕುರುವತ್ತಿ ಬಸವೇಶ್ವರ ರೆಡಿಮೇಡ್ ಗಾರ್ಮೆಂಟ್ಸ್ & ವಾಷಿಂಗ್ ಯೂನಿಟ್ ಕರೂರು ಇಂಡಸ್ಟ್ರೀಯಲ್ ಏರಿಯಾ, ಡಿಸಿ ಆಫೀಸ್ ಹತ್ತಿರ, ದಾವಣಗೆರೆ.
- ಶ್ರೀ ಸಾಯಿ ಗಾರ್ಮೆಂಟ್ಸ್, ಸಿದ್ದ ಉಡುಪುಗಳ ತಯಾರಕರು, ಭಾನುವಳ್ಳಿ.
- ದಾವಣಗೆರೆ ಜಿಲ್ಲಾ ವೀರಶೈವ ಲಿಂಗಾಯಿತ ಪಂಚಮಸಾಲಿ ಯುವ ಘಟಕದ ಪದಾಧಿಕಾರಿಗಳು
- ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ
- ಫಾರ್ಚ್ಯೂನ್ ಗೆಳೆಯರ ಬಳಗ, ಪಿ.ಜೆ. ಬಡಾವಣೆ, ದಾವಣಗೆರೆ.
- ಎಲ್. ಡಿ. ಬ್ರದರ್ಸ್ ವಕೀಲರ ಸಮೂಹ
- ಕಾಮನಬಿಲ್ಲು ಗೆಳೆಯರ ಬಳಗ
- ದಾವಣಗೆರೆ ಟೆಕ್ಸ್‌ಟೈಲ್ಸ್ ಮಾನ್ಯೂಫಾಕ್ಚರ್ ಗ್ರೂಪ್


# ನಗರದ ಬಾಲಶನೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಇಂದು ಶನಿದೇವರ ಕಥಾ ಪಾರಾಯಣ



ಎಪಿಎಂಸಿಯ ಜಾನುವಾರು ಮಾರುಕಟ್ಟೆ ಹತ್ತಿರದಲ್ಲಿರುವ ಶ್ರೀ ಗುರು ಬಾಲ ಶನೇಶ್ವರ ಸ್ವಾಮಿ ಮಹಾಕ್ಷೇತ್ರ ಶ್ರೀ ಸಚ್ಚಿದಾನಂದ ಸ್ವರೂಪಿ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಇಂದು ಬೆಳಿಗ್ಗೆ 5.30ರಿಂದ ಶ್ರೀ ಸ್ವಾಮಿಗೆ ಪಂಚಾಮೃತ ಅಭಿಷೇಕ, ಬೆಳಿಗ್ಗೆ 10ರಿಂದ ಶ್ರೀ ಶನಿದೇವರ ಕಥಾ ಪಾರಾಯಣ ನಡೆಯಲಿದೆ. ಮಧ್ಯಾಹ್ನ 1 ಕ್ಕೆ ಸ್ವಾಮಿಯ ಮಹಾಪ್ರಸಾದವಿರುತ್ತದೆ.

ಶ್ರೀ ರಂಗನಾಥಸ್ವಾಮಿ ಭಜನಾ ಮಂಡಳಿ, ಭದ್ರಾವತಿ, ನಾಗೇಶ್ ಮತ್ತು ತಂಡದಿಂದ ಕಾರ್ಯಕ್ರಮ ನಡೆಯಲಿದೆ.


RHR

ಆತ್ಮೀಯ ಶೇರುದಾರರೇ,

ಆರ್ ಹೆಚ್ ಆರ್ ನಿಧಿ ಲಿಮಿಟೆಡ್ ಸಂಸ್ಥೆಗೆ, ದಿನಾಂಕ 02.09.2023 ಮಧ್ಯಾಹ್ನ 2 ಗಂಟೆಯಿಂದ 03.09.2023ರ ಮಧ್ಯಾಹ್ನ 3.30 ರವರೆಗೆ ರಜೆ ಇರುತ್ತದೆ. ಸಂಸ್ಥೆಯು, ಸೆಪ್ಟೆಂಬರ್ 03, 2023 ರ ಮಧ್ಯಾಹ್ನ 3.30 ರಿಂದ ಎಂದಿನಂತೆ ಕಾರ್ಯ ನಿರ್ವಹಿಸುತ್ತದೆ. ದಯವಿಟ್ಟು ಸಹಕರಿಸಬೇಕಾಗಿ ವಿನಂತಿ.

RHR NIDHI LIMITED
#3, Vijayalakshmi Road, Davanagere.
63611 75617 | 63640 02182


# ಜಾತಿ ನಿಂದನೆ ಕಾಯ್ದೆ ರಾಜ್ಯಕ್ಕೆ ಸೀಮಿತವಲ್ಲ

ಮುಂಬೈ, ಸೆ. 1 – ಜಾತಿ ನಿಂದನೆ ಕಾಯ್ದೆಯು ಆಯಾ ವ್ಯಕ್ತಿಯ ರಾಜ್ಯಕ್ಕೆ ಮಾತ್ರ ಸೀಮಿತವಲ್ಲ ಎಂದು ಬಾಂಬೆ ಹೈಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ದೆರೆ, ಭಾರತಿ ಡಾಂಗ್ರೆ ಹಾಗೂ ಎಸ್.ಜೆ. ಜಾಮದಾರ್ ಅವರನ್ನು ಒಳಗೊಂಡ ಪೂರ್ಣ ಪೀಠ ಈ ತೀರ್ಪು ನೀಡಿದೆ. ಒಬ್ಬ ವ್ಯಕ್ತಿ ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿರುವುದಾಗಿ ಒಂದು ರಾಜ್ಯದಲ್ಲಿ ಗುರುತಿಸಿದ ನಂತರ, ಅವರು ಯಾವುದೇ ರಾಜ್ಯದಲ್ಲಿದ್ದರೂ ಈ ಕಾಯ್ದೆಯಡಿ ರಕ್ಷಣೆ ಇದೆ ಎಂದು ನ್ಯಾಯಾಲಯ ಹೇಳಿದೆ.

# ಆದಿತ್ಯ ಎಲ್1ನಿಂದ ದಿನಕ್ಕೆ 1,440 ಚಿತ್ರ

ಬೆಂಗಳೂರು, ಸೆ. 1 – ಸೂರ್ಯಯಾನವಾದ ಆದಿತ್ಯ ಎಲ್1 ಗಗನನೌಕೆಯಲ್ಲಿರುವ ವಿ.ಇ.ಎಲ್.ಸಿ. ಉಪಕರಣವು ಪ್ರತಿದಿನ 1,440 ಚಿತ್ರಗಳನ್ನು ಇಸ್ರೋ ಕೇಂದ್ರಕ್ಕೆ ರವಾನಿಸಲಿದೆ.

ವಿಸಿಬಲ್ ಎಮಿಷನ್ ಲೈನ್ ಕೊರೊನೊಗ್ರಾಫ್ (ವಿ.ಇ.ಎಲ್.ಸಿ.) ಆದಿತ್ಯ ಎಲ್1 ಗಗನನೌಕೆಯಲ್ಲಿರುವ ಅತಿ ದೊಡ್ಡ ಉಪಕರಣವಾಗಿದೆ. ಆದಿತ್ಯ ಎಲ್1 ಅನ್ನು ನಾಳೆ ಬೆಳಿಗ್ಗೆ 11.50ಕ್ಕೆ ಉಡಾವಣೆ ಮಾಡಲಾಗುವುದು. ಇದರಲ್ಲಿ ಒಟ್ಟು 7 ಉಪಕರಣಗಳಿವೆ. ಇವುಗಳ ಮೂಲಕ ಸೂರ್ಯನ ಅಧ್ಯಯನ ಮಾಡಲಾಗುವುದು.

# ಎನ್‌ಸಿಇಆರ್‌ಟಿಗೆ ಡೀಮ್ಡ್ ವಿವಿ ಸ್ಥಾನ

ನವದೆಹಲಿ, ಸೆ. 1 – ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಹಾಗೂ ತರಬೇತಿ ಮಂಡಳಿ (ಎನ್.ಸಿ.ಇ.ಆರ್.ಟಿ.)ಗೆ ಡೀಮ್ಡ್ ವಿಶ್ವವಿದ್ಯಾಲಯ ಸ್ಥಾನ ನೀಡಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಮಂಡಳಿಯ 63ನೇ ಸ್ಥಾಪನಾ ದಿನದಂದು ಸಚಿವರು ಈ ಘೋಷಣೆ ಮಾಡಿದ್ದಾರೆ. ಎನ್.ಸಿ.ಇ.ಆರ್.ಟಿ. ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ಸಂಶೋಧನೆ, ಅನ್ವೇಷಣೆ, ಪಠ್ಯ ರೂಪಿಸುವುದು ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ.


ಶ್ರೀ ಕಲ್ಪತರು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.
# 1675/ಜಿ2ಎಫ್1, ಕೆಟಿಜೆ ನಗರ ಪೋಲೀಸ್ ಠಾಣೆ ರಸ್ತೆ, ನಿಟುವಳ್ಳಿ ಮೇನ್ ರೋಡ್, ಲೆನಿನ್ ನಗರ, ದಾವಣಗೆರೆ. ಮೊ: 9845794339

2022-23ನೇ ಸಾಲಿನ 24ನೇ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಸಂಘವು 2022-23ನೇ ಸಾಲಿನ 24ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 02.09.2023ರ ಶನಿವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ನಗರದ ನಿಟ್ಟುವಳ್ಳಿ ರಸ್ತೆಯ ಆದರ್ಶ ಶಾಲೆಯ ಎದುರುಗಡೆ ಕಲ್ಪತರು ಮಿನಿ ಸಮುದಾಯ ಭವನದಲ್ಲಿ ಶ್ರೀ ಡಿ.ಎನ್.ಜಗದೀಶ್ ಇವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಪದಾಧಿಕಾರಿಗಳು



ಶ್ರೀ ಡಿ.ಎನ್.ಜಗದೀಶ್ ಅಧ್ಯಕ್ಷರು
ಶ್ರೀ ಬಿ.ಗೋಪಿನಾಥ್ ಉಪಾಧ್ಯಕ್ಷರು
ಶ್ರೀ ತಿಮ್ಮಯ್ಯ ನಿರ್ದೇಶಕರು
ಶ್ರೀ ಬಿ.ಎಸ್.ಮಲ್ಲೇಶ್ ನಿರ್ದೇಶಕರು
ಶ್ರೀಮತಿ ಕಮಲಮ್ಮ ಭೈರಪ್ಪ ನಿರ್ದೇಶಕರು
ಶ್ರೀ ನಾಗರಾಜ್ ಎಸ್ ನಿರ್ದೇಶಕರು
ಶ್ರೀ ಸಿ.ಸಿಂಗೇಶ್ ನಿರ್ದೇಶಕರು
ಶ್ರೀಮತಿ ಎಸ್.ಸುಧಾ ನಿರ್ದೇಶಕರು
ಶ್ರೀ ಶ್ರೀನಿವಾಸ ಡಿ.ಆರ್. ಮುಖ್ಯ ಕಾರ್ಯನಿರ್ವಾಹಕರು

2022-23ನೇ ಸಾಲಿನ ಸಂಘದ ಆರ್ಥಿಕ ಪ್ರಗತಿ ಪಕ್ಷಿನೋಟ

| | | |
|---|---|---|
| 1 | ಸದಸ್ಯರುಗಳು | 1551 |
| 2 | ಷೇರು ಬಂಡವಾಳ | 47,88,500-00 |
| 3 | ಕಾಯ್ದಿಟ್ಟ ಮತ್ತು ಇತರೆ ನಿಧಿಗಳು | 1,64,31,851-40 |
| 4 | ಠೇವಣಿಗಳು | 3,32,57,237-16 |
| 5 | ದುಡಿಯುವ ಬಂಡವಾಳ | 5,97,38,846-16 |
| 6 | ನೀಡಿರುವ ಸಾಲಗಳು | 4,39,86,743-00 |
| 7 | ನಿವ್ವಳ ಲಾಭ | 25,35,630-60 |
| 8 | ಲಾಭಾಂಶ ನೀಡಿಕೆ | ಶೇ.10 (ಸೂಚಿತ) |
| 9 | ಆಡಿಟ್ ಶ್ರೇಣಿ | " ಎ " |

ಆಡಳಿತ ಮಂಡಳಿಯ ಪರವಾಗಿ ಸಹಿ/- ಶ್ರೀ ಶ್ರೀನಿವಾಸ ಡಿ.ಆರ್. B.Com., M.B.A. ಮುಖ್ಯ ಕಾರ್ಯನಿರ್ವಾಹಕರು.

ಸೂಚನೆ :- ಮಹಾ ಸಭೆಗೆ ಸದಸ್ಯರು ಆಗಮಿಸುವಾಗ ಆಹ್ವಾನ ಪತ್ರಿಕೆಯನ್ನು ಹಾಗೂ ಸದಸ್ಯರಿಗೆ ನೀಡಿರುವ ಗುರುತಿನ ಚೀಟಿಯನ್ನು ತಪ್ಪದೇ ತರಬೇಕಾಗಿ ವಿನಂತಿ.



ಇಂದಿನಿಂದ ಶುಭಾರಂಭ

Branded Readymade Garments Biggest Discount Sale

ಪ್ರತಿಷ್ಠಿತ ಕುಟುಂಬದೊಳಗಿನ ವೈಷಮ್ಯದಿಂದಾಗಿ 7 ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಶೋರೂಂಗಳು ಮುಚ್ಚಿರುವ ಕಾರಣದಿಂದಾಗಿ ಆ ರೆಡಿಮೇಡ್ ಉಡುಪುಗಳನ್ನು ದಾವಣಗೆರೆಯಲ್ಲಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲು ನಿರ್ಧರಿಸಲಾಗಿದೆ ಮತ್ತು 3 ದಿನಗಳಲ್ಲಿ ಸರಕನ್ನು ಮಾರಾಟ ಮಾಡಲಾಗುವುದು. ದಾವಣಗೆರೆ ಜನತೆಯು ಈ ಸುವರ್ಣ ಅವಕಾಶದ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

@ ರೇಣುಕಾ ಮಂದಿರ, ಪಿ.ಬಿ. ರಸ್ತೆ, ರೈಲ್ವೆ ನಿಲ್ದಾಣದ ಹತ್ತಿರ, ದಾವಣಗೆರೆ.

WHAT WILL HAPPEN TODAY HAS NEVER HAPPENED BEFORE...

The High Value Range of Jeans
Today Rs. 250/-, Shirt Now Rs. 250/-

Ladies, Gents, Kids Wear and Bed Sheets
Sincere Request : Please visit once even if you don't buy anything!!!

10,000 Fancy Cotton Kurthis, Ladies Stretchable Jeans Pant, Western Tops & Paijamas

15,000 Cotton Pants, Shirts, T-Shirts Shorts, Lower, Stretchable Jeans etc.

10,000 ವಿವಿಧ ಪ್ರಕಾರದ ಜೆಂಟ್ಸ್, ಲೇಡೀಸ್ ಮತ್ತು ಕಿಡ್ಸ್ ಪ್ಯಾಂಟ್ ಟೀ-ಶರ್ಟ್, ಲೋವರ್, ಟಾಪ್ಸ್, ಬರ್ಮುಡಾ, ಕಾಪ್ರಿ, ಪ್ಲಾಜೊ ಇತ್ಯಾದಿ.
Just Rs. 150/- to 350/-

Indian Terrain, Indigo Nation, Daniel Hechter, Bare, IZOD, Highlander, Scullers, Jack & Jones, Vero Moda, abof, Only

GENTS PREMIUM GARMENTS
Worth MRP: Rs. 1499/- to 4999/- Choose 30,000 varieties of Jeans Pant, Cotton Pant, Formal, Shirts, T-Shirts, Lower etc.
Just Rs. 499/- to 999/-

LADIES PREMIUM GARMENTS
MRP: Upto Rs. 3999/- Choose 20,000 Plazos, Pants, Kurtis & Western Outfits etc.
Just Rs. 200/-, 400/-, 600/-
*Offer till stocks lasts *Conditions apply

BIG OFFER: Rajasthani Royal Printed Bedsheets, Pillow Cover, Sofa Cover etc.

ಸೇಲ್ 3 ದಿನಗಳು ಮಾತ್ರ 2 ಶನಿ, 3 ಭಾನು, 4 ಸೋಮ ಸೆಪ್ಟಂಬರ್ 2023

ರೇಣುಕಾ ಮಂದಿರ
RENUKA MANDIRA (FULL AC HALL)
P.B. Road, Near Railway Station Davangere - 577 002.

FREE PARKING ENTRANCE All major Debit / Credit Cards, Google Pay, PhonePe Accepted.



Furniture EXCHANGE Mela

RICHTON FURNITURES LIVE THE LUXURY



02.09.2023 TO 30.09.2023

RICHTON Furniture

SS Layout, "B" Block, Ring Road, Opp Sharadamba Temple DAVANGERE.
Mobile : 7676181096, 6360070122